
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 22
ರೂ. 2.00
28 ಮೇ 1995



ಕಾಶ್ಮೀರ: ಅರ್ಥಪೂರ್ಣ ರಾಜಕೀಯ ಕ್ರಮಗಳಿಲ್ಲದೆ ಚುನಾವಣೆ ಸಲ್ಲದು

-ಸಿಪಿಐ(ಎಂ) ಪೊಲಿಟ್ ಬ್ಯೂರೋ

ಕಾಶ್ಮೀರಿ ಜನತೆಗೆ ಗರಿಷ್ಠ ಸ್ವಾಯತ್ತತೆ ಕೊಡುವಂತಹ ಹಾಗೂ ಅವರ ಸ್ವಂತಿಕೆಯನ್ನು ರಕ್ಷಿಸುವಂತಹ ಅರ್ಥಪೂರ್ಣ ರಾಜಕೀಯ ಮುತುವರ್ಜಿ ವಹಿಸದೆ ನರಸಿಂಹ ರಾವ್ ಸರಕಾರ ಅಲ್ಲಿ ಚುನಾವಣೆಗಳನ್ನು ನಡೆಸಿಯೇ ತೀರುತ್ತೇನೆಂದರೆ ಅವಿವೇಕತನವಾಗುತ್ತದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಮೇ 15 ಹಾಗೂ 16 ರಂದು ನವದೆಹಲಿಯಲ್ಲಿ ಸಭೆ ಸೇರಿದ ಪೊಲಿಟ್ ಬ್ಯೂರೋ 15ನೇ ಮಹಾಧಿವೇಶನದ ನಂತರದ ರಾಜಕೀಯ ಬೆಳವಣಿಗೆಗಳ ವಿಮರ್ಶೆ ನಡೆಸಿದ ನಂತರ ನೀಡಿದ ಪತ್ರಿಕಾ ಹೇಳಿಕೆಯಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಚರಾರ್-ಎ-ಷರೀಫ್ ದರ್ಗಾ ಸುಟ್ಟು ಹಾಕಿದ್ದನ್ನು ಬಲವಾಗಿ ಖಂಡಿಸಿರುವ ಪೊಲಿಟ್ ಬ್ಯೂರೋ ಆರು ತಿಂಗಳಿಂದ ಸಶಸ್ತ್ರ ಉಗ್ರಗಾಮಿಗಳು ದರ್ಗಾವನ್ನು ಆಕ್ರಮಿಸಿಕೊಂಡಿದ್ದರೂ, ಎರಡು ತಿಂಗಳಿಂದ ಭದ್ರತಾ ಪಡೆಗಳನ್ನು ಸಜ್ಜಾಗಿಟ್ಟಿದ್ದರೂ ಕೇಂದ್ರ ಸರ್ಕಾರ ಹಾಗೂ ರಾಜ್ಯ ಆಡಳಿತ ಪಾಕಿಸ್ತಾನೀ ಬೆಂಬಲಿತ ಉಗ್ರಗಾಮಿಗಳ ಯೋಜನೆಯನ್ನು ವಿಫಲಗೊಳಿಸುವಲ್ಲಿ ಶೋಚನೀಯವಾಗಿ ಸೋತಿವೆ ಎಂದು ಟೀಕಿಸಿದೆ. ರಾಜ್ಯಪಾಲರನ್ನು ಬದಲಿಸಿ ಒಂದು ಪರಿಣಾಮಕಾರಿ ಆಡಳಿತ ಯಂತ್ರ ತಂದಿಟ್ಟು ರಾಜಕೀಯ ಪ್ರಕ್ರಿಯೆಯನ್ನು ಬಲಗೊಳಿಸಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ.

ಜುಲೈ ಮಧ್ಯದೊಳಗೆ ಚುನಾವಣೆ ನಡೆದರೆ ಜನಗಳು ಅದರಲ್ಲಿ ಭಾಗವಹಿಸದೆ ಅದು ಕೇವಲ ತಮಾಷೆಯಾಗಿ ಬಿಡಬಹುದು ಎಂದು ಕಾಶ್ಮೀರಿ ಕಣಿವೆಯ ಎಲ್ಲಾ ರಾಜಕೀಯ ಶಕ್ತಿಗಳು ಹಾಗೂ ಪ್ರಮುಖ ರಾಷ್ಟ್ರೀಯ ಪಕ್ಷಗಳು ಸ್ಪಷ್ಟವಾಗಿ ಹೇಳಿದ್ದರೂ ನರಸಿಂಹರಾವ್ ಸರಕಾರ ಚುನಾವಣೆ ನಡೆಸಿಯೇ ತೀರುವುದಾಗಿ ಒತ್ತಿ ಹೇಳಿರುವುದರ ಬಗ್ಗೆ ಪಿ.ಬಿ. ಖೇದ ವ್ಯಕ್ತಪಡಿಸಿದೆ. ಸಂವಿಧಾನದ ಚೌಕಟ್ಟಿನೊಳಗೆ ಗರಿಷ್ಠ ಸ್ವಾಯತ್ತತೆ ನೀಡಲು ಸರಕಾರ ಸಿದ್ಧವೆಂದು ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇದು ಸರಿಯಾದ ನಿರ್ಣಯವನ್ನು ಎಂದಿರುವ ಪೊಲಿಟ್ ಬ್ಯೂರೋ ಅಗತ್ಯ ರಾಜಕೀಯ ಸಿದ್ಧತೆಗಳಿಲ್ಲದೆ ಚುನಾವಣೆಯನ್ನು ನಡೆಸಲು ತನ್ನ ವಿರೋಧವಿದೆ ಎಂದು ಮತ್ತೊಮ್ಮೆ ಒತ್ತಿ ಹೇಳಿದೆ. ಏಕೆಂದರೆ ಇದರಿಂದ ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸ ಬಯಸುವ ಪಾಕಿಸ್ತಾನ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ನೆರವಾದಂತಾಗುದಷ್ಟೇ ಎಂದು ಪಿ.ಬಿ. ಹೇಳಿದೆ.

ಪೇಟೆಂಟ್ ತಿದ್ದುಪಡಿ ಹಿಂತೆಗೆದುಕೊಳ್ಳಲೇಬೇಕು.

ದೇಶದ ಸ್ವದೇಶೀ ವೈಜ್ಞಾನಿಕ ಹಾಗೂ ತಾಂತ್ರಿಕ ಆಧಾರಕ್ಕೆ ಧಕ್ಕೆ ತರಲಿರುವ ಪೇಟೆಂಟ್ ತಿದ್ದುಪಡಿ ಮಸೂದೆಯನ್ನು 'ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರೂ ರಾಜ್ಯ ಸಭೆಯಲ್ಲಿ ಅದನ್ನು ಪಾಸು ಮಾಡಿಸಿಕೊಳ್ಳಲು ಸರಕಾರ ಯತ್ನಿಸುತ್ತಿದೆ. ರಾಜ್ಯ ಸಭೆಯಲ್ಲಿ ಪ್ರತಿಪಕ್ಷಗಳು ಒಟ್ಟಾಗಿ ಈ ಮಸೂದೆ ಪಾಸಾಗದಂತೆ ತಡೆಯಲು ನಡೆಸಿರುವ ಪ್ರಯತ್ನವನ್ನು ಪಿ.ಬಿ. ಅನುಮೋದಿಸುತ್ತಾ ಎಲ್ಲಾ ಜನವಿಭಾಗಗಳು ಈ ದುಷ್ಟ ಮಸೂದೆಯನ್ನು ಹಿಂತೆಗೆದುಕೊಳ್ಳುವಂತೆ ಸರಕಾರವನ್ನು ಒತ್ತಾಯಿಸಬೇಕು ಎಂದು ಕರೆ ನೀಡಿದೆ.

ಆರ್ಥಿಕ ರಂಗದಲ್ಲಿ ಸರಕಾರದ ದಾಖಲೆಯನ್ನು ಹಣಕಾಸು ಮಂತ್ರಿಗಳು ಕಾಂಗ್ರೆಸ್(ಐ) ಸಂಸದೀಯ ಪಕ್ಷದ ಸಭೆಯಲ್ಲಿ ಸಮರ್ಥಿಸಿಕೊಂಡು ನೀಡಿರುವ ವಿವರಣೆ ಕೇವಲ ವಂಚನೆಯ ಕಸರತ್ತು ಎಂದಿರುವ ಪೊಲಿಟ್ ಬ್ಯೂರೋ ಸಾರ್ವಜನಿಕ ವಲಯದ ಘಟಕಗಳ ಶೇರುಗಳನ್ನು ಮಾರಾಟದಿಂದ ಬಂದ ಹಣವನ್ನು ಬಜೆಟಿನ ಕೊರತೆ ತುಂಬಿಸಲು ಬಳಸಲಾಗಿದೆ, ಹಣದುಬ್ಬರವನ್ನು ತಡೆಹಿಡಿಯಲಾಗಿದೆ ಎಂಬುದು ಶುದ್ಧ ಸುಳ್ಳು ಹಾಗೂ ದೇಶಕ್ಕೆ ಅತ್ಯಂತ ಪ್ರತಿಕೂಲವಾದ ಶರತ್ತುಗಳ ಮೇಲೆ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ಆರ್ಥಿಕದ ಪ್ರಧಾನ ವಲಯಗಳನ್ನು ತೆರೆದಿಡಲಾಗುತ್ತಿದೆ ಎಂದು ಆಪಾದಿಸಿದೆ.

ಎನ್ರೋನ್ ಒಪ್ಪಂದ ರದ್ದು ಮಾಡಿ

ಎನ್ರೋನ್ ಯೋಜನೆಯ ಪುನರ್ವಿಮರ್ಶೆ ಮಾಡುತ್ತಿರುವ ಮಹಾರಾಷ್ಟ್ರ ಸರಕಾರ ಈಗಾಗಲೇ ವ್ಯಾಪಕವಾಗಿ ವ್ಯಕ್ತವಾಗಿರುವ. ಪರಿಣತರ ಅಭಿಪ್ರಾಯವನ್ನು ಗಮನಕ್ಕೆ ತೆಗೆದುಕೊಂಡು ಈ ಒಪ್ಪಂದವನ್ನು ರದ್ದು ಮಾಡಬೇಕು ಎಂದು ಪೊಲಿಟ್ ಬ್ಯೂರೋ ಒತ್ತಾಯಿಸಿದೆ. ವಿದೇಶೀ ಕಂಪೆನಿಗಳಿಗೆ ಅನಗತ್ಯವಾಗಿ ವಿಪರೀತ ಲಾಭದ ದರ ಒದಗಿಸಿ ಬಳಕೆದಾರರಿಗೆ ಹೆಚ್ಚು ಬೆಲೆ ವಿಧಿಸುವ ಇಂತಹ ಎಲ್ಲಾ ಒಪ್ಪಂದಗಳನ್ನು ರದ್ದು ಮಾಡಬೇಕು ಎಂದೂ ಪಿ.ಬಿ. ಒತ್ತಾಯಿಸಿದೆ. ವಿದ್ಯುಚ್ಛಕ್ತಿ ಹಾಗೂ ದೂರಸಂಪರ್ಕ ವಲಯಗಳನ್ನು ತೆರೆದಿಡುವ ಬಗ್ಗೆ ಹೊಸ ಚರ್ಚೆ ನಡೆಯಬೇಕು, ಕೇಂದ್ರ ಸರಕಾರ ತನ್ನ ನೀತಿಗಳ ಪುನರ್ವಿಮರ್ಶೆ ನಡೆಸಬೇಕು ಎಂದೂ ಪಿ.ಬಿ. ಆಗ್ರಹಪಡಿಸಿದೆ. ಭಾರತದಲ್ಲಿ ವಿದೇಶೀ ವಿಮಾ ಕಂಪೆನಿಗಳಿಗೆ ಅವಕಾಶ ನೀಡಬಾರದೆಂದು ಎಚ್ಚರಿಸಿರುವ ಪೊಲಿಟ್ ಬ್ಯೂರೋ ವಿಮಾ ವಲಯವನ್ನು ಖಾಸಗೀಕರಿಸುವುದಿಲ್ಲ ಎಂದು ಸ್ಪಷ್ಟ ಭರವಸೆ ನೀಡಬೇಕೆಂದು ಸರಕಾರವನ್ನು ಒತ್ತಾಯಿಸಿದೆ. 200 ವಿದೇಶೀ ಕಂಪೆನಿಗಳಿಗೆ ಭಾರತದಲ್ಲಿ ಆಳ ಸಮುದ್ರ ಮೀನುಗಾರಿಕೆ ಮಾಡಲು ಲೈಸೆನ್ಸ್ ನೀಡಿರುವುದನ್ನು ರದ್ದು ಮಾಡಬೇಕೆಂಬ ಮೀನುಗಾರರ ಒತ್ತಾಯವನ್ನು ಬೆಂಬಲಿಸುತ್ತಾ ಪೊಲಿಟ್ ಬ್ಯೂರೋ ಲಕ್ಷಾಂತರ ಮೀನುಗಾರರ ಜೀವನಕ್ಕೆ ಬೆದರಿಕೆಯೊಡ್ಡಿರುವ ಜತೆಗೆ ಪರಿಸರ ಸಮತೋಲನವನ್ನು ಕೆಡಿಸುವ ಈ ಕ್ರಮವನ್ನು ರದ್ದು ಪಡಿಸಬೇಕೆಂದು ಒತ್ತಾಯಿಸಿದೆ.

ಆಂದೋಲನ ತೀವ್ರಗೊಳ್ಳಲಿ

ರಾವ್ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಆಂದೋಲನವನ್ನು ತೀವ್ರಗೊಳಿಸಬೇಕಾದುದರ ಮಹತ್ವವನ್ನು ಒತ್ತಿ ಹೇಳಿರುವ ಪೊಲಿಟ್ ಬ್ಯೂರೋ ಈ ಹೋರಾಟದಲ್ಲಿ ಎಲ್ಲಾ ಜನವಿಭಾಗಗಳನ್ನು ಒಗ್ಗೂಡಿಸಿ ಜನಗಳ ಅಸಂತೃಪ್ತಿಯನ್ನು ಕೋಮುವಾದಿ ದಿಕ್ಕಿನೆಡೆಗೊಯ್ಯುವ ಬಿಜೆಪಿ-ಶಿವಸೇನೆ ಪ್ರಯತ್ನಗಳನ್ನು ವಿಫಲಗೊಳಿಸಬಹುದು ಎಂದು ಅಭಿಪ್ರಾಯಪಟ್ಟಿದೆ. ಹೋರಾಟವನ್ನು ತೀವ್ರಗೊಳಿಸುವ ಬಗ್ಗೆ ಎಡಪಕ್ಷಗಳೊಂದಿಗೆ ಸಮಾಲೋಚನೆಗಳನ್ನು ನಡೆಸಲು ಸಿಪಿಐ(ಎಂ) ಪೊಲಿಟ್ ಬ್ಯೂರೋ ನಿರ್ಧರಿಸಿದೆ.

ಬದಲಿಸಬೇಕಾದ್ದು ಸಂಸದೀಯ ವ್ಯವಸ್ಥೆಯಲ್ಲ ಸರಕಾರದ ನೀತಿಗಳು

ಸಂಸದೀಯ ವ್ಯವಸ್ಥೆಯನ್ನು ಬದಲಿಸಬೇಕು ಎಂಬ ಪ್ರಸ್ತಾವಗಳು ಕೆಲವು ಪ್ರಮುಖ ವ್ಯಕ್ತಿಗಳಿಂದ ಬರುತ್ತಿರುವ ಬಗ್ಗೆ ಪ್ರತಿಕ್ರಿಯಿಸುತ್ತಾ ಇವು ಸಂವಿಧಾನದಲ್ಲಿರುವ ಪಕ್ಷ ಆಧಾರಿತ ಸಂಸದೀಯ ಪ್ರಜಾಸತ್ತೆಗೆ ಬಾಧಕ ತರುವ ಪ್ರಸ್ತಾವಗಳು ಎಂದು ಪಿ.ಬಿ. ಹೇಳಿದೆ. ಈ ಪ್ರಸ್ತಾವಗಳು ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಅಧಿಕಾರ ಕಳಕೊಳ್ಳುವ ಬಗ್ಗೆ ಆತಂಕವನ್ನು ಪ್ರತಿಬಿಂಬಿಸುವಂತವು, ತಮ್ಮ ಹಿತಾಸಕ್ತಿಗಳಿಗನುಗುಣವಾದ ನೀತಿಗಳನ್ನು ಮುಂದುವರೆಸಲು ಅಗತ್ಯವಾದ ಸ್ಥಿರತೆ ಇಲ್ಲದಾಗಬಹುದು ಎಂಬ ಆಳುವ ವರ್ಗಗಳ ಆತಂಕವನ್ನು ಪ್ರತಿಬಿಂಬಿಸುವಂತವು ಎಂದು ಪಿ.ಬಿ. ವಿಶ್ಲೇಷಿಸಿದೆ. ಈಗ ಬೇಕಾದದ್ದು ಜನಗಳ ಹಿತಾಸಕ್ತಿಗಳನ್ನು ರಕ್ಷಿಸುವಂತೆ ಸಂಸದೀಯ ಪ್ರಜಾಪ್ರಭುತ್ವವನ್ನು ಬಲಪಡಿಸುವ ಚುನಾವಣಾ ಸುಧಾರಣೆಗಳು; ಬದಲಾಗಬೇಕಿರುವುದು ಸಂಸದೀಯ ವ್ಯವಸ್ಥೆಯಲ್ಲ, ಕೇಂದ್ರದ ಮೂಲಭೂತ ನೀತಿಗಳು ಬದಲಾಗಬೇಕಿವೆ ಎಂದು ಪಿ.ಬಿ. ಸ್ಪಷ್ಟವಾಗಿ ಹೇಳಿದೆ.

ಕಾಂಗ್ರೆಸ್(ಐ) ಬಿಕ್ಕಟ್ಟು

ಕಾಂಗ್ರೆಸ್(ಐ) ನೊಳಗೆ ಭಿನ್ನಾಭಿಪ್ರಾಯಗಳು ತೀವ್ರಗೊಂಡಿವೆ. ಪಕ್ಷದೊಳಗೆ ವಿಧಾನಸಭಾ ಚುನಾವಣೆಗಳಲ್ಲಿ ಸೋಲು, ಆರ್ಥಿಕ ನೀತಿಗಳು, ಹಾಗೂ ಕೋಮುವಾದದ ಬಗ್ಗೆ ನಿಲುವು ಹಾಗೂ ಭ್ರಷ್ಟಾಚಾರ ತೀವ್ರ ಚರ್ಚೆಗೊಳಗಾಗಿವೆ. ಆದರೂ ಇತ್ತೀಚೆಗೆ ಕಾಂಗ್ರೆಸ್(ಐ) ಕಾರ್ಯಕಾರಿ ಸಮಿತಿ ಈ ಬಗ್ಗೆ ಚರ್ಚೆಯನ್ನು ತಪ್ಪಿಸಿ ಕೇವಲ ಶಿಸ್ತಿನ ಬಗ್ಗೆ ಈಗ ಆಲಾಪಿಸಿದೆ. ಇದು ಕಾಂಗ್ರೆಸ್(ಐ) ಪಕ್ಷದ ವಿಭಜನೆಗೆ ಹಾದಿ ಮಾಡಿಕೊಡುವ ನಿಲುವು ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ತ್ರಿಪುರಾಕ್ಕೆ ಅನ್ಯಾಯ

ತ್ರಿಪುರಾದ ಬುಡಕಟ್ಟು ಪ್ರದೇಶಗಳಲ್ಲಿ ತೀವ್ರ ಬರದ ಸ್ಥಿತಿಯಿದ್ದು ಅಲ್ಲಿ ಕುಡಿಯುವ ನೀರಿನ ಅಭಾವದಿಂದ ಕರುಳು ಬೇನೆ ಹರಡಿದೆ. ಕೇಂದ್ರ ಸರ್ಕಾರ ಸಾಕಷ್ಟು ಆಹಾರಧಾನ್ಯ ದಾಸ್ತಾನು ಒದಗಿಸಬೇಕು ಎಂಬ ರಾಜ್ಯ ಸರಕಾರದ ಮನವಿಗೆ ಕಿವಿಗೊಟ್ಟಿಲ್ಲ. ತಕ್ಷಣ ಈ ನೈಸರ್ಗಿಕ ಅನಾಹುತವನ್ನು ಎದುರಿಸಲು ರಾಜ್ಯ ಸರಕಾರಕ್ಕೆ ನೆರವಾಗಬೇಕು ಎಂದು ಪೊಲಿಟ್ ಬ್ಯೂರೋ ಕೇಂದ್ರ ಸರಕಾರವನ್ನು ಒತ್ತಾಯಿಸಿದೆ. ಉಗ್ರಗಾಮಿಗಳನ್ನು ಎದುರಿಸುವಲ್ಲಿಯೂ ರಾಜ್ಯ ಸರಕಾರಕ್ಕೆ ನೆರವು ನೀಡದೆ ಈ ಗಡಿ ರಾಜ್ಯದಲ್ಲಿ ಬುಡಕಟ್ಟು ಜನರು ಹಾಗೂ ಇತರರ ನಡುವಿನ ಒಗ್ಗಟ್ಟನ್ನು, ಆ ಮೂಲಕ ದೇಶದ ಒಗ್ಗಟ್ಟನ್ನು ರಕ್ಷಿಸುವ ರಾಜ್ಯ ಸರಕಾರದ ನೀತಿಬದ್ಧ ನಿಲುವಿಗೆ ಅಡ್ಡಿಯುಂಟು ಮಾಡುತ್ತಿದೆ ಎಂದೂ ಪಿ.ಬಿ. ಆಪಾದಿಸಿದೆ.

ಶ್ರೀಲಂಕಾ ದುರದೃಷ್ಟಕಾರೀ ಬೆಳವಣಿಗೆ

ಸಿಂಹಳೀ ಹಾಗೂ ತಮಿಳು ಜನಗಳ ಆಕಾಂಕ್ಷೆಗಳಿಗನುಸಾರವಾಗಿ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗಾ ರವರು ಶಾಂತಿ ಪ್ರಯತ್ನ ನಡೆಸಿದರೂ ಎಲ್.ಟಿ.ಟಿ.ಇ.ಯ ಅತಾರ್ಕಿಕ ಹಾಗೂ ಛಿದ್ರಕಾರಿ ನಿಲುವಿನಿಂದಾಗಿ ಅದು ಮಾತುಕತೆಗಳು ಮುರಿದುಬಿದ್ದಿವೆ. ಇದು ದುರದೃಷ್ಟಕಾರಿ ಬೆಳವಣಿಗೆ ಎಂದಿರುವ ಪೊಲಿಟ್‌ಬ್ಯೂರೋ ಎಲ್.ಟಿ.ಟಿ.ಇ. ಯಿಂದಾಗಿ ಉಂಟಾಗಿರುವ ಅಂತರ್ಯುದ್ಧದ ಪರಿಸ್ಥಿತಿ ಸಾಮ್ರಾಜ್ಯಶಾಹಿಗಳಿಗೆ ಶ್ರೀಲಂಕಾದ ವ್ಯವಹಾರಗಳಲ್ಲಿ ನೇರವಾಗಿ ತಲೆಹಾಕಲು ನೆರವಾಗುತ್ತದೆ ಎಂದು ಖೇದವ್ಯಕ್ತಪಡಿಸಿದೆ.


ರಾಜ್ಯಗಳ ಹಕ್ಕುಗಳ ಮೇಲೆ ಪ್ರಹಾರ

ಕೇಂದ್ರ ಸರಕಾರ ಆರಂಭಿಸಿರುವ ಆರು ಹೊಸ ಇಲಾಖೆಗಳು ಕೇಂದ್ರ ಯೋಜನೆಗಳನ್ನು ರಾಜ್ಯಗಳಲ್ಲಿ ಅನುಷ್ಠಾನಗೊಳಿಸುವುದಕ್ಕೆ ಸಂಬಂಧಪಟ್ಟವುಗಳು- ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ವಿಷಯವೂ ಇದರಲ್ಲೇ ಬರುತ್ತದೆ. ಅಲ್ಲದೆ ಕೇಂದ್ರದ ಯೋಜನೆಗಳನ್ನು ರಾಜ್ಯಗಳಿಗೆ ವರ್ಗಾಯಿಸಬೇಕೆಂಬ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಗುರಿಗಳಿಗೆ ಇದು ವಿರುದ್ಧವಾಗಿದೆ. ಇವು ರಾಜ್ಯಗಳ ವ್ಯಾಪ್ತಿಯಲ್ಲಿ ಬರುವ ವಿಷಯಗಳು. ಕೇಂದ್ರ ಸರಕಾರ ರಾಜ್ಯಗಳ ಹಕ್ಕುಗಳಲ್ಲಿ ಇನ್ನಷ್ಟು ಅತಿಕ್ರಮಣ ನಡೆಸಬಾರದು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿಕೆ ಒತ್ತಾಯಿಸಿದೆ.

ಟಾಡಾ ರದ್ದು ಮಾಡಿ

ಟಾಡಾ ಕಾನೂನನ್ನು ರದ್ದು ಮಾಡಬೇಕು ಅದರ ವ್ಯಾಪಕ ದುರುಪಯೋಗವಾಗಿರುವ ಅದರ ಮುಂದುವರಿಕೆ ಅಸಮರ್ಥನೀಯ. ಪಶ್ಚಿಮ ಬಂಗಾಳ, ತ್ರಿಪುರಾ ಹಾಗೂ ಇನ್ನು ಹಲವು ರಾಜ್ಯ ಸರಕಾರಗಳು ಅದನ್ನು ರದ್ದು ಮಾಡಬೇಕೆಂದು ಆಗ್ರಹಪಡಿಸಿರುವುದನ್ನು ಪೊಲಿಟ್ ಬ್ಯೂರೋ ಸರಕಾರದ ಗಮನಕ್ಕೆ ತಂದಿದೆ.

ವಾರದ ವ್ಯಂಗ ಚಿತ್ರ — ಟೈಂಸ್ ಆಫ್ ಇಂಡಿಯಾದಲ್ಲಿ ಆರ್.ಕೆ. ಲಕ್ಷ್ಮಣ್



ಬಹುಪತ್ನಿತ್ವಕ್ಕಾಗಿ ಮತಾಂತರದ ಬಗ್ಗೆ ಸುಪ್ರೀಂ ಕೋರ್ಟ್

ತೀರ್ಪು ಸರಿಯಾದ ದಿಕ್ಕಿನಲ್ಲಿದೆ

-ಸಿಪಿಐ(ಎಂ) ಪೊಲಿಟ್ ಬ್ಯೂರೋ

ಮತಾಂತರ ನಂತರ ತಮ್ಮನ್ನು ತ್ಯಜಿಸಿದ ಗಂಡಂದಿರ ವರ್ತನೆಯ ವಿರುದ್ಧ ನಾಲ್ಕು ಹಿಂದೂ ಮಹಿಳೆಯರು ಹೂಡಿದ್ದ ಮೊಕದ್ದಮೆಯ ಮೇಲೆ ದೇಶದ ಸರ್ವೋಚ್ಛ ನ್ಯಾಯಾಲಯ ಇತ್ತೀಚೆಗೆ ನೀಡಿದ ತೀರ್ಪು ಸರಿಯಾದ ದಿಕ್ಕಿನಲ್ಲಿರುವ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

"ಒಬ್ಬ ಹಿಂದೂ ಗಂಡ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಎರಡನೇ ಮದುವೆಯಾಗುವುದು ನ್ಯಾಯದ, ಸಮಾನತೆಯ ಹಾಗೂ ಒಳ್ಳೆಯ ಮನಸ್ಸಾಕ್ಷಿಯ ಉಲ್ಲಂಘನೆ. ಇದು ಸ್ವಾಭಾವಿಕ ನ್ಯಾಯದ ಆಧಾರದಲ್ಲಿ ಊರ್ಜಿತವಾಗಲಾರದ ಸಂಗತಿ" ಎಂದು ನ್ಯಾಯಾಲಯ ಹೇಳಿದೆ. ಧರ್ಮವನ್ನು ಈ ರೀತಿ "ಕೇವಲ ಬಹುಪತ್ನಿತ್ವಕ್ಕಾಗಿ ನಗ್ನ ದುರ್ಬಳಕೆ ನಡೆಸುವುದನ್ನು" ತೀವ್ರವಾಗಿ ಟೀಕಿಸುತ್ತಾ ಯಾವುದೇ ಧರ್ಮ ಧಾರ್ಮಿಕ ವಿಕೃತಿಗಳಿಗೆ ಅನುಮತಿ ನೀಡುವುದಿಲ್ಲ ಎಂದಿದೆ. "ಮಾನವ ಹಕ್ಕುಗಳನ್ನು ಹಾಗೂ ಘನತೆಯನ್ನು ಉಲ್ಲಂಘಿಸುವ ಧಾರ್ಮಿಕ ಆಚರಣೆಗಳು ಹಾಗೂ ಅನಿವಾರ್ಯ ನಾಗರಿಕ ಹಾಗೂ ಭೌತಿಕ ಸ್ವಾತಂತ್ರ್ಯವನ್ನು ಪಾವಿತ್ರ್ಯತೆಯ ಹೆಸರಲ್ಲಿ ಉಸಿರುಗಟ್ಟಿಸುವಂತದ್ದು ದಮನದ ಸ್ವಾಯುತ್ತತೆಗಾಗಿ ಅಲ್ಲ" ಎಂದು ಮುಂದುವರಿದು ನ್ಯಾಯಾಲಯ ಹೇಳಿದೆ. ಕೇಂದ್ರ ಕಾನೂನು ಇಲಾಖೆ ಕೇಂದ್ರ ಸರ್ಕಾರ ಭಾರತದಾದ್ಯಂತ ಒಂದು ಸಮಾನ ನಾಗರಿಕ ಸಂಹಿತೆ ರೂಪಿಸಲು ಪ್ರಯತ್ನಿಸಬೇಕೆಂಬ ಸಂವಿಧಾನದ 44 ನೇ ಕಲಮಿನ ಬಗ್ಗೆ ಇದುವರೆಗೆ ಏನು ಕ್ರಮ ಕೈಗೊಂಡಿದೆ ಎಂದು ತಿಳಿಸಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ.

ಜಾತ್ಯಾತೀತ ಆಧಾರ ಸಿದ್ಧವಾಗಬೇಕು

ಆದರೂ ಒಬ್ಬ ನ್ಯಾಯಾಧೀಶರೇ ಗಮನಿಸಿದಂತೆ ಇಂತಹ ಸಮಾನ ನಾಗರಿಕ ಸಂಹಿತೆಯನ್ನು ಪರಸ್ಪರ ಚರ್ಚೆಯಿಂದ ಒಮ್ಮತಕ್ಕೆ ಬರುವ ಪ್ರಕ್ರಿಯೆಯ ಮೂಲಕ ಒಂದು "ಸಾಮೂಹಿಕ ವಾತಾವರಣವನ್ನು ನಿರ್ಮಿಸಿದಾಗ ಮಾತ್ರವೇ" ಮೂರ್ತಗೊಳಿಸಲು ಸಾಧ್ಯ. ಒಂದು ಜಾತ್ಯತೀತ ರಾಜಕೀಯ ವ್ಯವಸ್ಥೆಯ ಧರ್ಮದ ಭೇದ ಭಾವವಿಲ್ಲದೆ ಎಲ್ಲಾ ನಾಗರಿಕರಿಗೂ ಸಮಾನ ನಾಗರಿಕ ಸಂಹಿತೆ ಇರಬೇಕು. ಎಲ್ಲಾ ಕೋಮುಗಳಲ್ಲೂ ಮಹಿಳೆಯರ ಸಮಾನ ಸ್ಥಾನಮಾನ ಹಾಗೂ ಆಸ್ತಿ ಹಕ್ಕುಗಳನ್ನು ವಂಚಿಸುವ ಮೂಲಭೂತವಾದಿಗಳನ್ನು ಎದುರಿಸಲು ದೃಢ ಪ್ರಯತ್ನ ಬೇಕು. ಜಾತ್ಯಾತೀತತೆಯನ್ನು ಮತ್ತು ಅದಕ್ಕೆ ಅನುಗುಣವಾದ ಪ್ರಜ್ಞೆಯನ್ನು ಬಲಪಡಿಸುವ ಮೂಲಕ ಪ್ರತಿಯೊಂದು ಅಲ್ಪಸಂಖ್ಯಾತ ಕೋಮು ತನ್ನ ಹಕ್ಕುಗಳ ರಕ್ಷಣೆಯಾಗಿದೆ ಎಂಬ ಪೂರ್ಣ ವಿಶ್ವಾಸ ಪಡೆದಾಗ, ತಾನು ಭದ್ರ ಎಂಬ ಭಾವನೆ ಬಂದಾಗ ಮಾತ್ರವೇ ಇಂತಹ ಸಮಾನ ನಾಗರಿಕ ಸಂಹಿತೆಗೆ ಆಧಾರ ಸಿದ್ಧವಾಗುತ್ತದೆ ಎಂದಿರುವ ಪೊಲಿಟ್ ಬ್ಯೂರೋ ಜಾತ್ಯಾತೀತ ಶಕ್ತಿಗಳು ಎಲ್ಲಾ ರೀತಿಯ ಧಾರ್ಮಿಕ ಮೂಲಭೂತವಾದಿಗಳನ್ನು ದೃಢವಾಗಿ ವಿರೋಧಿಸಿ ಇಂತಹ ಆಧಾರವನ್ನು ಬಲಪಡಿಸಬೇಕು ಎಂದಿದೆ.

ಸಂಪೂರ್ಣ ಹೊಸತಾದ ಸಮಾನ ಕಾನೂನು ಅಗತ್ಯ

ಹಿಂದೂ ಕಾನೂನುಗಳು ಸಹಾ ಪೂರ್ಣ ಸುಧಾರಣೆಗೊಂಡಿಲ್ಲ

-ಎ.ಐ.ಡಿ.ಡಬ್ಲ್ಯು.ಎ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (ಎ.ಐ.ಡಿ.ಡಬ್ಲ್ಯು.ಎ)ದ ಅಧ್ಯಕ್ಷೆ ಸುಶಿಲಾ ಗೋಪಾಲನ್ ರವರು ಈ ತೀರ್ಪಿನ ಬಗ್ಗೆ ಒಂದು ಹೇಳಿಕೆ ನೀಡಿ "ಬಹುಪತ್ನಿತ್ವಕ್ಕಾಗಿ ಮತಾಂತರವನ್ನು ತೀವ್ರವಾಗಿ ಟೀಕಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ಕೆಲವು ಅಂಶಗಳನ್ನು ಎ.ಐ.ಡಿ.ಡಬ್ಲ್ಯು.ಎ. ಮೆಚ್ಚುತ್ತದೆ" ಎಂದಿದ್ದಾರೆ. ತೀರ್ಪು ಸಂವಿಧಾನದ ೪೪ನೇ ಕಲಮಿನ ಭಾವನೆಯನ್ನು ಅನುಷ್ಠಾನಕ್ಕೆ ತರದಿರುವ ಬಗ್ಗೆ ಸರಕಾರವನ್ನು ತರಾಟೆಗೆ ತೆಗೆದುಕೊಂಡಿರುವುದನ್ನು ಹಾಗೂ ಒಂದು ಸೂಕ್ತ ವಾತಾವರಣದ ಅಗತ್ಯವನ್ನು ಹೇಳುತ್ತಾ ತಕ್ಷಣ ಒಂದು ಸಮಾನ ನಾಗರಿಕ ಸಂಹಿತೆ ಜ್ಯಾರಿಗೆ ಬರಬೇಕೆಂಬ ದುರುದ್ದೇಶಪೂರಿತ ಕರ್ಣಕರ್ಕಶ ಪ್ರಚಾರದಿಂದ ದೂರ ನಿಂತಿರುವುದಕ್ಕೂ ಈ ಹೇಳಿಕೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಒಂದು ತಪ್ಪು ತರ್ಕ ಸಮಾನತೆ ತರಲಾರದ ತರ್ಕ

ಆದರೆ ಹಿಂದೂ ಕಾನೂನುಗಳನ್ನು ಆಗಲೇ ಸುಧಾರಿಸಲಾಗಿದೆ ಎಂಬ ತೀರ್ಪಿನ ತರ್ಕ ಸಂಪೂರ್ಣ ತಪ್ಪು ಎಂದು ಎಐಡಿಡಬ್ಲ್ಯುಎ ಅಭಿಪ್ರಾಯಪಟ್ಟಿದೆ. ಈ ತಪ್ಪು ತಿಳುವಳಿಕೆಯೇ ಸಮಾನ ನಾಗರಿಕ ಸಂಹಿತೆಗೆ ಹಿಂದೂ ಕಾನೂನುಗಳು ಆಧಾರವಾಗುತ್ತವೆ ಎಂಬ ಭಯ ಸೃಷ್ಟಿಸಿವೆ ಎಂದು ಈ ಹೇಳಿಕೆ ಅಭಿಪ್ರಾಯಪಟ್ಟಿದೆ. ವಾಸ್ತವ ಸಂಗತಿಯೆಂದರೆ ಹಿಂದೂ ಮಹಿಳೆಯರು ಆಸ್ತಿ, ವಾರಸುದಾರಿಕೆ(ಮಿತಾಕ್ಷರ ವ್ಯವಸ್ಥೆಯಲ್ಲಿದ್ದಂತೆ), ಪಾಲು, ಪಾಲಕರು ಇತ್ಯಾದಿಯಲ್ಲಿ ಅಸಮಾನ ಕಾನೂನಿಗೆ ಬಲಿಯಾಗಿದ್ದಾರೆ. 1950ರ ದಶಕದಲ್ಲಿ ನಡೆದ ಸುಧಾರಣೆಗಳು ಭಾಗಶಃಮಷ್ಟೇ ನಡೆದಿವೆ. ಏಕೆಂದರೆ ಹಿಂದೂ ಮೂಲಭೂತವಾದಿಗಳು ಒಂದು ಸಮಗ್ರ ಸುಧಾರಣೆಯಾಗದಂತೆ ತಡೆದರು. ಆದ್ದರಿಂದ ಇನ್ನೂ ಈ ದಿಕ್ಕಿನಲ್ಲಿ ಮಾಡಬೇಕಾದದ್ದು ಬಹಳವಿದೆ ಎಂದಿರುವ ಎ.ಐ.ಡಿ.ಡಬ್ಲ್ಯು.ಎ. ಸುಪ್ರೀಂ ಕೋರ್ಟ್ ತೀರ್ಪು ಹಿಂದೂ ಕಾನೂನುಗಳಿಗೆ ಸಮ್ಮತಿಯ ಮುದ್ರೆಯೊತ್ತಿ ಸಮಾನತೆಗಾಗಿ ಹಿಂದು ಮಹಿಳೆಯರ ಹೋರಾಟಕ್ಕೆ ಅಪಕಾರ ಮಾಡಿದೆ ಎಂದು ಖೇದ ವ್ಯಕ್ತಪಡಿಸಿದೆ.

ಅಷ್ಟೇ ಅಲ್ಲ ಈ ತೀರ್ಪು ಹೀನಾಯ ಮಾಡುವ ಹೀತಿಯಲ್ಲಿ "ವಿಭಜನೆಯ ನಂತರ ಭಾರತದಲ್ಲಿ ಉಳಿಯುವುದೇ 'ಸೂಕ್ತ ಎಂದು ನಿರ್ಧರಿಸಿದವರಿಗೆ ಇನ್ನು ಮುಂದೆ ಒಂದೇ ದೇಶವಿರುತ್ತದೆಂದು ಗೊತ್ತಿತ್ತು.... ಧರ್ಮದ ಹೆಸರಲ್ಲಿ ಯಾವ ಕೋಮು ಕೂಡಾ ಪ್ರತ್ಯೇಕ ಸ್ವಂತಿಕೆ ಕೇಳುವಂತಿಲ್ಲ" ಎಂದಿದೆ. ಒಂದು ಆಕ್ರಾಮಿಕ ಹಿಂದೂ ಭೂತವಾದದ ಅಬ್ಬರ ಇರುವಾಗ ದೇಶದ ಸರ್ವೋಚ್ಛ ನ್ಯಾಯಾಲಯದಿಂದ ಇಂತಹ ಮಾತುಗಳು ಬರುವುದು ಸರಿಯಲ್ಲ, ಇದು ಹಲವು ಅಲ್ಪಸಂಖ್ಯಾತ ಕೋಮುಗಳಲ್ಲಿ (ಮುಸ್ಲಿಮರಲ್ಲಿ ಮಾತ್ರವೇ ಅಲ್ಲ) ಇರುವ ಅಭದ್ರತೆಯ, ಭಯದ ಭಾವನೆಯನ್ನು ನಿವಾರಿಸಲು ನೆರವಾಗುವುದಿಲ್ಲ, ಅತ್ತ ಅಲ್ಪಸಂಖ್ಯಾತ ಕೋಮುಗಳಲ್ಲಿನ ಮೂಲಭೂತವಾದಿಗಳನ್ನು ಮೂಲೆಗುಂಪು ಮಾಡುವಲ್ಲೂ ನೆರವಾಗುವುದಿಲ್ಲ ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ.

ಜಾಗೃತಿ ಮೂಡಿಸಬೇಕು

ಮಹಿಳೆಯರಿಗೆ ಸಮಾನ ಹಕ್ಕುಗಳ ಭರವಸೆ ನೀಡುವ ಒಂದು ಸಂಪೂರ್ಣ ಹೊಸತಾದ ಸಮಾನ ಕಾನೂನು ಏಕೆ ಅಗತ್ಯವೆಂಬ ಬಗ್ಗೆ ಜಾಗೃತಿ ಮೂಡಿಸುವ ಪ್ರಚಾರ ಕಾರ್ಯ ನಡೆಯುವುದು ಅಗತ್ಯ ಎಂದು ಎ.ಐ.ಡಿ.ಡಬ್ಲ್ಯು.ಎ. ಒತ್ತಿ ಹೇಳಿದೆ. ಈಗಿನ ಸ್ಥಿತಿಯಲ್ಲಿ ನ್ಯಾಯಾಲಯ ಹೇಳಿದಂತೆ 'ಒಂದು ಸೂಕ್ತ ವಾತಾವರಣ'ವನ್ನು ಸೃಷ್ಟಿಸುವುದೆಂದರೆ ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವುದು. ಎಲ್ಲಾ ಕೋಮುಗಳ ಮೂಲಭೂತವಾದಿಗಳ ವಿರುದ್ಧ ಹೋರಾಡುವುದು ಹಾಗೂ ೪೪ನೇ ಕಲಮಿನ ವಿರುದ್ಧ ದಿಕ್ಕಿನಲ್ಲಿ ಸಾಗಿರುವ ಸರಕಾರ ರಾಜಿ ಮನೋಭಾವವನ್ನು ವಿರೋಧಿಸುವುದು ಎಂದರ್ಥ ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿಕೆ.

ಆದರೆ ಸದ್ಯ ಎಲ್ಲಾ ಕೋಮುಗಳ ಮಹಿಳೆಯರನ್ನು ತಟ್ಟುವ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಹೆಜ್ಜೆ ಹೆಜ್ಜೆಯಾಗಿ ಕಾನೂನಿನ ಹಕ್ಕುಗಳೂ ಸೇರಿದಂತೆ ಸಮಾನ ಹಕ್ಕುಗಳನ್ನು ನೀಡಬೇಕೆಂದು ಎ.ಐ.ಡಿ.ಡಬ್ಲ್ಯು.ಎ. ಒತ್ತಾಯಿಸಿದೆ. ಮದುವೆ ಕಡ್ಡಾಯ ರಿಜಿಸ್ಟ್ರೇಶನ್, ಆಸ್ತಿಯಲ್ಲಿ ಜಂಟಿ ಹಕ್ಕು ಇತ್ಯಾದಿ ಪ್ರಶ್ನೆಗಳ ಮೇಲೆ ಇದನ್ನು ಮಾಡಬಹುದು ಎಂದು ಅದು ಹೇಳಿದೆ.

ಈ ತೀರ್ಪು ಶಿಫಾರಸಿನ ಆಧಾರದ ಮೇಲೆ ಹಿಂದೂ ಗಂಡಸರು ಮತಾಂತರದ ದುರುಪಯೋಗ ಪಡೆಯುವುದನ್ನು ಲಭಿಸಲು ಸೂಕ್ತ ಕ್ರಮಗಳನ್ನು ರೂಪಿಸಿ, ಜ್ಯಾರಿಗೊಳಿಸಬೇಕೆಂದೂ ಎ.ಐ.ಡಿ.ಡಬ್ಲ್ಯು.ಎ. ಒತ್ತಾಯಿಸಿದೆ.

ಬಾಂಬೆ ಚಿತ್ರದ ಪ್ರಮುಖ ವಿಶಿಷ್ಟತೆಯೆಂದರೆ ಜನಮಾನಸವನ್ನು ತಲ್ಲಣಗೊಳಿಸಿದಂತಹ ಬಾಂಬೆ ಕೋಮುಗಲಭೆಗಳ ಬಗ್ಗೆ ಜನರಿಗೆ ತಲುಪುವಂತಹ ರೀತಿಯಲ್ಲಿ ಇಷ್ಟು ಬೇಗ ಪ್ರಬುದ್ಧವಾಗಿ ಪ್ರತಿಕ್ರಿಯಿಸಿದ್ದು. ಕರ್ನಾಟಕದಲ್ಲಿ ಹಿಂದೀ ಆವತರಣಿಕೆ ಬಿಡುಗಡೆಯಾಗೇ ಇಲ್ಲ. ತಮಿಳು ಆವತರಣಿಕೆ ಕೆಲವು ಜಿಲ್ಲೆಗಳಲ್ಲಿ ನಿಷೇಧವಾಗಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಕತ್ತರಿ ಬಿದ್ದು ಬೇರೆ ಬೇರೆ ಸ್ವರೂಪದಲ್ಲಿ ಪ್ರದರ್ಶಿತವಾಗುತ್ತಿದೆ. 'ಬಾಂಬೆ' ಚಿತ್ರ ನೋಡಿದ ನಮ್ಮ ಕಲಾಸಕ್ತ ಓದುಗರೊಬ್ಬರ ಪ್ರತಿಕ್ರಿಯೆ ಇದು.

ಸಲಾಂ 'ಬಾಂಬೆ'!

-ವಸಂತ ಆಚಾರಿ



ಖ್ಯಾತ ನಿರ್ದೇಶಕ ಮಣಿರತ್ನಂ ರವರ ಚಿತ್ರ 'ಬಾಂಬೆ' ದೇಶದಾದ್ಯಂತ ವಿವಾದಾತ್ಮಕವಾಗಿ ಜನರ ಬಳಿಗೆ ಹೋಗುತ್ತಿದೆ. ಪ್ರದರ್ಶನಗೊಂಡಿರುವಲ್ಲೆಲ್ಲ ಕಡೆ ಜನಭರಿತವಾಗಿ ತುಂಬಿ ತುಳುಕುತ್ತಿದ್ದರೆ, ನಿಷೇಧವಾದಲ್ಲೆಲ್ಲ ಕಡೆ ಚಿತ್ರದ ಪ್ರದರ್ಶನಕ್ಕಾಗಿ ಜನ ಕಾತರಿಸುತ್ತಿದ್ದಾರೆ.

ಧಾರ್ಮಿಕ ವಿಚಾರಗಳು ಯಾವ ರೀತಿ ಜನರನ್ನು ಬಲಿತೆಗೆದುಕೊಳ್ಳುತ್ತದೆ. ಆರ್ಥಿಕತೆಗೆ, ಅಭಿವೃದ್ಧಿಗೆ ತಡೆ ನೀಡುತ್ತದೆ ಎಂಬುದನ್ನು ಎಳೆಎಳೆಯಾಗಿ, ನೇರವಾಗಿ ಅಷ್ಟೇ ಸ್ಪಷ್ಟವಾಗಿ ಚಿತ್ರ ಜನರ ಮುಂದೆ ಇಡುತ್ತಿದೆ. ನೂರಕ್ಕೆ ನೂರರಷ್ಟು ಮುಂಬಾಯಿಯಲ್ಲಿ ನಡೆದಿರುವ ಕೋಮು ಗಲಭೆಯ ವಿಚಾರವನ್ನು ಕೇವಲ ಮೂರು ಗಂಟೆಯಲ್ಲಿ ಚಿತ್ರದ ಮುಖಾಂತರ ವಿವರಿಸುವುದು ಅಸಾಧ್ಯವಾದ ಮಾತು. ಆದರೆ ಮಣಿರತ್ನಂ, ಅದರ ಒಟ್ಟು ಚಿತ್ರಣವನ್ನು ನಮ್ಮ ಮುಂದೆ ಇರಿಸಿರುವ ರೀತಿ ಶ್ಲಾಘನೀಯ. 'ಕ್ರಾಂತಿ ವೀರ್' ಚಿತ್ರದ ನಾನಾ ಪಾಟೇಕರ್ ನಟಿಸಿರುವ ಪಾತ್ರಕ್ಕೂ 'ಬಾಂಬೆ' ಚಿತ್ರದ ನಾಯಕನ ಪಾತ್ರಕ್ಕೂ ಅಜಗಜಾಂತರವಿದ್ದರೂ; ಬಾಂಬೆ ಚಿತ್ರ ಒಬ್ಬ ವ್ಯಕ್ತಿಯನ್ನು ವೈಭವೀಕರಿಸದೆ 'ಕೋಮು ಸೌಹಾರ್ದತೆಗೆ' ಸಾಮೂಹಿಕ ಕ್ರಿಯೆ ಅತ್ಯಗತ್ಯ ಎಂಬುದನ್ನು ಪ್ರತಿಬಿಂಬಿಸುತ್ತದೆ. ಬಿಡುಗಡೆ ಆಗುವುದಕ್ಕೆ ಮುಂಚೆಯೇ ಸಾಕಷ್ಟು ಸೆನ್ಸಾರ್ ಕತ್ತರಿಗೆ ಬಲಿಯಾಗದಿದ್ದರೆ ಚಿತ್ರ 'ಇನ್ನಷ್ಟು' ನೈಜತೆಯನ್ನು ಪಡೆಯುತ್ತಿತ್ತು, ಎಂಬ ವಿಚಾರವನ್ನು ನಾವಿಲ್ಲಿ ಒಪ್ಪಬೇಕಾಗಿದೆ. ಅದರ ಅರ್ಥ ಚಿತ್ರತನ್ನು ಸ್ವಂತಿಕೆಯನ್ನು ಕಳಕೊಂಡಿದೆ ಎಂದಲ್ಲ, ಬಹುಸಂಖ್ಯಾತ ಕೋಮುವಾದ, ಅಲ್ಪಸಂಖ್ಯಾತ ಕೋಮುವಾದಗಳೆರಡೂ ನಮ್ಮ ದೇಶಕ್ಕೆ ಪ್ರಸ್ತುತ ಅಲ್ಲ; ಮಾತ್ರವಲ್ಲ ನಮ್ಮ ನೆಲದಲ್ಲಿ ಬೇರೂರಲು ಸಾಧ್ಯವಿಲ್ಲ ಎಂಬುದನ್ನು ಚಿತ್ರ ಕೊನೆಯಲ್ಲಿ ಸಾಧರ ಪಡಿಸುತ್ತದೆ.

ಒಂದು ಧರ್ಮದ ನಂಬಿಕೆ, ಆಚರಣೆಯ ಮೇಲೆ ಇನ್ನೊಂದು ಧರ್ಮ ಒತ್ತಡ, ದಾಳಿ ಮಾಡಬಾರದು ಎಂದು ಸಾರುವ ಹಲವಾರು ಸನ್ನಿವೇಶಗಳು ನಮ್ಮನ್ನು ಪದೆ ಪದೆ ಎಚ್ಚರಿಸುತ್ತದೆ -ಇಟ್ಟಿಗೆಯ ಮೇಲೆ ರಾಮನ ಹೆಸರನ್ನು ಅಚ್ಚು ಹಾಕಬೇಕೆಂದಾಗ ವಿರೋಧ ವ್ಯಕ್ತವಾಗುವುದು, ಶ್ರೀರಾಮನ ದೇವಾಲಯ ಅಯೋಧ್ಯೆಯಲ್ಲಿ ನಿರ್ಮಾಣಕ್ಕಾಗಿ ಕಾಣಿಕೆ ನೀಡಬೇಕೆಂದು ಒತ್ತಾಯಿಸಿದಾಗ ನಾಯಕಿಯ ಭಾವುಕ ಮೌನ; ನಂತರ ನಾಯಕ ಅವರನ್ನು ಬದಿಗೆ ಕೊಂಡೊಯ್ಯುವುದು, ಮುಂಬಾಯಿಗೆ ಬಂದ ನಾಯಕಿಯ

....ಪುಟ 7 ಕ್ಕೆ

> **ರಾಜ್ಯದ ಗೃಹಮಂತ್ರಿಗಳೇನೋ ಚಿತ್ರದ ಆದರ್ಶ, ಉದ್ದೇಶ ಗುಣಮಟ್ಟಗಳನ್ನು ಮೆಚ್ಚಿ ಕೊಂಡಿದ್ದಾರೆ. ಆದರೆ ಈ ಚಿತ್ರವನ್ನು ಜನತೆ ನೋಡಬೇಕೋ ಬೇಡವೋ ಎನ್ನುವ ನಿರ್ಧಾರ ಮಾತ್ರ ಇನ್ನೂ ಜಿಲ್ಲಾಧಿಕಾರಿಗಳ ಗುತ್ತಿಗೆಯೇ ಆಗಿದೆ! ಇಂದು 'ಬಾಂಬೆ' ಚಿತ್ರವನ್ನು ಯಾವ ಜಿಲ್ಲೆಯ ಜಿಲ್ಲಾಧಿಕಾರಿಯಾಗಲಿ ತನಗೆ ಇಷ್ಟ ಬಂದವರ ಜೊತೆ ಕುಳಿತು, ತನಗೆ ಮತ್ತು ತನ್ನ ಜತೆಯವರಿಗೆ ಸರಿ ಕಾಣದ ಭಾಗಗಳನ್ನು ಕತ್ತರಿಸಿ ಬಿಸಾಕಬಹುದು. ಕ್ರಿಯಾಶೀಲ ನಿರ್ದೇಶಕನೊಬ್ಬ ಅಕ್ಕರೆಯಿಂದ ನಿರ್ಮಿಸಿರುವ ಒಂದು ಕಲಾಕೃತಿ ಇಂದು ಅಧಿಕಾರಿಗಳ ಕೈಯಲ್ಲಿ ಪ್ರತಿನಿತ್ಯವೂ ಮಾರುಕಟ್ಟೆಯಲ್ಲಿ ಸಿಗುವ ಒಂದು ಮಾಮೂಲಿ ಸಾಮಾನಿ ಸಂತಾಗಿದೆ.**
>
> **-ವಿ.ಎಸ್. ಸುಬ್ಬರಾವ್, (ಸಂಯುಕ್ತ ಕರ್ನಾಟಕದಲ್ಲಿ)**

ಏಕ್ ಪ್ಯಾರಿ ಪ್ಯಾರಿ ಗುಡಿಯಾ ದೇ ದೊನಾ!

'ಬಾಂಬೆ' ಒಂದು ವ್ಯಾಪಾರೀ ಚಿತ್ರದ ಎಲ್ಲಾ ಮಸಾಲೆಗಳನ್ನು ಹೊಂದಿದೆ ಎಂದು ಕೆಲವರ ಟೀಕೆ ಇದು ಸ್ವಲ್ಪ ಮಟ್ಟಿಗೆ ನಿಜ. ಆದರೆ ಚಿತ್ರದ ಸಂಗೀತ, ನೃತ್ಯ, ಹಾಡುಗಳಲ್ಲಿ ಬರುವ 'ಕನಸುಗಾರಿಕೆ' ಬೇರೆ ತರಹದ್ದು. ಜನಸಾಮಾನ್ಯರ ದೈನಂದಿನ ಜೀವನದ ಸಂಭ್ರಮದ ಸರಳ 'ಕನಸು'ಗಳ ಚಿತ್ರಣ ಕಮರ್ಶಿಯಲ್ ಚಿತ್ರಗಳಂತೆ ಚಿತ್ರದ ಮೂಲ ಆಶಯಗಳಿಗೆ ಸಂಬಂಧವಲ್ಲದ 'ತಿರುಕ ಕನಸಿನಲ್ಲಿ ವೈಭವ' ಕಂಡಂತಹ ಕನಸುಗಳಿಲ್ಲ. ಮೊದಲ ನೋಟದ ಪ್ರೇಮದ ಸೊಗಸು, ವಿರಹದ ನೋವು ಮೊದಲ ಬಾರಿ ಒಂದಾಗುವ ಇರುಳಿನ ಸಂಭ್ರಮ, ಹುಟ್ಟುವ ಮಕ್ಕಳ ಬಗ್ಗೆ ಸುಂದರ ಭವಿಷ್ಯದ ಕನಸು, ಇನ್ನೊಂದು ಮಗು ಸುಂದರ ಗೊಂಬೆಯಾಗಿದ್ದ ಹೆಣ್ಣು ಮಗುವಾಗಬೇಕೆಂಬ ಬಯಕೆ ಅಸಹಜವೇನಲ್ಲ. ಆದರಲ್ಲೂ ಇಂತಹ ಜನಸಾಮಾನ್ಯರ ದೈನಂದಿನ ಸಂಭ್ರಮ, ಕನಸುಗಳನ್ನು ಹೊಸಕಿ ಹಾಕುವ ಕೋಮುಶಕ್ತಿಗಳ ತಾಂಡವ ನೃತ್ಯವ ಹಿನ್ನೆಲೆಯಲ್ಲೂ ಪುಟಿಯುವ ಈ 'ಕನಸುಗಾರಿಕೆ'ಗೆ ಚಿತ್ರದಲ್ಲಿ ವಿಶಿಷ್ಟ ಸ್ಥಾನವಿದೆ. ಇದರಿಂದಾಗಿಯೇ ಚಿತ್ರ ಜನರನ್ನು ತಟ್ಟಿರುವುದು.

ಚಿತ್ರದುದ್ದಕ್ಕೂ ಮಕ್ಕಳು ಕುಣಿದು ಕುಪ್ಪಳಿಸಿ ತಮ್ಮ ಛಾಪು ಮೂಡಿಸುವಂತಹದು ಚಿತ್ರದ ಇನ್ನೊಂದು ವಿಶಿಷ್ಟತೆ. ದೇಶದ ಭವಿಷ್ಯತ್ತಿನ ಬಗ್ಗೆ ನಿರಾಶೆ, ಹತಾಶೆ ಕವಿಯುವ ಸಂದರ್ಭದಲ್ಲಿ ಹೊಸ ಜನಾಂಗ ಇವನ್ನು ಮೆಟ್ಟಿ ನಿಲ್ಲುವುದು. ಈ ಶಕ್ತಿಗಳ ಆಟವನ್ನು ಹುಸಿಗೊಳಿಸುವುದು ಎನ್ನುವ ಆಶಾಭಾವನೆ, ಭರವಸೆ ಚಿತ್ರದಲ್ಲಿ ಮೂಡಿಬರುತ್ತದೆ. 'ಕನಸಿನ ಹಾಡು ನೃತ್ಯಗಳ' ದೃಶ್ಯಗಳಲ್ಲಂತೂ ಮಕ್ಕಳ ಚಿತ್ರಣ ಜೀವನೋತ್ಸಾಹದ ಬುಗ್ಗೆಯನ್ನು ಯಾವ ಶಕ್ತಿಗಳೂ ಬತ್ತಿಸಲಾರದು ಎಂಬುದನ್ನು ಧ್ವನಿಸುತ್ತವೆ.

ಒಂದು ರೀತಿಯಲ್ಲಿ ವಲಸೆಗಾರರ 'ಸ್ವರ್ಗ' ಮುಂಬೈ ಅದನ್ನು ಎಲ್ಲರಿಗೂ 'ನರಕ' ಮಾಡ ಹೊರಟಿರುವವರ ಬಗ್ಗೆ ವಲಸೆಗಾರರು ಅಷ್ಟೇ ಆಕ್ರೋಶ, ತನ್ನತನ ತೋರುವ ಬಗೆ ಚಿತ್ರದಲ್ಲಿ ಪರಿಣಾಮಕಾರಿಯಾಗಿ ಮೂಡಿದೆ. ಇಡೀ ಚಿತ್ರಕಥೆ ವಲಸೆಗಾರ ತಮಿಳು-ಜೋಡಿಯ ಸುತ್ತಮುತ್ತ ಹೆಣೆದಿರುವುದು ಚಿತ್ರಕ್ಕೆ ವಿಶಿಷ್ಟ ಮೆರುಗನ್ನು ನೀಡಿದೆ.

ಕರ್ನಾಟಕ ಸುದ್ದಿ ಸಮಾಚಾರ

"ಉಡುಪಿಯಲ್ಲಿ ಮೇ ದಿನಾಚರಣೆ"

ಉಡುಪಿಯಲ್ಲಿ ಮೇ ಒಂದರಂದು ಸಿ.ಐ.ಟಿ.ಯು ಸಂಘಟನೆಗೆ ಸೇರಿದ ಕಾರ್ಮಿಕರಲ್ಲಿ ಹಬ್ಬದ ಉತ್ಸಾಹ ಕಾಣುತ್ತಿತ್ತು. ಶಿಕ್ಷಣ, ಬ್ಯಾಂಕಿಗ್, ಪತ್ರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಭಾರತದಲ್ಲೇ ಒಂದು ಉನ್ನತ ಸ್ಥಾನಪಡೆದ ಮಣಿಪಾಲದ ಪೈ ಕುಟುಂಬದ ಮುಖ್ಯ ಉದ್ಯಮ ಸಂಸ್ಥೆಗಳಾದ ಮಣಿಪಾಲದ ಪ್ರೆಸ್‌ಗಳ ಕಾರ್ಮಿಕರ ಬೃಹತ್ ಮೆರವಣಿಗೆ ಮಧ್ಯಾಹ್ನ 3.30ಕ್ಕೆ ಉಡುಪಿಯತ್ತ ಸಾಗಿತ್ತು. ಬ್ಯಾಂಡ್ ವಾದನದೊಂದಿಗೆ ಕಾರ್ಮಿಕರು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಿದ್ದರು. ರಾಜ್ಯ ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಮತ್ತು ಸಿ.ಪಿ.ಐ(ಎಂ) ಉಡುಪಿ ತಾಲೂಕು ಕಾರ್ಯದರ್ಶಿ ಪಿ. ವಿಶ್ವನಾಥ್ ರೈ ಮೆರವಣಿಗೆಯ ಮುಂಭಾಗದಲ್ಲಿದ್ದರು. ಅದೇ ರೀತಿ ಹಂಚಿನ ಕಾರ್ಮಿಕರ, ಬೀಡಿಕಾರ್ಮಿಕರ, ಗೋಡಂಬಿ ಕಾರ್ಮಿಕರ ಇನ್ನೊಂದು ಮೆರವಣಿಗೆ ಕಲ್ಯಾಣಪುರ ಸಂತೆಕಟ್ಟೆಯಿಂದ ಉಡುಪಿಗೆ ಆಗಮಿಸಿತು.

ಉಡುಪಿ ರಥಬೀದಿಯಲ್ಲಿ ನಡೆದ ಮೇ ದಿನಾಚರಣೆಯ ಸಭೆಯನ್ನು ಉದ್ದೇಶಿಸಿ ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ಪಿ. ರಾಮಚಂದ್ರರಾವ್ ಮಾತಾಡುತ್ತಾ ಹಬ್ಬದ ದಿನ ಕುಟುಂಬಸ್ಥರೆಲ್ಲ ಒಂದೆಡೆ ಸೇರುವಂತೆ ಈ ಕಾರ್ಮಿಕ ದಿನಾಚರಣೆಯ ಪವಿತ್ರದಿನದಂದು ನಾವೆಲ್ಲಾ ಕಾರ್ಮಿಕರು ಸಂಭ್ರಮದಿಂದ ಒಂದೆಡೆ ಸೇರಿ ಹಿಂದಿನ ತ್ಯಾಗ, ಬಲಿದಾನ, ಹೋರಾಟಗಳನ್ನು ನೆನಪಿಸಿ ಮುಂದಿನ ಹೋರಾಟಗಳ ಬಗ್ಗೆ ಚಿಂತನೆ ನಡೆಸುವುದೇ ಈ ದಿನಾಚರಣೆಯ ಉದ್ದೇಶ ಎಂದರು.

ಸಭೆಯನ್ನು ಉದ್ದೇಶಿಸಿ ಸಿ.ಪಿ.ಐ(ಎಂ) ಮುಖಂಡ ಕಾ. ಬಿ. ಕೃಷ್ಣಪ್ಪನವರು ಮಾತಾಡಿದರು. ಸಭೆಯ ಆರಂಭದಲ್ಲಿ ನಡೆದ ಪ್ರೆಸ್ ಕಾರ್ಮಿಕರ ಮೆರವಣಿಗೆಯ ನೇತೃತ್ವವನ್ನು ನಿತ್ಯಾನಂದ ನಾಯಕ್, ಅಶೋಕಶೆಟ್ಟಿ, ವಿಜಯೇಂದ್ರ ಜತ್ತನ್ನ, ಪ್ರಭಾಕರ ನಾಯಕ್ ಹಾಗೂ ಹಂಚು ಕಾರ್ಮಿಕರ ಮೆರವಣಿಗೆಯ ನೇತೃತ್ವವನ್ನು ಕಾ. ಡೇವಿಡ್ ಕರ್ಕಡ, ಸಂಜೀವ ನಾಯಕ್ ವಹಿಸಿದ್ದರು. ಆರಂಭದಲ್ಲಿ ತಾಲೂಕು ಸಮಿತಿ ಕಾರ್ಯದರ್ಶಿ ಪಿ. ವಿಶ್ವನಾಥ್ ರೈ ಸ್ವಾಗತಿಸಿದರು. ಕೊನೆಗೆ ಸಂಜೀವ ನಾಯಕ್ ವಂದನಾರ್ಪಣೆ ಮಾಡಿದರು.

ಬಂಟ್ವಾಳ: ಮೇ ಒಂದರಂದು CITU ಮತ್ತು AITUC ಜಂಟಿಯಾಗಿ ವಿಶ್ವಕಾರ್ಮಿಕರ ದಿನಾಚರಣೆಯ ಅಂಗವಾಗಿ ಬೆಳಿಗ್ಗೆ ಆರು ಗಂಟೆಗೆ ಪ್ರಭಾತ್ ಬೇರಿನಡೆಸಿ ಕಾರ್ಮಿಕರ ಕೆಂಬಾವುಟವನ್ನು ಸಂಜೆಯ ಸಾರ್ವಜನಿಕ ಸಭೆಯ ವೇದಿಕೆಯ ಬಳಿ ಹಾರಿಸಿದರು.

ಪಾಣೆ ಮಂಗಳೂರಿನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಎ.ಐ.ಟಿ.ಯು.ಸಿ ನಿಂದ ಕಾಂ. ವಿಶ್ವನಾಥ್ ನಾಯ್ಕ, ಸಿ.ಐ.ಟಿ.ಯು ವಿನಿಂದ ಕಾಂ. ವಾಸುಗಟ್ಟಿ, ಗಣೇಶ್ ಬೀಡಿ ಸ್ಟಾಫ್ ವರ್ಕರ್ಸ್ ಯೂನಿಯನ್‌ನ ರಾಜ್ಯಸಹಕಾರ್ಯದರ್ಶಿ ಕಾಂ. ಬಿ. ನಾರಾಯಣ ಅವರು ಮಾತನಾಡಿದರು. ಕಾಂ. ಸಂಜೀವ ಅವರು ಸ್ವಾಗತಿಸಿದರು. ಕಾಂ. ಬಿ.ನಾರಾಯಣ ಅವರು ವಂದಿಸಿದರು.

ಶಹಾಪುರ

ಕ.ರಾ.ರ.ಸಾ.ಸಂಸ್ಥೆ ಶಹಾಪುರ ಘಟಕದಲ್ಲಿ ಮೇ ಒಂದರಂದು ವಿಶ್ವ ಕಾರ್ಮಿಕ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಹಿರಿಯ ಕಾರ್ಮಿಕರಾದ ಅಬ್ದುಲ್ ಹಮೀದ್ ಖಾನ್ ಅವರಿಂದ ಧ್ವಜಾರೋಹಣವಾದ ನಂತರ ಹುತಾತ್ಮ ಕಾರ್ಮಿಕ ಸಂಗಾತಿಗಳಿಗೆ ಕೆಂಪು ವಂದನೆ ಸಲ್ಲಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಮಿಕ ನಾಯಕರಾದ ಎಂ. ದೇವೇಂದ್ರಪ್ಪ ಪತ್ತಾರ ವಹಿಸಿದ್ದರು. ಅತಿಥಿಗಳಾಗಿ ಸ್ಥಳಿಯ, ಸಿ.ಪಿ.ಎಂ. ಘಟಕದ ಕಾರ್ಯದರ್ಶಿ, ನ್ಯಾಯವಾದಿಗಳಾದ ನಿಂಗಣ್ಣ ಸಗರ ಆಗಮಿಸಿದ್ದರು. ವೇದಿಕೆಯ ಮೇಲೆ ಘಟಕ ವ್ಯವಸ್ಥಾಪಕರಾದ ಪಿ.ಬಿ. ಇಸಾರೆಡ್ಡಿ ಕರ್ಮಿಕ ನಾಯಕರಾದ ಮಡಿವಾಳಪ್ಪ, ಮಹಾದೇವಪ್ಪ, ಸುಖಮುನಿ, ಬಸವರಾಜ ದೇಸಾಯಿ, ಮಾನಯ್ಯ ಹತ್ತಿಗುಡೂರ ಉಪಸ್ಥಿತರಿದ್ದರು.

ಕಾರ್ಮಿಕ ದಿನಾಚರಣೆ ಕುರಿತು ಸಿದ್ದಪ್ಪ ಪಾಲ್ಕಿ, ಈ.ಪಂಪಣ್ಣ ಕೂಡ ಮಾತಾಡಿದರು. ರವೀಂದ್ರಕುಮಾರ ಹೊನವಾಡ ಸಮಾರಂಭದ ನಿರೂಪಣೆಗೈದು ಕ್ರಾಂತಿಗೀತೆಗಳನ್ನು ಹಾಡಿದರು. ಎಫ್.ಭಿ.ನಾಯ್ಕರ್ ವಂದನಾರ್ಪಣೆಗೈದರು

'ಟಿ.ಸಿ.ಹೆಚ್ ವಿದ್ಯಾರ್ಥಿಗಳ ಹೋರಾಟಕ್ಕೆ ಎಸ್.ಎಫ್.ಐ. ಬೆಂಬಲ'

ವಿಜಾಪುರ: ಖಾಸಗಿ ಟಿ.ಸಿ.ಹೆಚ್ ವಿದ್ಯಾರ್ಥಿಗಳಿಗೆ ಕಳೆದ ವರ್ಷ ಫಲಿತಾಂಶ ಪ್ರಕಟಣೆ ಮಾಡಬೇಕು ಮತ್ತು 1995 ರಲ್ಲಿ ಪರೀಕ್ಷೆಗೆ ಅನುಮತಿ ಕೂಡಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ನಡೆಸುತ್ತಿರುವ ಅಮರಣ ಉಪವಾಸಕ್ಕೆ ಭಾರತ ವಿದ್ಯಾರ್ಥಿ ಪೆಡರೇಶನ್ ಜಿಲ್ಲಾ ಸಮಿತಿ ತನ್ನ ಬೆಂಬಲ ವ್ಯಕ್ತಪಡಿಸಿದೆ. ಪತ್ರಿಕಾ ಹೇಳಿಕೆ ನೀಡಿರುವ ಎಸ್.ಎಫ್.ಐ.ನ ಜಿಲ್ಲಾ ಮುಖಂಡರಾದ ಶ್ರೀ ಮಹೆಬೂಬ ಅವಟಿ ಮತ್ತು ಬಸವರಾಜ ಪಾಟೀಲ ತಿಳಿಸಿದ್ದಾರೆ.

ಅನುದಾನ ರಹಿತವಾದ ಖಾಸಗಿ ಕಾಲೇಜ್‌ಗಳಿಗೆ ಕಳೆದ ವರ್ಷ ಪರೀಕ್ಷೆಗೆ ಅನುಮತಿ ಕೊಟ್ಟಿದ್ದನ್ನು ಸರ್ಕಾರ ಪರಿಶೀಲಿಸಿ ವಿಧ್ಯಾರ್ಥಿಗಳಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ಶಿಕ್ಷಣ ಸಚಿವರಿಗೆ ಒತ್ತಾಯಿಸಿದೆ.

ಡಿ.ವೈ.ಎಫ್‌ಐ ಸದಸ್ಯತ್ವ ಆಂದೋಲನ

ಬಂಟ್ವಾಳ: ಮೇ ಒಂದರಿಂದ 15 ರ ವರಗೆ ಜಿಲ್ಲಾದ್ಯಂತ ನಡೆಯುವ ಸದಸ್ಯತ್ವ ಆಂದೋಲನದ ಅಂಗವಾಗಿ ಬಂಟ್ವಾಳದಲ್ಲಿ ಸದಸ್ಯತ್ವ ಆಂದೋಲನ ನಡೆಸಲಾಗುತ್ತಿದೆ.

ಮೇ ಒಂದರಂದು ಸದಸ್ಯತ್ವ ಆಂದೋಲನದ ಉದ್ಘಾಟನೆಯನ್ನು ಕಾರ್ಪೊರೇಷನ್ ಬ್ಯಾಂಕ್ ಮ್ಯಾನೇಜರ್‌ರಾದ ಡಿ.ಪಿ. ಕುಮಾರ್ ಅವರು ತಾಲೂಕು ಸಮಿತಿ ಉಪಾಧ್ಯಕ್ಷರಾದ ಬಿ. ಗೋಪಾಲಕೃಷ್ಣ ಅವರಿಗೆ ಸದಸ್ಯತ್ವ ನೀಡುವುದರ ಮೂಲಕ ನಡೆಸಿಕೊಟ್ಟರು. ಸ್ಥಳೀಯ ಯುವ ಉದ್ಯಮಿ ಎಸ್ ಸತೀಶ್ ಅವರು ಧ್ವಜಾರೋಹಣಗೈದರು. ಮುಖ್ಯ ಅತಿಥಿಗಳಾಗಿ ಕಾಂ. ವಾಸುದೇವ ಉಚ್ಚಿಲ್, ಕಾಂ. ಕೃಷ್ಣಪ್ಪ ಕೊಂಚಾಡಿ, ಕೆ. ಯಾದವ ಶೆಟ್ಟಿ, ಅವರುಗಳು ಭಾಗವಹಿಸಿದ್ದರು. ಸಭಾದ್ಯಕ್ಷತೆಯನ್ನು ಡಿ.ವೈ.ಎಫ್.ಐ. ತಾಲೂಕು ಸಮಿತಿ ಅದ್ಯಕ್ಷರಾದ ರಾಮಣ್ಣ ವಿಟ್ಲ ನಡೆಸಿಕೊಟ್ಟರು ಪ್ರಾರಂಭದಲ್ಲಿ dyfi ತಾಲೂಕು ಸಮಿತಿ ಕಾರ್ಯದರ್ಶಿ ಕಾಂ. ಬಿ. ಉದಯ ಕುಮಾರ್ ಅವರು ಸ್ವಾಗತಿಸಿ ಕಾಂ. ಜನಾರ್ಧನ್ ಕುಲಾಲ್ ಸಹ ಕಾರ್ಯದರ್ಶಿ ಅವರು ವಂದಿಸಿದರು. ಎಸ್. ರಾಜ್ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮವನ್ನು ನಿರೂಪಿಸಿ ಕೊಟ್ಟರು.

7 ಜನರ ಡಿ.ವೈ.ಎಫ್.ಐ ಕಾರ್ಯಕರ್ತರ ತಂಡವು ಸಾಮೂಹಿಕವಾಗಿ ಸದಸ್ಯತ್ವ ಆಂದೋಲನದಲ್ಲಿ ಭಾಗವಹಿಸುತ್ತಾ ಒಂದು ದಿನದಲ್ಲಿ 282 ಸದಸ್ಯರನ್ನು dyfi ಗೆ ಸೇರ್ಪಡೆ ಮಾಡಿದರು.

ಜಿಲ್ಲಾಧಿಕಾರಿಗಳ ಕಛೇರಿ ಪಿಕೆಟಿಂಗ್ ಬಂಧನ:

ಶಹಬಾದ್: ರಾಜ್ಯ ಸರಕಾರದ ಮತ್ತು ಕಾರ್ಮಿಕ ಮಂತ್ರಿ ಶ್ರೀ ಸಿ. ಗುರುನಾಥರವರ ಕಾರ್ಮಿಕ ವಿರೋದಿ ದೋರಣೆ ವಿರೋದಿಸಿ ರಾಜ್ಯಾದ್ಯಾಂತ ಪಿಕೆಟಿಂಗ್ ಕಾರ್ಯಕ್ರಮದ ಕರೆಯ ಮೆರಗೆ ಇಂದಿಲ್ಲಿ ಜಾಲ್ಲಾಧಿಕಾರಿಗಳ ಕಛೇರಿಯಲ್ಲಿ ಪಿಕೆಟಿಂಗ್ ನಡೆಸಿದ 50 ಜನ ಸಿ.ಐ.ಟಿ.ಯು. ಕಾರ್ಮಿಕರನ್ನು ಪೋಲಿಸರು ಬಂದಿಸಿದರು.

ಇಂದು ಮುಂಜಾನೆ ರೈಲು ನಿಲ್ದಾಣದಿಂದ ಕಾರ್ಮಿಕರು ಮೇರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯವರಗೆ ಬಂದು ಸುಮಾರು 2 ತಾಸು ಜಿಲ್ಲಾಧಿಕಾರಿಗಳ ಕಛೇರಿಯ ಮುಖ್ಯದ್ವಾರದ ಎದುರು ಪಿಕೆಟಿಂಗ್ ನಡೆಸಿದರು. ಪಿಕೆಟಿಂಗ್ ನಲ್ಲಿ ಎ.ಬಿ.ಎಲ್. ಶಹಬಾದ್, ರಾಜಾಶ್ರೀ ಸಿಮೆಂಟ್ ಮತ್ತು ಎಂ.ಎಸ್.ಕೆ. ಮಿಲ್ ಕಾರ್ಮಿಕರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಿ.ಐ.ಟಿ.ಯು ಮುಖಂಡರಾದ ಚಂದು ಜಾಧವ, ಹನ್ನುಮಿಯಾ, ರಮೇಶ, ಮಲಶೆಟ್ಟಿ ಮತ್ತು ಇತರರು ಭಾಗವಹಿಸಿದರು. ಇದರ ನೇತೃತ್ವವನ್ನು ಸಿ.ಪಿ.ಐ(ಎಂ) ಜಿಲ್ಲಾ ಕಾರ್ಯದರ್ಶಿ ಶ್ರೀ ಮಾರುತಿ ಮಾನ್ಪಡೆಯವರು ವಹಿಸಿದ್ದರು.

ಡಿ.ವೈ.ಎಫ್‌ಐ ದ್ವಿತೀಯ ಸಮಾವೇಶ

ಗೌರಿಬಿದನೂರು: ಮೇ 6 ರಂದು ಗೌರಿಬಿದನೂರಿನಲ್ಲಿ dyfiನ 2ನೇ ಸಮಾವೇಶ ಜರಗಿತು. ಸಮಾವೇಶವನ್ನು ಡಿ.ವೈ.ಎಫ್.ಐ. ಜಿಲ್ಲಾ ಉಪಾಧ್ಯಕ್ಷರಾದ ವಿ. ಶ್ರೀನಿವಾಸ ಕರ್ಣರವರು ಉದ್ಘಾಟಿಸಿದರು. ಜಿಲ್ಲಾ ಮುಖಂಡರಾದ ಮಂಜೂರು ಆಹಮದ್ ರವರು dyfi ನ ಸಂವಿಧಾನದ ಬಗ್ಗೆ ಮಾತನಾಡುತ್ತಾ ಯುವಜನರ ಏಳಿಗೆಗೆ ಪ್ರತಿಬಿಂಬಿಸುವ ಬಲಿಷ್ಟ ಸಂಘಟನೆ ಕಟ್ಟಬೇಕೆಂದು ಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.

ಈ ಸಮಾವೇಶದ ಅಧ್ಯಕ್ಷತೆಯನ್ನು ಸಿ.ಸಿ. ಅಶ್ವಥಪ್ಪನವರು ವಹಿಸಿದ್ದರು. ಬೆಳ್ಳಿಗೆ 10ಗಂಟೆಯಿಂದ 3 ಗಂಟೆಯವರಗೆ ನಡೆದ ಈ ಸಮಾವೇಶದಲ್ಲಿ ಜಿಲ್ಲೆಯ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸ ಸಮಿತಿ ಅಯ್ಕೆ ಮಾಡಲಾಯಿತು. ಅದ್ಯಕ್ಷರಾಗಿ ಸಿ.ಸಿ. ಅಶ್ವಥಪ್ಪ, ಕಾರ್ಯದರ್ಶಿಯಾಗಿ ನಲ್ಲಪ್ಪ ಅವರು ಅಯ್ಕೆಯಾದರು.ಉಪಾದ್ಯಕ್ಷರಾಗಿ ಕೆ.ಹೆಚ್. ಆವಲಪ್ಪ ಮತ್ತು ಎ. ಅಶ್ವಥಪ್ಪ, ಸಹ ಕಾರ್ಯದರ್ಶಿಯಾಗಿ ಹನುಮಪ್ಪ ಮತ್ತು ಲಕ್ಷ್ಮಣರೆಡ್ಡಿ, ಖಜಾಂಚಿಯಾಗಿ ಎಂ.ಎಸ್. ಸಮಿಉಲ್ಲ ಇವರಲ್ಲದೆ 9 ಜನರ ಕಾರ್ಯಕಾರಿ ಸಮಿತಿಯನ್ನು ಅಯ್ಕೆಮಾಡಲಾಯಿತು. ಕೆ.ಹೆಚ್. ಆವಲಪ್ಪನವರ ವಂದನಾರ್ಪಣೆ ಯೊಂದಿಗೆ ಸಮಾವೇಶ ಮುಕ್ತಾಯವಾಯಿತು.

ಅಸಮರ್ಪಕ ವಿದ್ಯುತ್ ಪೂರೈಕೆ: ಧರಣಿ ಸತ್ಯಾಗ್ರಹ

ಸಿಂಧನೂರು: ಸಿಂಧನೂರು ತಾಲೂಕಿನಾದ್ಯಂತ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ತಾಲೂಕಿನ ಗ್ರಾಮೀಣ ಪ್ರದೇಶಗಳು ನಿರಂತರವಾಗಿ ಕತ್ತಲೆಯಲ್ಲಿ ಮುಳುಗಿವೆ, ಈ ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ರೈತರ ಪಂಪ್‌ಸೆಟ್‌ಗಳು ಕಾರ್ಯನಿರ್ವಹಿಸದೆ ಬೆಳೆಗಳಿಗೆ ಹಾನಿಯಾಗಿದೆ.

ಈ ಅವ್ಯವಸ್ಥೆಯನ್ನು ಸರಿಪಡಿಸಲು ಆಗ್ರಹಿಸಿ ಸಿ.ಪಿ.ಎಂ. ತಾಲೂಕ ಸಮಿತಿ ವಿದ್ಯುತ್ ಚಕ್ತಿ ಮಂಡಳಿ ಎದುರು ಮೇ 8 ರಂದು ಧರಣಿ ಸತ್ಯಾಗ್ರಹ ನಡಿಸಿತು. ಈಧರಣಿ ಸತ್ಯಾಗ್ರಹದ ನೇತೃತ್ವವನ್ನು ಕಾಂ. ಶೇಖ್ ಖಾದ್ರಿ, ವಿಶ್ವನಾಥ್, ಎಲ್ಲಪ್ಪ, ರಮೇಶ್ ಹಾಗೂ ಮಹದೇವಮ್ಮ ವಹಿಸಿದ್ದರು.

ಖಾಸಗಿ ಪ್ರಯಾಣ ದರ ಏರಿಕೆ: ರಸ್ತೆ ತಡೆ

ಡಿ.ವೈ.ಎಫ್.ಐ. ಬಂಟ್ವಾಳ ತಾಲೂಕು ಸಮಿತಿ ನೇತೃತ್ವದಲ್ಲಿ ಎಪ್ರಿಲ್ 28 ರಂದು ಖಾಸಗಿ ಬಸ್ ಪ್ರಯಾಣ ದರ ಏರಿಕೆ ವಿರೋಧಿಸಿ ಖಾಸಗಿ ಬಸ್ ತಡೆ ಮತ್ತು ರಾಸ್ತಾ ರೋಖೋ ಚಳುವಳಿ ನಡೆಸಲಾಯಿತು.

ಜಿಲ್ಲೆಯ ನಾಗರೀಕ ಪ್ರತಿನಿಧಿಗಳು ಮತ್ತು ಬಸ್ ಮಾಲಕರು ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿಗಳು ಬಹಳ ಸ್ಪಷ್ಟವಾಗಿ ದೃಷ್ಟವಾಗುವುದಿದ್ದರೆ ಬಸ್ಸು ನಿಲ್ಲಿಸಿ ಎಂದು ಹೇಳಿದ್ದರು. ಆದರೆ ಬಸ್ಸು ಮಾಲಕರು ತಮ್ಮ ದರೋಡೆ ಕೋರ ನೀತಿಯನ್ನು ಅನುಸರಿಸಿ ಪ್ರಯಾಣ ದರದಲ್ಲಿ ಹೆಚ್ಚಳ ಮಾಡಿದ್ದರು.

ಬಸ್ಸು ಮಾಲಕರ ಕಿಸೆಗಳ್ಳತನವನ್ನು ವಿರೋಧಿಸಿ ಡಿ.ವೈ.ಎಫ್.ಐ.ನ 60 ಕಾರ್ಯಕರ್ತರು ರಾಸ್ತಾ ರೋಖೋ ಚಳುವಳಿ ನಡೆಸಿದರು.

ಅಂಗನವಾಡಿ ಕಾರ್ಯಕರ್ತೆಯರ ಯಶಸ್ವಿ ಪಾರ್ಲಿಮೆಂಟ್ ಚಲೋ

ಹೊಸ ಆರ್ಥಿಕ ನೀತಿಯ ಫಲವಾಗಿ ಕೇಂದ್ರ ಸರ್ಕಾರದ ಸಮಗ್ರ ಶಿಶು ಅಭಿವೃದ್ಧಿಯೋಜನೆಯಲ್ಲಿ ದೇಶಾದ್ಯಂತ 6-7 ಲಕ್ಷ ಮಹಿಳೆಯರು ದುಡಿಯುತ್ತಿದ್ದಾರೆ. ಇಂತಹ ಅಂಗನವಾಡಿ ಕೇಂದ್ರಗಳನ್ನು ಸಮರ್ಪಕವಾಗಿ ನಡೆಸಲು ಸಾಧ್ಯವಾಗುತ್ತಿಲ್ಲವೆಂಬ ಸೋಗು ಹಾಕಿ ಈ ಕೇಂದ್ರಗಳನ್ನು ಖಾಸಗೀಕರಣ ಮಾಡುತ್ತಿರುವ ಸರ್ಕಾರದ ನೀತಿಯನ್ನು ವಿರೋದಿಸಲಿಕ್ಕಾಗಿ ಇಡೀ ದೇಶಾದ್ಯಂತ ಸುಮಾರು 15 ಸಾವಿರಕ್ಕೂ ಹೆಚ್ಚು ಅಂಗನವಾಡಿ ನೌಕರರು ಮೇ 5 ರಂದು ಸಂಯುಕ್ತ ಸಂಘರ್ಷ ಸಮಿತಿಯ ಆಶ್ರಯದಲ್ಲಿ ನಡೆದ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮದಲ್ಲಿ citu, aituc, hms, nftu, hmkp ಸಂಘಟನೆಗಳಿಂದ ಪಾಲ್ಗೊಂಡಿದ್ದರು. ನವ ದೆಹಲಿಯ ರಾಮ್ ಲೀಲಾ ಮೈದಾನದಿಂದ ಹೊರಟ ಮೆರವಣಿಗೆ ಜಂತರ-ಮಂತರ್ ರನ್ನಲ್ಲಿ ಸಮಾವೇಶಗೊಂಡಿತು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾಂ. ವಿಮಲಾ ರಣದಿವೆ ವಹಿಸಿದ್ದು, ಈ ಸಭೆಯಲ್ಲಿ ಎಲ್ಲಾ ಸಂಘಟನೆಗಳ ಪ್ರತಿನಿದಿಗಳು ಮಾತಾನಾಡಿದರು. ಕರ್ನಾಟಕದಿಂದ ಸಿ.ಐ.ಟಿ.ಯು ನಿಂದ ವರಲಕ್ಷ್ಮಿ, ಹೆಚ್.ಕೆ.ಪಿ ಯಿಂದ ಬಸವರಾಜು, ಎ.ಐ.ಟಿ.ಯು.ಸಿ ಯಿಂದ ಗಿರಿಜಣ್ಣ ಮಾತಾನಾಡಿದರು.

ಈ ಕಾರ್ಯಕ್ರಮಕ್ಕೆ ಕೋಲಾರ, ಬೆಂಗಳೂರು, ಬೀದರ್, ಚಿತ್ರದುರ್ಗ, ಬಳ್ಳಾರಿ, ಗುಲ್ಬರ್ಗಾ ಮತ್ತು ಮಂಗಳೂರು ಜಿಲ್ಲೆಗಳಿಂದ ಸಿ.ಐ.ಟಿ.ಯು ಅಡಿಯಲ್ಲಿ 200 ಜನರು ಪಾಲ್ಗೊಂಡಿದಿದರು.

ಈ ಸಂದರ್ಭದಲ್ಲಿ ಸಂಯುಕ್ತ ಸಂಘರ್ಷ ಸಮಿತಿಯ ನಿಯೋಗವೊಂದು ಪ್ರದಾನ ಮಂತ್ರಿಗಳ ಭೇಟಿಗಾಗಿ ಹೋದಾಗ ಅವರಿಲ್ಲದೆ ಹೆಚ್.ಆರ್.ಡಿ. ಮಂತ್ರಿಯನ್ನು ಭೇಟಿ ಮಾಡಿ

1. ಅಂಗನವಾಡಿ ಕೇಂದ್ರಗಳ ಖಾಸಗೀಕರಣ ನಿಲ್ಲಬೇಕು.
2. ಅಂಗನವಾಡಿ ನೌಕರರ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳವನ್ನು ತಪ್ಪಿಸುವುದು.
3. ಅಂಗನವಾಡಿ ನೌಕರರನ್ನು ಕಾಯಂಗೊಳಿಸಿ, ಸಕ್ಕಾರಿ ನೌಕರರೆಂದು ಪರಿಗಣಿಸಬೇಕೆಂಬುದು ಮುಖ್ಯ ಬೇಡಿಕೆಗಳಾಗಿದ್ದವು.



ಈ ಬೇಡಿಕೆಗಳನ್ನು ಸ್ವೀಕರಿಸಿದ ಮಾನವ ಸಂಪನ್ಮೂಲ ಮಂತ್ರಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೇಂದ್ರ ಸಚಿವೆ ಶ್ರೀಮತಿ ಬಸವರಾಜೇಶ್ವರಿ ಈ ಬೇಡಿಕೆಗಳನ್ನು ಪರಿಶೀಲಿಸಿ ಆಯಾಯ ರಾಜ್ಯದ ಕನಿಷ್ಟ ಕೂಲಿಯನ್ನು ಕೊಡಲು ಮತ್ತು ಅಂಗನವಾಡಿ ಕೇಂದ್ರಗಳನ್ನು ಖಾಸಗಿಕರಣ ಮಾಡುವುದಿಲ್ಲ ಎಂಬ ಭರವಸೆಯನ್ನು ಕೊಟ್ಟಿದ್ದಾರೆ.

ಕಲ್ಲಿದ್ದಲು ರಂಗದಲ್ಲಿ ವೇತನ ಒಪ್ಪಂದದಲ್ಲಿ ಅನ್ಯಾಯ: ಸಿಐಟಿಯು ವಿರೋಧ

ಮೇ 8 ರಂದು ಅಖಿಲ ಭಾರತ ಪ್ರತಿಭಟನೆ

ಇತ್ತೀಚೆಗೆ ಕಲ್ಲಿದ್ದಲು ಕಂಪನಿಗಳ ಆಡಳಿತ ವರ್ಗ ಹಾಗೂ ಸಿಐಟಿಯು ಬಿಟ್ಟು ಇತರ ಸಂಘಟನೆಗಳ ನಡುವೆ ಸಹಿ ಆಗಿರುವ ತಿಳುವಳಿಕೆ ಪತ್ರವನ್ನು ಅನುಮೋದಿಸಲು ಸಿಐಟಿಯು ನಿರಾಕರಿಸಿದೆ. ಇದರ ವಿರುದ್ಧ ಮೇ 8 ರಂದು ಅಖಿಲ ಭಾರತ ಪ್ರತಿಭಟನಾ ದಿನಾಚರಣೆ ನಡೆಸಲು 7 ಲಕ್ಷ ಕಲ್ಲಿದ್ದಲು ಕಾರ್ಮಿಕರಿಗೆ ಅದು ಕರೆ ನೀಡಿದೆ.

ಜುಲೈ 1, 1991ರಿಂದ ಜ್ಯಾರಿಗೆ ಬರುವ ಈ ಒಪ್ಪಂದ ಕಲ್ಲಿದ್ದಲು ಕಾರ್ಮಿಕರಿಗೆ ಸಾಕಷ್ಟು ಸೌಲಭ್ಯ ಕೊಡುವುದಿಲ್ಲ. ಉಕ್ಕು ಮತ್ತು ಇತರ ಸಾರ್ವಜನಿಕ ಉದ್ದಿಮೆಗಳಲ್ಲಿರುವುದಕ್ಕಿಂತ ಬಹಳ ಕಮ್ಮಿ ಮಟ್ಟದಲ್ಲಿದೆ. ಈ ತಿಳುವಳಿಕೆ ಪತ್ರಕ್ಕೆ ಸಹಿ ಹಾಕದಿರುವ ಬಗ್ಗೆ ವಿವರಣೆ ನೀಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ. ಫಂದೆ ಈಗ ನೀಡಿರುವ ಹೆಚ್ಚುವರಿ ಕನಿಷ್ಠ ಹೆಚ್ಚಳ 85ರೂ. ಮಾತ್ರ. ಉಕ್ಕು ಎನ್.ಟಿ.ಪಿ.ಸಿ. ಮತ್ತು ಬೆಂಗಳೂರಿನ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಇನ್ನೂ ಹೆಚ್ಚು ನೀಡಲಾಗಿದೆ ಎಂದರು.

ಹಿಂದಿನ ವೇತನ ಒಪ್ಪಂದಗಳಲ್ಲಿ ಕಲ್ಲಿದ್ದಲು ಕಾರ್ಮಿಕರ ವೇತನ ಇತರ ಪ್ರಮುಖ ಸಾರ್ವಜನಿಕ ಉದ್ದಿಮೆಗಳಲ್ಲಿನ ವೇತನಕ್ಕೆ ಸರಿಸುಮಾರಾಗಿ ಸಮನಾಗಿತ್ತು. ಈಗ ಈ ಇತ್ಯರ್ಥದಿಂದ ಇದು ಕಮ್ಮಿಯಾಗಿದೆ ಎಂದು ಫಂದೆ ಹೇಳಿದ್ದಾರೆ. ಕಲ್ಲಿದ್ದಲು ಕಾರ್ಮಿಕರು ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕೆಲಸ ಮಾಡಬೇಕಾಗಿದ್ದರೂ ಅವರಿಗೆ ನ್ಯಾಯ ನೀಡಿಲ್ಲ ಎಂದು ಫಂದೆಯವರು ಇಂಟಕ್, ಎ.ಐ.ಟಿ.ಯು.ಸಿ., ಹೆಚ್.ಎಂ.ಎಸ್. ಮತ್ತು ಬಿ.ಎಂ.ಎಸ್. ಗೆ ಸೇರಿದ ಸಂಘಗಳು ಈ ಕುರಿತು ತಳೆದ ನಿಲುವಿನ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ.

ವೇತನವಲ್ಲದೆ ನೆಲದಡಿ ಕೆಲಸ ಮಾಡುವ ಬಗ್ಗೆ ಭತ್ಯೆ ಕಮ್ಮಿಯಾಗಿದೆ. ಇದರಿಂದ ಶೇ.60 ಕಾರ್ಮಿಕರಿಗೆ ತೊಂದರೆಯಾಗಿದೆ. ಈ ಭತ್ಯೆಯನ್ನು ಮೂಲವೇತನವೆಂದು ಪರಿಗಣಿಸಿದ್ದರೂ ಎರಡು ವರ್ಷಗಳ ಹೆಚ್ಚಳ ಬಾಕಿಯಿಂದ ಕಾರ್ಮಿಕರು ವಂಚಿತರಾಗುತ್ತಾರೆ ಎಂದು ಫಂದೆ ವಿವರಿಸಿದರು. ಮನೆ ಬಾಡಿಗೆ ಭತ್ಯೆಯನ್ನು ೪೫ರಿಂದ 80 ರೂ ಗೇರಿಸಲಾಗಿದೆ. ಆದರೆ ಕಾರ್ಮಿಕರಿಗೆ ಮನೆ ಕಟ್ಟಿಕೊಡುವ ಭರವಸೆ ಇಲ್ಲ. ರಾತ್ರಿ ಪಾಳಿ ಭತ್ಯೆಯನ್ನು 3.50ರಿಂತ 5 ರೂ. ಗೇರಿಸಲಾಗಿದೆ. ಎನ್.ಟಿ.ಪಿ.ಸಿ. ಇದು 10 ರೂ., ಇದೆ ಎಂದು ಫಂದೆ ಹೇಳಿದ್ದಾರೆ.

(ಐ.ಎನ್.ಎಸ್.)

ಎಸ್.ಎಫ್.ಐ. ರಾಜ್ಯ ಶಿಬಿರ

ಎಸ್.ಎಫ್.ಐ. ಕರ್ನಾಟಕ ರಾಜ್ಯ ಮಟ್ಟದ ಶಿಬಿರವು ಜೂನ್ 12 ರಿಂದ 15, 1995ರ ವರೆಗೆ ಕೋಲಾರದಲ್ಲಿ ನಡೆಯಲಿದೆ ಎಂದು ರಾಜ್ಯ ಸಮಿತಿ ಪ್ರಕಟಣೆ ತಿಳಿಸಿದೆ

ಮೇ 9, 1995

ಫ್ಯಾಸಿಸಂ ಮೇಲೆ ವಿಜಯದ 50ನೇವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಶೇಷ ಲೇಖನ

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟರನ್ನು ಸದೆಬಡೆದ ಸಶಸ್ತ್ರ ಹೋರಾಟದಲ್ಲಿ ಮೂರು ಪ್ರಧಾನ ತುಕಡಿಗಳನ್ನು ಕಾಣಬಹುದು- ಸೋವಿಯೆತ್ ಕೆಂಪು ಸೇನೆ, ಬ್ರಿಟನ್, ಫ್ರಾನ್ಸ್, ಅಮೇರಿಕಾ ಮೊದ ಮಿತ್ರಪಕ್ಷದ ಸೇನೆಗಳು ಹಾಗೂ ಯುರೋಪಿನ ಜನತೆ ನಡೆಸಿದ ವಿಮೋಚನಾ ಸಮರ. ಪಾರ್ಟಿಸಾನ್ (ಪಕ್ಷವರ್ತಿ) ಹೋರಾಟಗಾರರು ಎಂದು ಈಗ ಇತಿಹಾಸಪ್ರಸಿದ್ಧರಾಗಿರುವ ಜನತಾ ವಿಮೋ ಹೋರಾಟಗಾರರು ವಹಿಸಿದ ಮಹತ್ವದ ಪಾತ್ರದ ಒಂದು ಸ್ಥೂಲಚಿತ್ರ ನೀಡಿದ್ದಾರೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಪಿ. ರಾಮಚಂದ್ರನ್.

ಫ್ಯಾಸಿಸಂ ವಿರೋಧಿ ಹೋರಾಟದ ಮುಂಚೂಣಿಯಲ್ಲಿ ಕಮ್ಯುನಿಸ್ಟರ ಧೀರ ಪಾತ್ರ

-ಪಿ. ರಾಮಚಂದ್ರನ್

ಯುರೋಪಿನಲ್ಲಿ ಫ್ಯಾಸಿಸ್ಟ್-ನಾಝಿ ಮಿಲಿಟರಿ ಶಕ್ತಿ ಧ್ವಂಸಗೊಂಡ ಚಾರಿತ್ರಿಕ ಘಟನೆಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರಗತಿಶೀಲ ಮಾನವಕುಲ ಈ ಮಹತ್ತಾದ ಸಾಧನೆ ಈಡೇರುವಲ್ಲಿ ಕಮ್ಯುನಿಸ್ಟರ ಅಮೂಲ್ಯ ಕೊಡುಗೆಯನ್ನು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತದೆ. ಫ್ಯಾಸಿಸ್ಟ್ ಸೇನೆಯನ್ನು ಅಂತಿಮವಾಗಿ ಧ್ವಂಸಮಾಡಿದ ಸಶಸ್ತ್ರ ಹೋರಾಟದಲ್ಲಿ ಮೂರು ಪ್ರಮುಖ ಭಾಗಗಳು ಸ್ಪಷ್ಟವಾಗಿ ಎದ್ದು ಕಾಣುತ್ತವೆ. ಸೋವಿಯೆಟ್ ಒಕ್ಕೂಟದ ಬಲಿಷ್ಠ ಕೆಂಪು ಸೇನೆ, ಮಿತ್ರ ದೇಶಗಳ ಸೇನೆಗಳು ಮತ್ತು ಯುರೋಪಿನ ಜನತೆ ನಡೆಸಿದ ವಿಮೋಚನಾ ಸಮರ ಇವೇ ಆ ಮೂರು ಪ್ರಧಾನ ಅಂಶಗಳು.

ನಾಝಿ ಆಕ್ರಮಣಕ್ಕೆ ತುತ್ತಾದ ಯುರೋಪಿನ ಪ್ರತಿಯೊಂದು ದೇಶದಲ್ಲಿ ನಾಝಿಗಳ ಆಕ್ರಮಣಕೋರ ಯುದ್ಧ ಯಂತ್ರದ ವಿರುದ್ಧ ನಡೆಸಿದ ವಿಮೋಚನಾ ಸಮರ ಮಾನವ ಧೈರ್ಯ, ಸಾಹಸ ಹಾಗೂ ತ್ಯಾಗದ ಗಾಥೆ. ಲಕ್ಷಾಂತರ ಹೋರಾಟಗಾರರು ರಾಕ್ಷಸೀ ನಾಝಿ ಪಡೆಗಳ ಅಮಾನವೀಯ ಹಾಗೂ ಭಯಂಕರ ಧಾಳಿಗಳನ್ನು ಎದುರಿಸುತ್ತಿದ್ದಾಗ ತಲೆಮರೆಸಿಕೊಂಡಿರಬೇಕಾದ ಜೀವನದ ಕಟ್ಟು ನಿಟ್ಟುಗಳನ್ನು, ಸವಾಲುಗಳನ್ನು ಎದುರಿಸಿ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಶತ್ರುಗಳೊಂದಿಗೆ ಸೆಣಸಿದರು. ಈ ಸಮರದಲ್ಲಿ ಒಂದು ಪರಾಕ್ರಮಿಶಾಲೀ ಹೋರಾಟದ ಎಲ್ಲಾ ವಿಧಾನಗಳನ್ನೂ ಬಳಸಿದರು. -ಶತ್ರು ಪಾಳೆಯದ ಹಿಂದೆ ಬುಡಮೇಲು ಕೃತ್ಯ, ಶತ್ರುಗಳ ಮಿಲಿಟರಿ ಸ್ಥಾವರಗಳ ಮೇಲೆ ಧಾಳಿಯಿಕ್ಕಿ ಓಡಿ ಹೋಗುವುದು, ಇಂದಿಲ್ಲಿ ನಾಳೆ ಇನ್ನೊಂದೆಡೆ ಗೆರಿಲ್ಲಾ ಯುದ್ಧ, ನಂತರ ನೆಲೆಗಳ, ವಿಮೋಚಿತ ಪ್ರದೇಶಗಳ ಸ್ಥಾಪನೆ, ಎಲ್ಲೆಲ್ಲಿ ಸಾಧ್ಯವೋ ಸಾಮೂಹಿಕ ಪ್ರತಿಭಟನಾ ಕಾರ್ಯಾಚರಣೆಗಳು, ರಾಷ್ಟ್ರೀಯ ವಿಮೋಚನಾ ಸೇನೆಗಳ ರಚನೆ ಇತ್ಯಾದಿ ಇತ್ಯಾದಿ. ನಂತರ ಸೋವಿಯೆತ್ ಕೆಂಪು ಸೇನೆ ಮುನ್ನಡೆ ಸಾಧಿಸಲಾರಂಭಿಸಿದಾಗ ಅದರ ಲಾಭ ಪಡೆದು ನಾಝಿಗಳ ವಿರುದ್ಧ ಹಣಾಹಣಿ ಹೋರಾಟಕ್ಕೂ ಇಳಿದರು. ಇಂದು ನೆನಪಿಸಿಕೊಳ್ಳಬೇಕಾದ ಅತ್ಯಂತ ಮಹತ್ವದ ಸಂಗತಿಯೆಂದರೆ ಈ ಧೀರ-ವೀರ ಹೋರಾಟಗಳನ್ನು ಬಹಳಷ್ಟು ಕಡೆ ಆರಂಭಿಸಿ, ನೇತೃತ್ವ ನೀಡಿದವರು ಯುರೋಪಿನ ವಿವಿಧ ದೇಶಗಳ ಕಮ್ಯುನಿಸ್ಟ್ ಪಕ್ಷಗಳು.



ಫ್ಯಾಸಿಸಂನ ಸ್ವರೂಪವನ್ನು ಆರಂಭದಲ್ಲೇ ಗುರುತಿಸಿದರು.

1939-45ರ ಘಟನೆಗಳನ್ನು ಪರಿಶೀಲಿಸುವಾಗ ಫ್ಯಾಸಿಸಂನ ಸೋಲಿಗೆ ಕಾಣಿಕೆ ನೀಡುವಲ್ಲಿ ಅತ್ಯಂತ ನಿರ್ಣಾಯಕ ಶಕ್ತಿಗಳೆಂದರೆ ಕಮ್ಯುನಿಸ್ಟರು ಎಂಬುದು ಎದ್ದು ಕಂಡು ಬರುತ್ತದೆ. ಇದು ಸಹಜವೇ ಆಗಿತ್ತು. ಏಕೆಂದರೆ ಫ್ಯಾಸಿಸಂನ ಮುನ್ನಡೆಯ ನಿಜವಾದ ಅರ್ಥದ ಅರಿವಾದದ್ದು ಕಮ್ಯುನಿಸ್ಟ್ ಆಂದೋಲನಕ್ಕೇ.

ಬಂಡವಾಳಶಾಹಿ, ಉದಾರವಾದೀ ಬುದ್ಧಿಜೀವಿಗಳಲ್ಲಿ, ಲೇಖಕರಲ್ಲಿ ಬಹಳ ಮಂದಿ ಫ್ಯಾಸಿಸಂ ರಾಷ್ಟ್ರೀಯ ಭಾವನೆಗಳ ಆಧಾರದ ಮೇಲೆ ಮೂಡಿ ಬಂದಿದ್ದು ಒಂದು ಶಿಸ್ತಿನ ಹಾಗೂ ವ್ಯವಸ್ಥಿತ ಸಮಾಜ ಬೇಕೆಂಬ ಜನರ ಆಕಾಂಕ್ಷೆಯನ್ನು, ಮತ್ತು ಕಮ್ಯುನಿಸ್ಟ್ ಸರ್ವಾಧಿಕಾರದ ಬಗ್ಗೆ ಜುಗುಪ್ಸೆಯನ್ನು ಪ್ರತಿಬಿಂಬಿಸುವಂತದ್ದು ಎಂದೆಲ್ಲಾ ವಿವರಿಸುತ್ತಿದ್ದಾಗ ಆರಂಭದಿಂದಲೇ ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮಾನವ ಹಕ್ಕು ಮಾತ್ರವಲ್ಲ ಮಾನವ ನಾಗರಿಕತೆಯ ಮಹಾನ್ ಮೌಲ್ಯಗಳಿಗೇ ಬೆದರಿಕೆಯೊಡ್ಡಿದ್ದ ಫ್ಯಾಸಿಸಂನ ಪಿಡುಗನ್ನು ಸ್ಪಷ್ಟವಾಗಿ ಗುರುತಿಸಿದ ಶ್ರೇಯಸ್ಸು ಕಮ್ಯುನಿಸ್ಟರಿಗೆ ಸಲ್ಲಬೇಕು.

ಇಟಲಿಯಲ್ಲಿ 1923ರಲ್ಲಿ ಫ್ಯಾಸಿಸಂ ಬಿರುಗಾಳಿಯಂತೆ ಅಧಿಕಾರ ಪಟ್ಟಕ್ಕೇರಿತು. ಅಲ್ಲಿ ಆರಂಭದಿಂದಲೇ ಕಮ್ಯುನಿಸ್ಟರು ಫ್ಯಾಸಿಸ್ಟ್-ವಿರೋಧಿ ಆಂದೋಲನ ಸಂಘಟಿಸಿದರು. ಇತರ ಪ್ರತಿಯೊಂದು ದೇಶದಲ್ಲೂ ಎರಡನೇ ಮಹಾಯುದ್ಧದ ಮೊದಲೇ ಕಮ್ಯುನಿಸ್ಟರು ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ದೃಢ ಹೋರಾಟ ನಡೆಸಿದ್ದರು.

ಫ್ಯಾಸಿಸಂನ ಜರ್ಮನ್ ರೂಪವಾದ ನಾಝಿವಾದ ಅಲ್ಲಿ ತ್ವರಿತವಾಗಿ ಮುನ್ನಡೆಯುತ್ತಿದ್ದಾಗ ಅದರ ವಿರುದ್ಧ ಕಾರ್ಮಿಕ ವರ್ಗ ಮತ್ತು ಕಮ್ಯುನಿಸ್ಟರು ಅತ್ಯಂತ ದೃಢ ಹೋರಾಟ ನಡೆಸಿದರು. ನಾಝಿಗಳು ಕೂಡಾ ಕಮ್ಯುನಿಸ್ಟರು ತಮ್ಮ ಪ್ರಧಾನ ಶತ್ರುಗಳೆಂದು ಗುರುತಿಸಿ 1933ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಅತ್ಯಂತ ನಿರ್ದಯ ರೀತಿಯಲ್ಲಿ ಕಮ್ಯುನಿಸ್ಟರನ್ನು ಧ್ವಂಸ ಮಾಡಲು ಪ್ರಯತ್ನಿಸಿದರು. ಕೆಲವೇ ವರ್ಷಗಳಲ್ಲಿ ಸಾವಿರಾರು ಜರ್ಮನ್ ಕಮ್ಯುನಿಸ್ಟರ ಸಾಮೂಹಿಕ ಹತ್ಯೆ ನಡೆಯಿತು. ನಾಝಿಗಳು ಕುಖ್ಯಾತ ರೈಕ್‌ಸ್ಟಾಗ್ (ಸಂಸತ್ ಭವನ) ಅಗ್ನಿಕಾಂಡ ಪಿತೂರಿಯನ್ನು ಸೃಷ್ಟಿಸಿ ಕಮ್ಯುನಿಸ್ಟರು ಜರ್ಮನಿಯ ಸಂಸತ್ತಿನ ಕಟ್ಟಡವನ್ನು ಸುಟ್ಟು ಹಾಕಲು ಪ್ರಯತ್ನಿಸಿದರು ಎಂಬ ಆರೋಪ ಹಾಕಿದರು. 'ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯ'ದ ಪ್ರಧಾನ ಕಾರ್ಯದರ್ಶಿ ಹಾಗೂ ಮಹಾನ್ ಕಮ್ಯುನಿಸ್ಟ್ ಮುಖಂಡ ಜೋರ್ಜಿ ದಿಮಿತ್ರೋವ್ ಈ ಮೊಕದ್ದಮೆಯಲ್ಲಿ ಪ್ರಧಾನ ಆರೋಪಿ. ವಿಚಾರಣೆ ಕಾಲದಲ್ಲಿ ನಾಝಿಗಳನ್ನು ಧೈರ್ಯದಿಂದ, ನಿರ್ಭಯವಾಗಿ ಖಂಡಿಸಿ ಅವರು ಫ್ಯಾಸಿಸಂ ವಿರುದ್ಧ ಸೆಣಸುವ ಕಮ್ಯುನಿಸ್ಟರ ದೃಢ ನಿರ್ಧಾರದ ಪ್ರತೀಕವಾದರು.

> **ಬಂಡವಾಳಶಾಹಿ, ಉದಾರವಾದೀ ಬುದ್ಧಿಜೀವಿಗಳಲ್ಲಿ, ಲೇಖಕರಲ್ಲಿ ಬಹಳ ಮಂದಿ ಫ್ಯಾಸಿಸಂ ರಾಷ್ಟ್ರೀಯ ಭಾವನೆಗಳ ಆಧಾರದ ಮೇಲೆ ಮೂಡಿ ಬಂದಿದ್ದು ಒಂದು ಶಿಸ್ತಿನ ಹಾಗೂ ವ್ಯವಸ್ಥಿತ ಸಮಾಜ ಬೇಕೆಂಬ ಜನರ ಆಕಾಂಕ್ಷೆಯನ್ನು, ಮತ್ತು ಕಮ್ಯುನಿಸ್ಟ್ ಸರ್ವಾಧಿಕಾರದ ಬಗ್ಗೆ ಜುಗುಪ್ಸೆಯನ್ನು ಪ್ರತಿಬಿಂಬಿಸುವಂತದ್ದು ಎಂದೆಲ್ಲಾ ವಿವರಿಸುತ್ತಿದ್ದಾಗ ಆರಂಭದಿಂದಲೇ ರಾಷ್ಟ್ರೀಯ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಮಾನವ ಹಕ್ಕು, ಮಾತ್ರವಲ್ಲ ಮಾನವ ನಾಗರಿಕತೆಯ ಮಹಾನ್ ಮೌಲ್ಯಗಳಿಗೇ ಬೆದರಿಕೆಯೊಡ್ಡಿದ್ದ ಫ್ಯಾಸಿಸಂನ ಪಿಡುಗನ್ನು ಸ್ಪಷ್ಟವಾಗಿ ಗುರುತಿಸಿದ ಶ್ರೇಯಸ್ಸು ಕಮ್ಯುನಿಸ್ಟರಿಗೆ ಸಲ್ಲಬೇಕು.**

ಫ್ಯಾಸಿಸಂನ ವಿರುದ್ಧ ಈ ಹೋರಾಟದ ಅನುಭವಗಳ ಆಧಾರದ ಮೇಲೆಯೇ ಜುಲೈ 25 ರಿಂದ ಆಗಸ್ಟ್ 21, 1935ರ ವರೆಗೆ ಸಭೆ ಸೇರಿದ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯದ ಐತಿಹಾಸಿಕ 7ನೇ ಮಹಾಧಿವೇಶನ ಫ್ಯಾಸಿಸಂನ ಬೆದರಿಕೆಯನ್ನು ಚರ್ಚಿಸಿ ಈ ಅಪಾಯದ ವಿರುದ್ಧ ಹೋರಾಟದ ರಣನೀತಿ ಹಾಗೂ ಕಾರ್ಯತಂತ್ರಗಳನ್ನು ರೂಪಿಸಿತು. ಪ್ರತಿಯೊಂದು ದೇಶದಲ್ಲಿ ಫ್ಯಾಸಿಸಂ-ವಿರೋಧಿ ಹೋರಾಟಗಳಲ್ಲಿ ಮುಂಚೂಣಿಯಲ್ಲಿರಬೇಕೆಂದು ಹಾಗೂ ಫ್ಯಾಸಿಸ್ಟ್-ವಿರೋಧಿ ಸಂಯುಕ್ತ ರಂಗದ ರೂಪದಲ್ಲಿ ಫ್ಯಾಸಿಸ್ಟ್ ವಿರೋಧಿ ಶಕ್ತಿಗಳ ಸಾಧ್ಯವಾದಷ್ಟು ವ್ಯಾಪಕ ಐಕ್ಯತೆ ಬೆಸೆಯಬೇಕೆಂದು ಕರೆ ನೀಡಿತು.

ಈ ಮಹಾಧಿವೇಶನ ಒಂದು ವಿಶ್ವಯುದ್ಧದ ಬೆದರಿಕೆ ಬರಲಿದೆ ಎಂದು ಹೇಳಿ ಅದರ ವಿಶ್ಲೇಷಣೆ ಮಾಡಿತು; ಜರ್ಮನಿ ಇಟಲಿ ಹಾಗೂ ಜಪಾನ್‌ನ ಫ್ಯಾಸಿಸ್ಟ್ ಪ್ರಭುತ್ವಗಳೆಂದರೆ ಸಾ[...] ಜ್ಯಶಾಹಿ ಬಣದ ಅತ್ಯಂತ ಆಕ್ರಮಣ[...] ದೇಶಗಳು, ಅವು ಎಲ್ಲಾ ದೇಶಗಳ ರಾಷ್ಟ್ರೀ[...] ಸ್ವಾತಂತ್ರ್ಯಕ್ಕೆ ಬೆದರಿಕೆಯೊಡ್ಡಿವೆ ಎಂದಿತು. [...] ಶಾಂತಿಪ್ರಿಯ ಶಕ್ತಿಗಳು ಮತ್ತು ಕಮ್ಯುನಿ[...] ಒಂದು ಬಲಿಷ್ಠ ಯುದ್ಧ-ವಿರೋಧಿ ಆಂದೋ[...]ಲನ ಕಟ್ಟಬೇಕೆಂದು ಪ್ರೋತ್ಸಾಹಿಸಿತು. 1935[...] ಗಲೇ 'ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯ ಸಾಮ[...] ಶಾಹಿ ಶಕ್ತಿ[...] ಸಣ್ಣ ದೇಶ[...] ಮೇಲೆ ಸ[...] ಮಾಡುವ [...] ತೆಗಳನ್ನು ಮು[...] ಡಿತ್ತು ಎಂ[...] ಅತ್ಯಂತ ಮ[...] ಪೂರ್ಣ [...] ಗತಿ..- [...] ದೇಶಗಳು [...] ಮಣಕೋ[...] ವಿರುದ್ಧ [...] ರುವ ಯ[...] ಒಂದು ವಿಮೋಚನಾ ಯುದ್ಧದ ಸ್ವ[...] ಪಡೆಯಬಹುದು. ಕಮ್ಯುನಿಸ್ಟರು ರಾಷ್ಟ್ರೀ[...] ಸ್ವಾತಂತ್ರ್ಯಕ್ಕಾಗಿ ಹೋರಾಡುವವರಲ್ಲಿ ಮುಂ[...] ಣಿಯಲ್ಲಿರಬೇಕು. ಕೊನೆಯವರೆಗೂ ವಿ[...] ಚನಾ ಸಮರ ನಡೆಸಬೇಕು" ಎಂದು ಸಾರಿತ್ತು.

ಹೀಗೆ 1935ರಷ್ಟು ಹಿಂದೆಯೇ ವಿಶ್ವ ಕ[...] ನಿಸ್ಟ್ ಆಂದೋಲನ ಫ್ಯಾಸಿಸಂ ಮತ್ತು ಯು[...] ವಿರುದ್ಧ ಪ್ರಜಾಪ್ರಭುತ್ವಕ್ಕಾಗಿ ಮತ್ತು ರಾಷ್ಟ್ರೀ[...] ಸ್ವಾತಂತ್ರ್ಯಕ್ಕಾಗಿ ದೃಢ ಹೋರಾಟದ ರಣ[...] ಊದಿತ್ತು.

ಸ್ಪೇನಿನಲ್ಲಿ ಮೊದಲ ಪರೀಕ್ಷೆ

ಫ್ಯಾಸಿಸಂ ಮತ್ತು ಅದರ ವಿರುದ್ಧ [...] ಶಕ್ತಿಗಳು ಮೊದಲ ಬಾರಿಗೆ ಮುಖಾಮುಖಿ[...] ದದ್ದು ಸ್ಪೇನ್‌ನ ಮೂಸೆಯಲ್ಲಿ. 1933-3[...] ಸ್ಪೇನಿನಲ್ಲಿ ಕ್ರಾಂತಿಕಾರಿ ಸಾಮೂಹಿಕ ಹೋರಾ[...] ಗಳು ಮುನ್ನಡೆ ಸಾಧಿಸಿದಾಗ ಫಲಾಂಜ್ ಪಾ[...]

ಸಿಐಟಿಯುಗೆ 25 ವರ್ಷ

'ಐಕ್ಯತೆ ಮತ್ತು ಹೋರಾಟ"ದ ಘೋಷಣೆಯೊಂದಿಗೆ ಜನ್ಮ ತಳೆದ ಸಿಐಟಿಯು



-ವಿ.ಜೆ.ಕೆ. ನಾಯರ್

ಸಿಐಟಿಯು ಈ ವರ್ಷ ತನ್ನ ಬೆಳ್ಳಿ ಹಬ್ಬವನ್ನು ಆಚರಿಸುತ್ತಿದೆ. ಮೇ 30, 1970 ರಂದು ಕಲ್ಕತ್ತೆಯಲ್ಲಿ ಸಿಐಟಿಯು ಸ್ಥಾಪನೆಗೊಂಡಿತು. ಆಗ ಕಲ್ಕತ್ತೆಯಲ್ಲಿ ನಡೆದ ಅಖಿಲ ಭಾರತ ಟ್ರೇಡ್ ಯೂನಿಯನ್ ಸಮ್ಮೇಳನವನ್ನು ಎ.ಐ.ಟಿ.ಯು.ಸಿ.ಯ ಸಮ್ಮೇಳನವಾಗಿ ಕರೆಯಲಾಗಿತ್ತು. ಆ ವೇಳೆಗಾಗಲೇ ನಡೆದಿದ್ದ ಗುಂಟೂರು ಅಧಿವೇಶನವನ್ನು ಬಹಿಷ್ಕರಿಸಿದವರು ಈ ಸಮ್ಮೇಳನ ಕರೆದಿದ್ದರು.

ಎ.ಐ.ಟಿ.ಯು.ಸಿ. ಒಂದು ಏಕೀಕೃತ ಆಧಾರದಲ್ಲಿ ಹಾಗೂ ಕಾರ್ಮಿಕ ವರ್ಗದ ಹೋರಾಟಗಳನ್ನು ನಡೆಸುವ ಒಂದು ಸಂಘಟನೆಯಾಗಿ ಒಂದು ಸಂಘಟನೆಯಾಗಿ ಅದು ಕಾರ್ಯನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಕಲ್ಕತ್ತೆಯಲ್ಲಿ ಎ.ಐ.ಟಿ.ಯು.ಸಿ. ಸಮ್ಮೇಳನ ಕರೆಯುವುದೇ ಆಗಿನ ಎಐಟಿಯುಸಿಯ ನಾಯಕತ್ವದ ಪ್ರಬಲ ವಿಭಾಗಕ್ಕೆ ಒಪ್ಪಿಗೆಯಿರಲಿಲ್ಲ.

ಆಗ ಎ.ಐ.ಟಿ.ಯು.ಸಿ. ಪ್ರಧಾನ ಕಾರ್ಯದರ್ಶಿಯಾಗಿದ್ದ ಎಸ್.ಎ. ಡಾಂಗೆ ಹಾಗೂ ಅವರಿಗೆ ವಿಧೇಯರಾಗಿದ್ದವರಿಗೆ ಎ.ಐ.ಟಿ.ಯು.ಸಿ. ಒಡಕಿಗೆ ಕಾರಣವಾದ ಈ ಯಾವ ಅಂಶಗಳನ್ನು ಸರಿಪಡಿಸುವ ಬಗ್ಗೆಯೂ ಆಸಕ್ತಿಯಿರಲಿಲ್ಲ.

ವರ್ಗಶಾಮೀಲಿನ ನಿಲುವಿನಿಂದಾಗಿ

ಕಲ್ಕತ್ತೆಯಲ್ಲಿ 1970ರಲ್ಲಿ ಎ.ಐ.ಟಿ.ಯು.ಸಿ. ಸಮ್ಮೇಳನ ನಡೆಸುವ ಪ್ರಸ್ತಾವಕ್ಕೆ ತನ್ನದೇ ವಿಶೇಷ ಅರ್ಥವಿತ್ತು. 1969ರಲ್ಲಿ ಸಂಯುಕ್ತರಂಗ ಮಂತ್ರಿಮಂಡಳ ಪಶ್ಚಿಮ ಬಂಗಾಳದಲ್ಲಿ ರಚನೆಗೊಂಡು ಒಂದಾದ ಮೇಲೊಂದರಂತೆ ಶ್ರಮಜೀವಿ ವಿಭಾಗಗಳ ಸಮರಧೀರ ಹೋರಾಟ ಹರಿದು ಬರುತ್ತಿತ್ತು. ಎ.ಐ.ಟಿ.ಯು.ಸಿ.ಯ ರಾಜ್ಯ ಘಟಕ ಡಬ್ಲ್ಯು.ಬಿ.ಪಿ.ಟಿ.ಯು.ಸಿ. ಈ ಹೋರಾಟಗಳಲ್ಲಿ ಮುಂಚೂಣಿಯಲ್ಲಿತ್ತು. ಸಂಯುಕ್ತ ರಂಗ ಸರಕಾರದ ಉಪ ಮುಖ್ಯಮಂತ್ರಿ ಹಾಗೂ ಗೃಹ ಮಂತ್ರಿಯಾಗಿದ್ದ ಕಾಂ. ಜ್ಯೋತಿ ಬಸು ಕಾರ್ಮಿಕ ವರ್ಗದ ಹೋರಾಟಗಳನ್ನು ದಮನ ಮಾಡಲು ಸರಕಾರ ಪೋಲೀಸನ್ನು ಕಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದರು. ಡಬ್ಲ್ಯು.ಬಿ.ಪಿ.ಟಿ.ಯು.ಸಿ.ಯ ಸಮರಶೀಲ ನಿಲುವು ಹಾಗೂ ಪೋಲೀಸ್ ಯಂತ್ರದ ಹೊಡೆತವಿಲ್ಲದಂತಾದದ್ದು ಪಶ್ಚಿಮ ಬಂಗಾಳದ ಕಾರ್ಮಿಕ ವರ್ಗಕ್ಕೆ ಸುವರ್ಣಾವಕಾಶ ಒದಗಿಸಿತ್ತು. ಅದರ ಸಂಪೂರ್ಣ ಪ್ರಯೋಜನ ಪಡೆಯಲಾಯಿತು. ಕಲ್ಕತ್ತಾ, ದುರ್ಗಾಪುರ, ಅಸನ್‌ಸೋಲ್, ರಾಣೀಗಂಜ್, ಹೌರಾ, ಹೂಗ್ಲಿ ಎಲ್ಲಾ ಕಾರ್ಮಿಕ ವರ್ಗದ ಹೋರಾಟಗಳ ತಾಣಗಳಾದವು. ಮಾಲಕರಿಗೆ ಪೋಲೀಸರ ನೆರವು ಸಿಗದಂತಾಯಿತು. ಸಂಯುಕ್ತ ರಂಗ ಸರಕಾರಗಳನ್ನು ಶ್ರೀಮತಿ ಇಂದಿರಾಗಾಂಧಿ ಅಧಿಕಾರದಿಂದ ಹೊರನೂಕಿದಾಗ ಮಾತ್ರ ಅವರಿಗೆ ಇಂತಹ ನೆರವು ದೊರೆಯಿತು. ಸಂಯುಕ್ತ ರಂಗ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಹೇರಿದ ನಂತರ ನಡೆದ ಚುನಾವಣೆಗಳಲ್ಲಿ ಪ್ರತಿಬಾರಿಯೂ ಸಂಯುಕ್ತ ರಂಗದೊಳಗಿದ್ದ ಕಾರ್ಮಿಕ ವರ್ಗದ ಶಕ್ತಿ ಹೆಚ್ಚುತ್ತಾ ಹೋಯಿತು.

ಡಬ್ಲ್ಯು.ಬಿ.ಪಿ.ಟಿ.ಯು.ಸಿ.ಯ ಪರಿಣಾಮಕಾರಿ ಹೋರಾಟ ಭಾರತದ ಆಳುವ ವರ್ಗಗಳೊಂದಿಗೆ ಶಾಮೀಲಾಗುವ ಡಾಂಗೆಯವರ ಮಾರ್ಗದಲ್ಲಿ ಒಂದು ದೊಡ್ಡ ಮುಳ್ಳಾಗಿತ್ತು. ಆದ್ದರಿಂದ ಅವರು ಮತ್ತು ಅವರ ಹಿಂಬಾಲಕರಿಗೆ ಹೋರಾಟ ನಿರತ ಹಾಗೂ ವಿಜಯಶಾಲಿ ಕಾರ್ಮಿಕ ವರ್ಗದ ಉತ್ಸಾಹ ತುತ್ತತುದಿಯಲ್ಲಿದ್ದ ಕಲ್ಕತ್ತೆಯಲ್ಲಿ ಎ.ಐ.ಟಿ.ಯು.ಸಿ. ಸಮ್ಮೇಳನದಲ್ಲಿ ಭಾಗವಹಿಸುವ ವಿಚಾರವನ್ನು ಅರಗಿಸಿಕೊಳ್ಳಲಾಗಲಿಲ್ಲ. ಅಲ್ಲದೆ ಎ.ಐ.ಟಿ.ಯು.ಸಿ. ಸಮ್ಮೇಳನದಲ್ಲಿ ಜ್ಯೋತಿಬಸು ರಾರಾಜಿಸುವುದಕ್ಕೆ ಅವಕಾಶ ಕೊಡುವುದು ಅವರಿಗೆ ಮುಜುಗರದ ಸಂಗತಿಯಾಗಿತ್ತು. ಆಶ್ಚರ್ಯಕರ ಸಂಗತಿಯೆಂದರೆ ಎ.ಐ.ಟಿ.ಯು.ಸಿ. ಸಮ್ಮೇಳನ ಕಲ್ಕತ್ತೆಯಲ್ಲಿ ನಡೆದರೆ ಜ್ಯೋತಿಬಸು ಮತ್ತು ಅವರ 'ಪೋಲೀಸು' ಎ.ಐ.ಟಿ.ಯು.ಸಿ.ಯನ್ನು ವಶಪಡಿಸಿಕೊಳ್ಳಬಹುದು ಎಂಬ ಭಯ ತನಗಿದೆ ಎಂದು ಎಸ್.ಎ. ಡಾಂಗೆ ಬಹಿರಂಗವಾಗಿಯೇ ಹೇಳಿದ್ದರು. ಆದ್ದರಿಂದ ಡಾಂಗೆ ಮತ್ತು ಅವರ ಹಿಂಬಾಲಕರು ಆಗ ಗಮನಾರ್ಹ ಕಾರ್ಮಿಕ ವರ್ಗದ ಹೋರಾಟಗಳು ನಡೆದಿರದ ಗುಂಟೂರಿಗೊಯ್ಯಲು ನಿರ್ಧರಿಸಿದರು.

ಐಕ್ಯತೆಯ ಯೋಚನೆಯೇ ಇರಲ[...]

ಎ.ಐ.ಟಿ.ಯು.ಸಿ. ಒಂದು ಏಕೀಕೃತ [...] ಯಲ್ಲಿ ಕಾರ್ಯನಿರ್ವಹಿಸುವುದು ಡಾಂಗೆಯ[...] ಬೇಕಿರಲಿಲ್ಲ. 1967ರಲ್ಲಿ ಮುಂಬೈಯಲ್ಲಿ [...] ಎ.ಐ.ಟಿ.ಯು.ಸಿ. ಸಮ್ಮೇಳನದಲ್ಲಿ ಉಪಾಧ್ಯಕ್ಷ[...] ರಾಮಚಂದ್ರಮೂರ್ತಿ 'ಐಕ್ಯತಾ ವೇದಿ[...] ಎ.ಐ.ಟಿ.ಯು.ಸಿ. ಅದನ್ನು ಅಂಗೀಕರಿಸಿತ್ತು. ಎ.ಐ.ಟಿ.ಯು.ಸಿ.ಯ ನಾಯಕತ್ವದ ಪ್ರಬಲ [...] ಅದನ್ನು ಜಾರಿಗೊಳಿಸಲು ನಿರಾಕರಿ[...] ಎ.ಐ.ಟಿ.ಯು.ಸಿ.ಗೆ ಪ್ರವೇಶ ಬಯಸುವ [...] ಸಂಘಕ್ಕೂ ಪ್ರವೇಶ ನಿರಾಕರಿಸಬಾರದು ಎಂ[...] ಇದರ ಒಂದು ಉದ್ದೇಶವಾಗಿತ್ತು. ಯ[...] ಯೂನಿಯನ್ ನಲ್ಲಿ ಇನ್ನೊಂದು ವಿಭಾಗಕ್ಕೆ [...] ಯಾಗದ ಒಂದು ನಾಯಕತ್ವವನ್ನು ಚುನಾಯಿ[...] ಎ.ಐ.ಟಿ.ಯು.ಸಿ.ಯಲ್ಲಿರುವ ಯಾರೂ ಆ ಯ[...] ಯನ್ನು ಒಡೆಯಲು ಅವಕಾಶವಿರಬಾ[...] ಎಂಬುದೂ ಅದರ ಇನ್ನೊಂದು ಉದ್ದೇಶವಾ[...]



ಒಂದು ಫ್ಯಾಸಿಸ್ಟ್ ಪಕ್ಷ ಆ ದೇಶದಲ್ಲಿ ಬಲಿಷ್ಠ ಶಕ್ತಿಯಾಗಿ ಮೂಡಿಬಂತು. ಈ ...ಸ್ಟ್ ಪಕ್ಷದ ಮುನ್ನಡೆಯಿಂದ ಸೃಷ್ಟಿಯಾ ...ಅಪಾಯವನ್ನು ಮನಗಂಡ ಸ್ಪೇನ್ ಕಮ್ಯು ...ಪಕ್ಷ ಎಲ್ಲಾ ಫ್ಯಾಸಿಸಂ-ವಿರೋಧಿ ದೇಶ ಶಕ್ತಿಗಳನ್ನು ಒಂದು "ಜನಪ್ರಿಯ ರಂಗ" ...ular Front)ದಲ್ಲಿ ಒಗ್ಗೂಡಿಸಲು ಮುತು ವಹಿಸಿತು. ಫೆಬ್ರವರಿ 1936 ಚುನಾವ ...ಲ್ಲಿ 'ಜನಪ್ರಿಯ ರಂಗ' ಜಯಶಾಲಿಯಾಗಿ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ... ಆದರೆ ಜುಲೈ 1936ರ ವೇಳೆಗೆ ...ಮಿ ಸೇನಾಪತಿಗಳ ಒಂದು ಗುಂಪು ...ರ್ ಫ್ರಾಂಕೊ ನೇತೃತ್ವದಲ್ಲಿ ಫ್ಯಾಸಿಸ್ಟ್ ...ಂದಿಗೆ ಸೇರಿ ಒಂದು ಮಿಲಿಟರಿ ದಂಗೆ ...ರು. ಅಂತರ್ಯುದ್ಧ ಭುಗಿಲೆದ್ದಿತು. ನಾಝಿ ...ನಿ ಮತ್ತು ಫ್ಯಾಸಿಸ್ಟ್ ಇಟಲಿ ಬಹಿರಂಗ ...ಫ್ರಾಂಕೋನ ನೆರವಿಗೆ ಬಂದವು. ಫ್ರಾಂಕೋನ ...ಗೆ 30,000 ವಿದೇಶಿ ಫ್ಯಾಸಿಸ್ಟರು ಬಂದು ...ರು. ಸೋವಿಯೆತ್ ಒಕ್ಕೂಟ ಪ್ರಜಾಸತ್ತಾ ...ರಿಕ್ಕ ಬಹಿರಂಗ ಬೆಂಬಲ ಸಾರಿತು. ಈ ...ಸ್ಟ್ ಮತ್ತು ಫ್ಯಾಸಿಸಂ ವಿರೋಧಿ ಶಕ್ತಿಗಳ ...ನ ನೇರ ಸಶಸ್ತ್ರ ಸಂಘರ್ಷಗಳಲ್ಲಿ ಕಮ್ಯು ... ಜಗತ್ತಿನಾದ್ಯಂತ ಫ್ಯಾಸಿಸಂ-ವಿರೋಧಿ ... ದೊಡ್ಡ ಪ್ರಮಾಣದಲ್ಲಿ ಬೆಂಬಲವನ್ನು ...ರೆಸಿದರು. ಸಾವಿರ-ಸಾವಿರ ಸಂಖ್ಯೆಯಲ್ಲಿ ...ನಿಸ್ಟರು, ಸೋಶಲಿಸ್ಟರು, ಪ್ರಜಾಪ್ರಭುತ್ವ ...ಗಳು ಮತ್ತು ಹಲವಾರು ಪ್ರಮುಖ ...ಜೀವಿಗಳು ಒಟ್ಟು ಸೇರಿ ಸ್ಪೇನಿನ ...ಸಂ-ವಿರೋಧಿ ಹೋರಾಟಗಾರರ ರಕ್ಷಣೆಗೆ ... ಅಂತರಾಷ್ಟ್ರೀಯ ತಂಡವನ್ನು ರಚಿಸಿ. ಪ್ರತಿಯೊಂದು ದೇಶದಿಂದ ದೊಡ್ಡ ...ಯಲ್ಲಿ ಕಮ್ಯುನಿಸ್ಟರು ಮತ್ತು ಪ್ರಗತಿಶೀ ... ಸ್ಪೇನಿಗೆ ಹೋಗಿ ಫ್ಯಾಸಿಸಂ-ವಿರೋಧಿ ಹೋರಾಟಗಾರರ ಭುಜಕ್ಕೆ ಭುಜ ಕೊಟ್ಟು ಈ ಚಾರಿತ್ರಿಕ ಹೋರಾಟದಲ್ಲಿ ಭಾಗವಹಿಸಿದರು. ನೂರಾರು ಕಮ್ಯುನಿಸ್ಟರು ಪ್ರಗತಿಪರರು ಸ್ಪೇನ್‌ನ ರಣರಂಗದಲ್ಲಿ ಪ್ರಾಣಾರ್ಪಣೆ ಮಾಡಿದರು. ಸ್ಪೇನ್‌ನ ಅಂತರ್ಯುದ್ಧದ ಮಹತ್ವ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಅರಿವಿಗೆ ಬಂದಿತ್ತು ಎಂಬುದನ್ನಿಲ್ಲಿ ಗಮನಿಸಬೇಕು. ಜವಾಹರ್‌ಲಾಲ್ ನೆಹರೂ ನೇತೃತ್ವದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಪೇನಿನ ಜನತೆಗೆ ಬೆಂಬಲ ನೀಡಿತು. ಆದರೆ 1938ರ ವೇಳೆಗೆ ಫ್ಯಾಸಿಸಂ-ವಿರೋಧಿ ಶಕ್ತಿಗಳು ಸೋತು ಹೋದವು. ಜನರಲ್ ಫ್ರಾಂಕೋ ಸ್ಪೇನಿನಲ್ಲಿ ತನ್ನ ಸರ್ವಾಧಿಕಾರವನ್ನು ಬಲವಾಗಿ ಹೇರಿದ. ಕಮ್ಯುನಿಸ್ಟರ ಮುತುವರ್ಜಿಯಿಂದ ಸಂಘಟಿಸಲ್ಪಟ್ಟ ಅಂತರಾಷ್ಟ್ರೀಯ ತಂಡದಲ್ಲಿ ಹಾಗೂ ಸ್ಪೇನಿನ ಅಂತರ್ಯುದ್ಧದಲ್ಲಿ ಕಮ್ಯುನಿಸ್ಟರ ಪಾತ್ರದಿಂದಾಗಿ ಎರಡನೇ ಮಹಾಯುದ್ಧ ಆರಂಭವಾಗುವ ಬಹಳ ಮೊದಲೇ ಕಮ್ಯುನಿಸ್ಟರು ಫ್ಯಾಸಿಸಂನ-ವಿರುದ್ಧ ಅತ್ಯಂತ ದೃಢ ಹೋರಾಟಗಾರರಾಗಿದ್ದರು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಪ್ರತಿರೋಧ ಆಂದೋಲನ

ಯುರೋಪಿನಲ್ಲಿ ಫ್ಯಾಸಿಸಂ ವಿರುದ್ಧ ಪ್ರತಿರೋಧ ಆಂದೋಲನ ಹಿಡಿದ ದಾರಿಯ ಒಂದು ಸಂಕ್ಷಿಪ್ತ ವೀಕ್ಷಣೆ ನಡೆಸಿದಾಗ ಈ ಹೋರಾಟದ ತೀವ್ರ ಹಾಗೂ ದೃಢ ಹಾದಿ ಮತ್ತು ಬೀರಿದ ನಿರ್ಣಾಯಕ ಪ್ರಭಾವ ಸ್ಪಷ್ಟವಾಗಿ ನಮ್ಮ ಗಮನಕ್ಕೆ ಬರುತ್ತದೆ.

ಫ್ರಾನ್ಸ್ 1940ರ ಆರಂಭದ ತಿಂಗಳುಗಳಲ್ಲೇ ಜರ್ಮನರ ಕಾಲ್ತುಳಿತಕ್ಕೆ ಸಿಕ್ಕಿದಾಗ ಫ್ರೆಂಚ್ ಕಮ್ಯುನಿಸ್ಟ್ ಪಕ್ಷ ಪರಿಸ್ಥಿತಿ ಎದುರಿಸಲು ಎದ್ದು ನಿಂತಿತು. ಜರ್ಮನ್ ಆಕ್ರಮಣಕೋರರ ವಿರುದ್ಧ

....ಪುಟ 8ಕ್ಕೆ

...ರಡೂ ವಿಷಯಗಳಲ್ಲಿ ಡಾಂಗೆವಾದಿಗಳು ...ಣಿಕರಾಗಿದ್ದರು. ಅವರಿಗೆ ಐಕ್ಯತೆಯ ಯೋಚ... ಇರಲಿಲ್ಲ, ಅವರಿಗೆ ಎ.ಐ.ಟಿ.ಯು.ಸಿ.ಯಲ್ಲಿ ವಿಧೇಯರಾಗಿರುವವರು ಮಾತ್ರ ಬೇಕಿತ್ತು. ...ಯನ್‌ಗಳನ್ನು ಒಡೆದಾದರೂ ಎಷ್ಟು ಸಾಧ್ಯವೋ ಯೂನಿಯನ್‌ಗಳನ್ನು ವಶಪಡಿಸಿಕೊಳ್ಳಬೇ... ಅವರು ಬಯಸಿದ್ದರು.

...ಐ.ಟಿ.ಯು.ಸಿ.ಯ ಮೇಲೆ ಪ್ರಾಬಲ್ಯ ನಡೆಸು ...ಯಕತ್ವದ ವಿಭಾಗ ಡಬ್ಲ್ಯು.ಬಿ.ಪಿ.ಟಿ.ಯು.ಸಿ.ಯ ...ೀರ ಪಾತ್ರವನ್ನು ಟೀಕಿಸಲೂ ಹಿಂಜರಿಯ ...ಎಂಬುದನ್ನು ನಾವು ನೋಡಿದ್ದೇವೆ. ಅವರ ಅನುಸರಿಸಿ ನಾವು ರಾಷ್ಟ್ರೀಯ ಆರ್ಥಿಕತೆ ನೆರವಾಗಬೇಕು, ರಾಷ್ಟ್ರೀಯ ಸಂಪತ್ತು ...ವಾಗಲು ಬಿಡಬೇಕು, ರಾಷ್ಟ್ರೀಯ ಬೂರ್ಜ್ವಾ ಕ್ರಮೇಣ, ಮೆಲ್ಲಮೆಲ್ಲನೆ 'ಪ್ರಗತಿಪರ' ...ವಣೆ ತರಲು ಅವಕಾಶ ಕೊಡಬೇಕು ಎಂಬ ...ಂದಾಗಿಯೇ ಡಾಂಗೇವಾದಿಗಳು ಇಂತಹ ...ಎತ್ತುತ್ತಿದ್ದರು. ಅವರು ಭಾರತದ ಆಳುವ ...ಗಳೊಂದಿಗೆ ಸಂಯುಕ್ತ ರಂಗ ರಚಿಸಿಕೊಳ್ಳಲು ...ಬಯಸುತ್ತಿದ್ದವರು, ಅದಕ್ಕಾಗಿ ಹೋರಾಟದ ಬಿಡ... ಸಿದ್ಧರಾಗಿದ್ದವರು. ನಂತರ ಸಿಐ ...ಮುಖಂಡರಾದವರು ವಿರೋಧಿಸಿದ್ದು ಈ ...ತಿವಸ್ಥೆ.

...ಐ.ಟಿ.ಯು ಹುಟ್ಟಿದ್ದು "ಐಕ್ಯತೆ ಮತ್ತು ...ಟ"ದ ಘೋಷಣೆಯೊಂದಿಗೆ ಈ ಐಕ್ಯತೆಯ ಮಾರ್ಗದಲ್ಲಿ ಮುನ್ನಡೆಯಲಿಕ್ಕಾಗಿಯೇ ಅದು ಎ.ಐ.ಟಿ.ಯು.ಸಿ.ಯಿಂದ ಹೊರಬಂದು ಒಡಕಿಗೆ ವಿಧ್ಯುಕ್ತ ರೂಪಕೊಡಬೇಕಾಗಿ ಬಂದುದು ವಿಪರ್ಯಾಸ. ಹೋರಾಟಕ್ಕೆ ಐಕ್ಯತೆ ಅತ್ಯಗತ್ಯ. ಆದರೆ ಹೋರಾಟದ ಗುರಿಯಿಲ್ಲದೆ ಐಕ್ಯತೆ ನಿರರ್ಥಕ. ಅರವತ್ತರ ದಶಕದ ಅಂತ್ಯದ ವೇಳೆಗೆ ಎ.ಐ.ಟಿ.ಯು.ಸಿ. ಒಳಗೆ ಇರುವವರೆಗೆ ಹೋರಾಟವು ಸಾಧ್ಯವಿಲ್ಲ, ಐಕ್ಯತೆಯೂ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ನಂತರ ಸಿಐಟಿಯು ಮುಖಂಡರಾದವರು ಬಂದರು. ಇನ್ನೊಂದು ಟ್ರೇಡ್ ಯೂನಿಯನ್ ಕೇಂದ್ರವನ್ನು ರಚಿಸುವ ವಿಚಾರವನ್ನು ಒಪ್ಪಲೇಬೇಕಾಗಿ ಬಂತು. ಅವರು ಮೇ 1970ರಲ್ಲಿ ಇನ್ನೊಂದು ಎ.ಐ.ಟಿ.ಯು.ಸಿ. ಅಧಿವೇಶನ ಕರೆದಿದ್ದರೂ ಅದನ್ನು ಸಾಧ್ಯವಾದ ರೀತಿಯಲ್ಲೆಲ್ಲಾ ಎ.ಐ.ಟಿ.ಯು.ಸಿ.ಯಿಂದ ಪ್ರತ್ಯೇಕಗೊಳಿಸುವ ದೂರದೃಷ್ಟಿ ಅವರಲ್ಲಿತ್ತು. ಅವರು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಭಾರತ ಕಾರ್ಮಿಕ ಸಂಘಗಳ ಕೇಂದ್ರ) ಎಂಬ ಹೆಸರನ್ನು ಅಂಗೀಕರಿಸಿದರು. ಇದು ಭಾರತದ ಕಾರ್ಮಿಕ ವರ್ಗದ ಐಕ್ಯತೆ ಹಾಗೂ ಹೋರಾಟಗಳ ಒಂದು ಕೇಂದ್ರವಾಗಬೇಕೆಂಬುದು ಅವರ ಆಶಯವಾಗಿತ್ತು.

ಸಿಐಟಿಯುನ 25 ವರ್ಷಗಳ ಇತಿಹಾಸ ಸಿಐಟಿಯುನ ಘೋಷಣೆ- 'ಐಕ್ಯತೆ ಮತ್ತು ಹೋರಾಟ'ದ ದಾರಿಯಲ್ಲಿ ಭಾರತೀಯ ಕಾರ್ಮಿಕ ಆಂದೋಲನದ ಮುನ್ನಡೆಯ ಇತಿಹಾಸ.

ಉದಾರೀಕರಣ: ವರವೋ ಶಾಪವೋ?

ಈ ಪ್ರಶ್ನೆ ಅಥವಾ ಗೊಂದಲ ನಮಗಿಲ್ಲ. ಆದರೂ ಈ ಗೊಂದಲವನ್ನು ಹುಟ್ಟಿಸಿ ಬೆಳೆಸುವ ಕಾರ್ಯವನ್ನು ಕೇಂದ್ರ ಸರ್ಕಾರ ಮತ್ತು ಗುತ್ತೇದಾರಿ ಬಂಡವಾಳಶಾಹಿ ವರ್ಗ ಮಾಡುತ್ತಲೇ ಬಂದಿದೆ. ಇದಕ್ಕಾಗಿ ಪ್ರಖ್ಯಾತ ಅರ್ಥಶಾಸ್ತ್ರಜ್ಞರ ನೆರವನ್ನು ಪಡೆದು ಕೊಳ್ಳಲಾಗುತ್ತಿದೆ. ಹಲವು ವಿದೇಶೀ ಅರ್ಥಶಾಸ್ತ್ರಜ್ಞರೂ ಉದಾರೀಕರಣವನ್ನೂ ಅವರದೇ ರೀತಿಯಲ್ಲಿ ಅಧ್ಯಯನ ಮಾಡಿ ಇದರಿಂದ ದೇಶಕ್ಕೆ ಬಹಳ ಲಾಭವಾಗಿದೆ ಎಂದೆಲ್ಲ ಕಂಡು ಹಿಡಿದಿದ್ದಾರೆ. ಆದರೆ ದೇಶದ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ ಎಂಬುದು ದೇಶದ ಬಹುತೇಕ ಜನರಿಗೆ ಗೊತ್ತಾಗಿ ಹೋಗಿದೆ. ಉದಾರೀಕರಣದ ವಿರುದ್ಧವಾಗಿಯೂ ಅಭಿಪ್ರಾಯಗಳು ಬರುತ್ತಲೇ ಇವೆ.

ಈಗ ಎಪ್ಪತ್ತು ಜನ ಬುದ್ಧಿಜೀವಿಗಳು ಈ ಉದಾರೀಕರಣದ ಪರಿಣಾಮಗಳ ಬಗ್ಗೆ ತಮಗಿರುವ ಭೀತಿಯನ್ನು ವ್ಯಕ್ತಪಡಿಸಿದ್ದಾರೆ. ಅವರ ಪ್ರಕಾರ ಉದಾರೀಕರಣ ಆರ್ಥಿಕ ಅಸಮಾನತೆಯನ್ನು ತೀವ್ರವಾಗಿ ಹೆಚ್ಚಿಸುವುದಲ್ಲದೆ ದೇಶದ ಅತ್ಯಮೂಲ್ಯ ಸಂಪನ್ಮೂಲಗಳನ್ನು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ವರ್ಗಾಯಿಸುತ್ತದೆ.

ಇಷ್ಟೇ ಅಲ್ಲ ಉದಾರೀಕರಣ ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ದುಷ್ಪರಿಣಾಮಗಳನ್ನು ಬೀರಲಿದೆ. ಲ್ಯಾಟಿನ್ ಅಮೇರಿಕ ಮತ್ತು ಆಫ್ರಿಕಾದ ದೇಶಗಳಲ್ಲಿನ ಪರಿಸ್ಥಿತಿ ಭಾರತಕ್ಕೂ ಬರುತ್ತದೆ. ಈ ಎಪ್ಪತ್ತು ಬುದ್ಧಿಜೀವಿ ಕಲಾವಿದರುಗಳಲ್ಲಿ ಪತ್ರಕರ್ತ ಎನ್. ರಾಮ್, ಕಲಾವಿದೆ ಶಬಾನಾ ಆಜ್ಮಿ ಇತಿಹಾಸಕಾರ್ತಿ ರೋಮಿಳಾ ಥಾಪರ್ ಸಹ ಸೇರಿದ್ದಾರೆ.

ಇಷ್ಟೇ ಅಲ್ಲ, ಇತ್ತೀಚೆಗೆ ಅಸ್ಸೋಚಾಮ್ ಎಂಬ ಉದ್ಯಮಿಗಳ ಸಂಘಟನೆಯೂ ಉದಾರೀಕರಣದ ಪರಿಣಾಮಗಳ ಬಗ್ಗೆ ತನ್ನ ಸಂದೇಹ ವ್ಯಕ್ತಪಡಿಸುತ್ತ ಈ ವಿಷಯದ ಬಗ್ಗೆ ರಾಷ್ಟ್ರಾದ್ಯಂತ ಚರ್ಚೆ ಆಗಬೇಕೆಂದು ಈ ಸಂಘಟನೆ ಹೇಳಿದೆ.

ಉದ್ಯಮಿಗಳೇ ಉದಾರೀಕರಣದ ಬಗೆಗೆ ಸಂದೇಹ ವ್ಯಕ್ತಪಡಿಸುವುದಾದರೆ ಇದರ ಪರಿಣಾಮಗಳ ಬಗ್ಗೆ ನಿಜಕ್ಕೂ ವಿಶ್ವಾಸವುಳ್ಳವರು ಯಾರು ಯಾರೊ? ಅಲ್ಲವೇ?

ಹಣದುಬ್ಬರ ಕಡಿಮೆ ಬದುಕು ದುಬಾರಿ

ಕಳೆದ ನಾಲ್ಕು ವಾರಗಳಿಂದ ಸರ್ಕಾರಿ ತುತ್ತೂರಿಗಳು ಜೋರಾಗಿ ಊದ ತೊಡಗಿವೆ ಹಣದುಬ್ಬರ ಕಡಿಮೆಯಾಗಿದೆ. ಕಳೆದ ನಾಲ್ಕು ವಾರಗಳಲ್ಲಿ ಹಣದುಬ್ಬರದ ಪ್ರಮಾಣ ಒಂದಂಕಿಗೆ ಇಳಿದಿದೆ. ಆದರೆ ಈ ಹಣದುಬ್ಬರದ ಇಳಿತದಲ್ಲೂ ಉದಾರೀಕರಣದ ಛಾಪು ಒಡೆದು ಮೂಡಿದೆ. ಹಣದುಬ್ಬರದ ಇಳಿತವೂ ಶ್ರೀಮಂತರಿಗೇ ಅನುಕೂಲಕರ. ಅಥವಾ ಬಡವರಿಗೆ ಹಾನಿಕಾರಿ ಹೇಗೆ ಎಂದಿರಾ?

ಹೇಗೆ ಎಂದರೆ ಹೀಗೆ. ಪ್ರಾಥಮಿಕ ಸರಕುಗಳಾದ ಆಹಾರ ಪದಾರ್ಥಗಳ ಬೆಲೆ ಸೂಚ್ಯಂಕ ಏರುತ್ತಲೇ ಇದೆ. ಇಲ್ಲೇನೂ ಇಳಿತವಿಲ್ಲ, ಉದ್ದು, ರಾಗಿ, ಜೋಳ, ಬಾಜ್ರಾ, ಹಣ್ಣು ತರಕಾರಿ, ಹಾಲು ಇವೆಲ್ಲವುಗಳ ಬೆಲೆಯೂ ಏರಿದೆ. ಗೋಧಿ, ಮೆಕ್ಕೆ ಜೋಳ, ಬಾರ್ಲಿ, ಕಡಲೆಕಾಳುಗಳ ಬೆಲೆ ಸ್ವಲ್ಪ ಮಟ್ಟಿಗೆ ಇಳಿದಿರುವುದು ನಿಜ.

ಖಂಡಸಾರಿ, ತುಪ್ಪ, ಖಾದ್ಯ ಎಣ್ಣೆ ಇವೆಲ್ಲವುಗಳ ಬೆಲೆಗಳು ಏರಿವೆ. ಜವಳಿಯ ಬೆಲೆಗಳೂ ಏರಿವೆ.

ಕಾಗದ, ಲೋಹ ಇವೆಲ್ಲವುಗಳ ಬೆಲೆಗಳು ಏರುತ್ತಲೇ ಇವೆ. ಆದರೆ ಆಹಾರೇತರ ವಸ್ತುಗಳಲ್ಲಿ ಕೆಲವುಗಳ ಬೆಲೆಗಳು ಇಳಿದಿವೆ. ಆದ್ದರಿಂದಲೇ ಹಣದುಬ್ಬರದ ಪ್ರಮಾಣದಲ್ಲಿ ಸ್ವಲ್ಪ ಕಡಿಮೆ ಆಗಿರುವುದು.

ಮುಖ್ಯವಾಗಿ ಬಡವ ಶ್ರೀಮಂತರಿಗೆಲ್ಲ ಬೇಕಾಗುವ ಆಹಾರ ಮತ್ತು ಬಟ್ಟೆಗಳ ಬೆಲೆ ಏರುತ್ತಿವೆ. ಇತರ ವಸ್ತುಗಳ ಬೆಲೆಗಳು ಇಳಿದಿರಬಹುದು. ಆದರೆ ಒಟ್ಟಾರೆಯಾಗಿ ಬಡಜನರು ಖರೀದಿಸುವ ವಸ್ತುಗಳ ಬೆಲೆ ಏರುತ್ತಿದ್ದು ಬಡವರು ಖರೀದಿಸದಂತಹ ವಸ್ತುಗಳ ಬೆಲೆಗಳು ಇಳಿದಿವೆ/ಇಳಿಯುತ್ತಿವೆ.

ಇದಲ್ಲವೆ ಉದಾರೀಕರಣದ ನಿಜ ಉದ್ದೇಶ.

ಸಾಮ್ರಾಜ್ಯಶಾಹಿಯದೇ ಸಿಂಹಪಾಲು

ಉದಾರೀಕರಣದ ನಂತರ ಭಾರತದಲ್ಲಿ ಆಗಿರುವ ವಿದೇಶೀ ಹಣಹೂಡಿಕೆಯಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯದೇ ಸಿಂಹಪಾಲು. ಅಮೇರಿಕದ ನೀತಿಗಳ ಬಗ್ಗೆ ಆ ದೇಶದ ಒತ್ತಡ ಬಗ್ಗೆ ಓದಿದಾಗ ಈ ದೇಶಕ್ಕೇಕೆ ಇಷ್ಟು ಮಹತ್ವ ಎಂಬ ಪ್ರಶ್ನೆ ಬರುತ್ತದೆ. ಆದರೆ ಇದಕ್ಕೆ ಕಾರಣ ಸ್ಪಷ್ಟ ಸಾಮ್ರಾಜ್ಯಶಾಹಿಗಳ ನೇತಾರನಾಗಿರುವ ಅಮೇರಿಕಕ್ಕೆ ಭಾರತದಲ್ಲಿ ಆಸಕ್ತಿ ಹೆಚ್ಚಾಗಿ ಇರುವುದು ಇದಕ್ಕೆ!

ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಕಾರ ಒಟ್ಟು ವಿದೇಶೀ ಹಣಹೂಡಿಕೆಯಲ್ಲಿ ಅಮೇರಿಕದ ಪಾಲು ಶೇ. ೫೦ಕ್ಕೂ ಹೆಚ್ಚು, ನೆದರ್‌ಲ್ಯಾಂಡಿಗೆ ಎರಡನೇ ಸ್ಥಾನ. ನಂತರದ ಸ್ಥಾನ ಜಪಾನಿನದು.

ಅದಕ್ಕೆ ಅಮೇರಿಕ ದಿನ ಬೆಳಗಾದರೆ ಭಾರತದಲ್ಲಿನ ಆಡಳಿತ ಸರಿ ಇಲ್ಲ, ವಿಧಾನಗಳು ಸರಿ ಇಲ್ಲ, ಅಡೆತಡೆಗಳು ಹಲವು ಇವನ್ನೆಲ್ಲ ತೆಗೆದು ಹಾಕಬೇಕು ಎಂದೆಲ್ಲ ಬೊಬ್ಬೆ ಹಾಕುತ್ತಿರುವುದು.

ಉದಾರೀಕರಣ ಹೆಚ್ಚಿದಂತೆಲ್ಲ ಅಮೇರಿಕನ್ನರಿಗೆ ಭಾರತದಿಂದ ಹೆಚ್ಚೆಚ್ಚು ಲಾಭ ದೊರೆಯುತ್ತದೆ. ಅದಕ್ಕೆ ಒತ್ತಡ ಈ ಬೊಬ್ಬೆ.

ನಿಂತು ಹೋದ ರೈಲು

ಯಾವ ರೈಲು? ರೈಲ್ವೆ ವಲಯದ ಬೆಳವಣಿಗೆಯ ರೈಲು ಯಾರು ಹೇಳುತ್ತಿದ್ದಾರೆ ದೇಶದ ಅತ್ಯುನ್ನತ ನಿರೀಕ್ಷಣಾ ಕಾರ್ಯದ ಕಂಟ್ರೋಲರ್ ಆಂಡ್ ಆಡಿಟರ್ ಜನರಲ್ (ಸಿ.ಎ.ಜಿ.) ಸಿ.ಎ.ಜಿ.ಯ ಪ್ರಕಾರ 1992-93 ಮತ್ತು 1993-94ರಲ್ಲಿ ಅಂದರೆ ಎಂಟನೇ ಪಂಚವಾರ್ಷಿಕ ಯೋಜನೆಯ ಮೊದಲೆರಡು ವರ್ಷಗಳಲ್ಲಿ ರೈಲು ಇಲಾಖೆ ಸಾಗಾಣಿಕೆ ಮಾಡಿದ ಸರಕುಗಳು ಒಂದೇ ಪ್ರಯಾಣದ್ದು. ಅಲ್ಲಿ ಬೆಳವಣಿಗೆಯೇ ಇಲ್ಲ.


ಹೀಗೆಯೇ ಪ್ರಯಾಣಕ್ಕಾಗಿ ರೈಲು ಬಳಸುವವರು ಮತ್ತು ಅವರು ಕ್ರಮಿಸುವ ದೂರ ಒಟ್ಟಿಗೆ ತೆಗೆದುಕೊಂಡರೆ 1991-92 ರಿಂದ ಇದು ಇಳಿಮುಖವಾಗಿ ಹೋಗಿದೆ. ರೈಲು ಪ್ರಯಾಣದ ದರವನ್ನು ಏರಿಸಿದ್ದರೂ ಪ್ರಯಾಣಿಕರ ಪ್ರಯಾಣ ಕಡಿಮೆ ಆಗಿರುವುದರಿಂದ ಈ ಮೂಲದಿಂದ ಬರುವ ಆದಾಯವೂ ಬಜೆಟ್ ಅಂದಾಜಿಗಿಂತ ಕಡಿಮೆಯಾಗಿದೆ.

ಉದಾರೀಕರಣ ಇಲ್ಲೆಲ್ಲ ತನ್ನ ಚಿಹ್ನೆಯನ್ನು ತೋರತೊಡಗಿದೆಯೆ?

ಖಾದ್ಯ ತೈಲ ದೊರೆಗಳ ಸೇವೆಯಲ್ಲಿ ಬಿಜೆಪಿ

ಗುಜರಾತಿನಲ್ಲಿ ದೊಡ್ಡ ವಿವಾದಾತ್ಮಕ ನಾಟಕ ನಡೆದಿದೆ. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಮತ್ತು ಗುಜರಾತಿನ ಬಿಜೆಪಿ ಸರ್ಕಾರದ ನಡುವೆ ಜಟಾಪಟಿ ನಡೆದು ದೊಡ್ಡ ಸುದ್ದಿಯಾಗಿದೆ.

ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ (ಎನ್.ಡಿ.ಡಿ.ಬಿ.) ಗುಜರಾತ್ ನ ಅಮೂಲ್ ನಲ್ಲಿ ಹೈನುಗಾರಿಕೆ ಮತ್ತು ಹೈನು ಆಧಾರಿತ ಉತ್ಪನ್ನಗಳ ಉತ್ಪಾದನೆಯಲ್ಲಿ ಮಾರಾಟ ಇತ್ಯಾದಿಗಳಲ್ಲಿ ವಹಿಸಿದ ಪಾತ್ರ ರಾಷ್ಟ್ರ ಮಟ್ಟದ ಸುದ್ದಿಯಾಗಿ ಹೋಗಿದೆ. ಸಹಕಾರಿ ತತ್ವದಡಿ ಈ ಪ್ರಗತಿ ಸಾಧಿಸಿದ ಕೀರ್ತಿ ಎನ್.ಡಿ.ಡಿ.ಬಿ.ಯದು. ಇಂತಹ ಸಮೃದ್ಧಿಯನ್ನು ಸಾಧಿಸುವುದರ ಜೊತೆಗೇ ಅದರ ಗಾತ್ರವೂ ಬೆಳೆದು ಅದರ ಪ್ರಭಾವವೂ ಬೆಳೆದಿದೆ.



-ಜಿ.ಎಸ್. ಮಣಿ

ಗುಜರಾತ್ ಎಣ್ಣೆ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಎಣ್ಣೆ ವರ್ತಕರ ಪ್ರಮಾಣವೂ ದೊಡ್ಡದಿರುವುದರಿಂದ ಇಡೀ ರಾಷ್ಟ್ರ ಮಟ್ಟದಲ್ಲಿ ಅಡಿಗೆ ಎಣ್ಣೆಗಳ ಪೂರೈಕೆಯನ್ನು ಜೊತೆಗೆ ಈ ಎಣ್ಣೆಗಳ ಬೆಲೆಯನ್ನು ಇಲ್ಲಿಯ ದೊಡ್ಡ ದೊಡ್ಡ ತೈಲ ವ್ಯಾಪಾರಿಗಳು ನಿಯಂತ್ರಿಸುತ್ತಾರೆ. ಇವರಿಗೆ ಇಲ್ಲಿಯ ಸ್ಥಳೀಯ ಭಾಷೆಯಲ್ಲಿ 'ತೇಲಿಯ ರಾಜರು' ಎಂದೇ ಕರೆಯಲಾಗುತ್ತದೆ.

ಇಂತಹ ಪರಿಸ್ಥಿತಿಯನ್ನು ಸುಧಾರಿಸಲು 1989ರಲ್ಲಿ ಕೇಂದ್ರ ಸರ್ಕಾರ ಎನ್.ಡಿ.ಡಿ.ಬಿ.ಗೆ ಎಣ್ಣೆಕಾಳುಗಳ ವಹಿವಾಟು ಮತ್ತು ಬೆಲೆ ಸ್ಥಿರೀಕರಿಸುವ ಕಾರ್ಯವನ್ನು ವಹಿಸಿಕೊಟ್ಟಿತು. ಆಗಿನಿಂದ ಮಾರುಕಟ್ಟೆಯಲ್ಲಿ ಮಧ್ಯಪ್ರವೇಶ ಮಾಡುತ್ತಿರುವ ಎನ್.ಡಿ.ಡಿ.ಬಿ. 'ತೇಲರಾಜರ' ಗುತ್ತೇದಾರಿಕೆಯನ್ನು ಮುರಿಯಿತು. ಅವರ ಚಕ್ರಾಧಿಪತ್ಯಕ್ಕೆ ಧಕ್ಕೆ ಬಂದಿತು. ಆಗಿನಿಂದ ಈ ತೈಲ ರಾಜರೆಲ್ಲ ಎನ್.ಡಿ.ಡಿ.ಬಿ.ಯ ಮೇಲೆ ಹಲ್ಲು ಮಸೆಯ ತೊಡಗಿದರು. ಚುನಾವಣೆಗಳು ಬಂದಾಗ ತಮ್ಮ ನೆರವಿಗೆ ಬರುವ ಪಕ್ಷವಾದ ಬಿಜೆಪಿಗೆ ಇವರು ಅಪಾರ ಪ್ರಮಾಣದಲ್ಲಿ ಹಣಕಾಸು ನೆರವು ನೀಡಿದರು. ಬಿಜೆಪಿ ಗುಜರಾತಿನಲ್ಲಿ ವಿಧಾನಸಭಾ ಚುನಾವಣೆಗಳನ್ನು ಗೆಲ್ಲುವಲ್ಲಿ ಈ ಹಣದ ಪಾತ್ರವೂ ಬಹಳ ಮುಖ್ಯವಾದದ್ದು ಎನ್ನಲಾಗುತ್ತಿದೆ.

ಹೀಗೆ ತೈಲರಾಜರ ಕೃಪೆಯಿಂದ ಅಧಿಕಾರಕ್ಕೆ ಬಂದ ಸರ್ಕಾರ ಅವರ ಋಣ ತೀರಿಸಲು ಏನನ್ನಾದರೂ ಮಾಡಬೇಡವೆ? ಏಪ್ರಿಲ್ ನಲ್ಲಿ ಗುಜರಾತ್ ಸರ್ಕಾರ ಎನ್.ಡಿ.ಡಿ.ಬಿ.ಯ ಉಗ್ರಾಣಗಳ ಮೇಲೆ ಧಾಳಿ ನಡೆಸಿ ಅಪಾರ ಪ್ರಮಾಣದ ಎಣ್ಣೆಯನ್ನು ವಶಪಡಿಸಿಕೊಂಡಿತು. ಇದಕ್ಕೆ ಕಾರಣ?

ಗುಜರಾತ್ ಸರ್ಕಾರ ನೀಡಿದ ಕಾರಣ 1977ರ ಅವಶ್ಯಕ ಸರಕುಗಳ ಕಾಯಿದೆಗೆ 1994ರಲ್ಲಿ ಒಂದು ತಿದ್ದುಪಡಿ ತರಲಾಯಿತು. ಈ ತಿದ್ದುಪಡಿಯ ಪ್ರಕಾರ ದ್ವಿದಳ ದಾನ್ಯಗಳು ಎಣ್ಣೆಕಾಳುಗಳ ಶೇಖರಣೆ ಮಿತಿಗಳನ್ನು ವಿಧಿಸಲಾಗಿದೆ. ಎನ್.ಡಿ.ಡಿ.ಬಿ. ಈ ಮಿತಿಯನ್ನು ಮೀರಿದೆ ಎಂಬುದು ಅವರು ನೀಡಿದ ಕಾರಣ.

ಆದರೆ ಕೆಲವು ಪ್ರಾಧಿಕಾರಗಳು ಮತ್ತು ಸಹಕಾರ ಸಂಘಗಳಿಗೆ ಈ ಮಿತಿಯನ್ನು ಸಡಿಸಲಾಗಿದೆ. ಎನ್.ಡಿ.ಡಿ.ಬಿ.ಗೆ 7700 ಟನ್ನುಗಳಷ್ಟು ಖಾದ್ಯ ತೈಲ ರಾಷ್ಟ್ರದಾದ್ಯಂತ ಶೇಖರಿಸಿ ಇಡುವ ಅವಕಾಶ ಈ ಆಜ್ಞೆಯ ಪ್ರಕಾರ ಇದೇ ಈ ಪ್ರಮಾಣ ಮಿತಿ ಆಮದು ಮಾಡಿಕೊಂಡ ಪಾಮೊಲಿನ್ ಎಣ್ಣೆಯ ಹೊರತಾದದ್ದು.

ಆದರೆ ಗುಜರಾತ್ ಸರ್ಕಾರ ಈ ಆಜ್ಞೆಯ ವಿವರಗಳನ್ನು ನಿರ್ಲಕ್ಷಿಸಿ ಇಂತಹ ಧಾಳಿ ಮಾಡಿತು.

ವಾಸ್ತವವಾಗಿ ಎನ್ ಡಿ.ಬಿ.ಗೆ ನೀಡಿರುವ ಎಲ್ಲ ರಿಯಾಯಿತಿಗಳನ್ನು ಗಮನದಲ್ಲಿರಿಸಿಕೊಂಡರೆ ಅದರ ಬಳಿ ಇದ್ದದ್ದು ಬರೀ 5160 ಟನ್ನುಗಳಷ್ಟು ಖಾದ್ಯ ತೈಲ ಮಾತ್ರ.

ಹೀಗಿರುವಾಗ ಗುಜರಾತ್ ಸರಕಾರ ಇಂತಹ ದಾಳಿ ನಡೆಸಿದ್ದು ತೈಲ ರಾಜರುಗಳ ಋಣ ತೀರಿಸಿಕೊಳ್ಳಲು ಮಾತ್ರ ಎಂಬುದು ಸ್ಪಷ್ಟ.

ಅಹ್ಮದಾಬಾದಿನ ಕೋರ್ಟು ಈ ಹಂತದಲ್ಲಿ ಮಧ್ಯ ಪ್ರವೇಶಿಸಿ ಸಮಸ್ಯೆಗೆ ರಾಜಿ ಪರಿಹಾರ ಸೂಚಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿತು.

ಇದಲ್ಲದೆ ಕೇಂದ್ರ ಸರ್ಕಾರ ಏಪ್ರಿಲ್ ಆರರಂದು 1977ರ ಆಜ್ಞೆಗೆ ಮತ್ತೆ 1977ರ ಆಜ್ಞೆಗೆ ತಿದ್ದುಪಡಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪ್ರಾಧಿಕಾರ ಅಥವಾ ಕಂಪನಿಗಳಿಗೆ ಶೇಖರಣೆಯ ಮಿತಿಯನ್ನು ತೆಗೆದು ಹಾಕಿತು.

ಆದರೆ ಒಂದು ವಿಷಯವಂತೂ ಸ್ಪಷ್ಟ ಜನರ ಪರ ತಾನು ಎಂದು ಪೋಸು ಕೊಡಲು ಯತ್ನಿಸುವ ಬಿಜೆಪಿ ನಿಜದಲ್ಲಿ ವ್ಯಾಪಾರಿಗಳ ಬಂಡವಾಳಿಗರ ಪರ ಎಂಬುದು ಅಲ್ಲವೆ?

28/5/1995

ದೇಶದ



ವಿಶ್ವ

ಪ.ಬಂಗಾಳದಲ್ಲಿ ಪುರಸಭೆ ಚುನಾವಣೆ ಬಿ.ಜೆ.ಪಿಯೊಂದಿಗೆ ಕಾಂಗ್ರೇಸ್(ಐ) ಸ್ನೇಹ

ಪಶ್ಚಿಮ ಬಂಗಾಳದ ಸುಮಾರು 75 ಪುರಸಭೆಗಳಿಗೆ ಸದ್ಯವೇ ಚುನಾವಣೆಗಳು ನಡೆಯಲಿವೆ. ಈ ಸಂದರ್ಭದಲ್ಲಿ ಒಂದು ಅಪವಿತ್ರ ಮೈತ್ರಿಕೂಟ ತಲೆಯೆತ್ತುತ್ತಿದೆ. ಅದುವೇ ಕಾಂಗ್ರೇಸ್(ಐ) ಮತ್ತು ಬಿ.ಜೆ.ಪಿ ನಡುವಿನ ಸ್ನೇಹ.

ಮಮತಾ ಬ್ಯಾನರ್ಜಿ ನೇತೃತ್ವದ ಕಾಂಗ್ರೇಸ್(ಐ) ಭಿನ್ನಮತೀಯರ ಬಣ ಭಾರತೀಯ ಜನತಾ ಪಕ್ಷದೊಂದಿಗೆ ಗುಪ್ತವಾಗಿ ಚುನಾವಣೆ ಮೈತ್ರಿ ಮಾಡಿಕೊಳ್ಳಲು ಮುಂದಾಗಿರುವ ವಿಷಯ ಗುಟ್ಟಿನ ವಿಷಯವಾಗಿಯೇನೂ ಉಳಿದಿಲ್ಲ. ಎಡರಂಗದ ವಿರುದ್ಧ ಯಾವುದೇ ಕಾರಣ-ಆಧಾರವಿಲ್ಲದೆ 'ವಿಷ ಕಾರುವುದನ್ನೇ' ವೃತ್ತಿ ಮಾಡಿಕೊಂಡಿರುವ ಮಮತಾ ಬ್ಯಾನರ್ಜಿ ಕಮ್ಯುನಿಷ್ಟರನ್ನು ಸೋಲಿಸಲು ಬಿ.ಜೆ.ಪಿ ಯೊಂದಿಗೆ ಕೈಜೋಡಿಸುತ್ತಿರುವುದು ಸಹಜವೇ ಆಗಿದೆ.

ಬಹುತೇಕ ಜಿಲ್ಲೆಗಳಲ್ಲಿ ಕಾಂಗ್ರೇಸ್ ನ ಈ ಬಣ ಹಾಗೂ ಬಿ.ಜೆ.ಪಿ ಮಧ್ಯೆ ಒಪ್ಪಂದ ಏರ್ಪಡುತ್ತಿದೆ. ಕೆಲವು ಪುರಸಭೆಗಳಲ್ಲಿ ಕಾಂಗ್ರೇಸ್(ಐ)ನ ಕೆಲವು ಅದಿಕೃತ ಅಭ್ಯರ್ಥಿಗಳು ಕೂಡ ಬಿ.ಜೆ.ಪಿ ಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಯತ್ನಿಸುತ್ತಿರುವುದು ಇನ್ನಷ್ಟು ಕಳವಳದ ಸಂಗತಿಯಾಗಿದೆ.

ಟಿಕೆಟ್ ಸಿಗದೆ ನಿರಾಶೆ

ಮುನ್ಸಿಪಾಲಿಟಿ ಚುನಾವಣೆಗಳಲ್ಲಿ ಸ್ಪರ್ಧಿಸಲು ತನ್ನ ಬಣದ ಸದಸ್ಯರಿಗೆ ಪಕ್ಷದ ಟಿಕೆಟ್ ಸಿಗದೆ ಹತಾಶರಾದ ಮಮತಾ ಹೀನ ಕೆಲಸಕ್ಕೆ ಇಳಿದಿದ್ದಾರೆ. ಇದರಿಂದ ಎರಡೂ ಬಣಗಳ ನಡುವಿನ ಪರಾಕಾಷ್ಠೆಗೇರಿದ ಬಿಕ್ಕಟ್ಟನ್ನು ಬಗೆಹರಿಸಲು ಕಾಂಗ್ರೆ ಹೈಕಮಾಂಡ್ ಕೊನೆ ಕ್ಷಣದಲ್ಲಿ ನಡೆಸಿದ ಯತ್ನ ವಿಫಲವಾಗಿದೆ.

ಪಕ್ಷದಿಂದ ಅಮಾನತು ಮಾಡುವ ಎಚ್ಚರಿಕೆ ನೀಡಲಾಗಿದ್ದರೂ ಮಮತಾ ಬಣದವರು ಅಧಿಕೃತ ಅಭ್ಯರ್ಥಿಗಳ ವಿರುದ್ಧ ಸ್ಪರ್ಧೆಗಿಳಿದಿದ್ದಾರೆ. ತಾವು ಗೆಲ್ಲುವುದಕ್ಕಿಂತ ಅಧಿಕೃತ ಅಭ್ಯರ್ಥಿಗಳನ್ನು ಸೋಲಿಸುವುದೇ ಅವರಿಗೆ ಮುಖ್ಯವಾಗಿದೆ.

ಪ್ರದೇಶ ಕಾಂಗ್ರೆ ಸಮಿತಿ ಬಿ.ಜೆ.ಪಿ ಜತೆ ಮೈತ್ರಿ ಮಾಡಿಕೊಂಡಿರುವದಕ್ಕೆ ಒಂದು ಉದಾಹರಣೆ ಇಲ್ಲಿದೆ. ಬರ್ದ್ವಾನ್ ಜಿಲ್ಲೆಯ ರಾಣಿ ಗಂಜ್ ಪುರಸಭೆಯ 21 ವಾರ್ಡ್‌ಗಳ ಪೈಕಿ ಕಾಂಗ್ರೇಸ್(ಐ) 17 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು ನಾಲ್ಕನ್ನು ಬಿ.ಜೆ.ಪಿ ಗೆ ಬಿಟ್ಟುಕೊಟ್ಟಿದೆ.

ಭ್ರಷ್ಟಾಚಾರ ವಿರುದ್ಧ ಜನಾಂದೋಲನ

ತ್ರಿಪುರಾದ ಸ್ವಾಯತ್ತ ಜಿಲ್ಲಾ ಮಂಡಳಿ (ಎ.ಡಿ.ಸಿ)ಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ವಿರುದ್ಧ ಅಲ್ಲಿನ ಜನರು ಸಿಡಿದೆದ್ದಿದ್ದಾರೆ. ರಾಜ್ಯದಾದ್ಯಂತ ಎ.ಡಿ.ಸಿ ವಲಯ ಕಛೇರಿಗಳ ಎದುರು ನಡೆದ ರ್ಯಾಲಿಗಳಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.

ಎ.ಡಿ.ಸಿ. ರಾಜ್ಯದ ಬುಡಕಟ್ಟು ಜನರ ಹಿತರಕ್ಷಣೆಗಿರುವ ಸಂಸ್ಥೆಯೆಂದು ಪರಿಗಣಿಸಲಾಗಿತ್ತು. ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ದೀರ್ಘ ಪ್ರಜಾಸತ್ತಾತ್ಮಕ ಹೋರಾಟ ಫಲವಾಗಿ ಅವು ಅಸ್ತಿತ್ವಕ್ಕೆ ಬಂದಿದ್ದವು. ಆದರೆ ಅವು ಈಗ ಭ್ರಷ್ಟಾಚಾರಿಗಳ ಹುಲ್ಲುಗಾವಲು ಆಗಿವೆ.

ಸದರ್ ಉಪವಿಭಾಗದ ತಾಕೇರ್ ಜಲಾ, ಖೊವಾಡಿ ಉಪವಿಭಾಗದ ಖಚಯ್‌ಬರಿ ಹಾಗೂ ಬೈಜಲ್ ಬರಿಗಳಲ್ಲಿ ಸುಡುಬಿಸಿಲನ್ನು ಲೆಕ್ಕಿಸದೆ ಸಾವಿರಾರು ಮಂದಿ ಪ್ರತಿಭಟನೆ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ಶೇಕಡ ೮೦ ರಷ್ಟು ಜನರು ಹಾಗೂ ಬುಡಕಟ್ಟಿ ಶೇಕಡ 50 ರಷ್ಟು ಮಹಿಳೆಯರು.

ಸ್ವಜನಪಕ್ಷಪಾತ

ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾದ ಬಾದಲ್ ಚೌಧರಿ, ಖಗೇನ್ ದಾಸ್ ಮತ್ತು ಎ.ಡಿ.ಸಿ. ಪ್ರತಿಪಕ್ಷ ನಾಯಕ ರಂಜಿತ್ ದೇವ್ ವರ್ಮ ರ್ಯಾಲಿಗಳನ್ನುದ್ದೇಶಿಸಿ ಮಾತನಾಡಿದರು.

ಕಾಂಗ್ರೇಸ್(ಐ) ಟಿಯುಜೆಎಸ್ ಮೈತ್ರಿಕೂಟದ ಆಡಳಿತ ಎ.ಡಿ.ಸಿ ಯನ್ನು ಸ್ವಜನಪಕ್ಷಪಾತ ಹಾಗೂ ಭ್ರಷ್ಟಾಚಾರದ ತಾಣವನ್ನಾಗಿ ಮಾಡುತ್ತಿದೆ ಎಂದು ಅವರು ಟೀಕಿಸಿದರು. ಹಣವನ್ನು ಬರಿದು ಮಾಡಿ ಕಲ್ಯಾಣ ಕಾರ್ಯಕ್ರಮಗಳನ್ನು ದುರ್ಬಲಗೊಳಿಸುತ್ತಿದೆ ಎಂದರು.

ಗಲಭೆಪೀಡಿತ ಪ್ರದೇಶ ಕಾನೂನನ್ನು ಘೋಷಿಸುವಂತೆ ಒತ್ತಾಯಿಸುವ ಮೂಲಕ ಆಳುವ ಕೂಟ ಬುಡಕಟ್ಟು ಜನರ ವಿರುದ್ಧ ಸಮರವನ್ನೇ ಸಾರಿದೆ. ರಾಜ್ಯದ ಬುಡಕಟ್ಟು ಸಾಮರಸ್ಯವನ್ನು ಹಾಳುಮಾಡುತ್ತಿದೆ ಎಂದು ನಾಯಕರು ಹೇಳಿದರು.

ಎ.ಡಿ.ಸಿ ಪ್ರದೇಶಗಳ ಜನರು ಒಗ್ಗಟ್ಟಾಗಿರಬೇಕು, ಬುಡಕಟ್ಟು ಜನಸಮೂಹದ ಪ್ರಗತಿ ಹಾಗೂ ಸಮೃದ್ಧತೆಯ ಹಾದಿಗೆ ಅಡ್ಡಿಬರುತ್ತಿರುವ ಅಪವಿತ್ರ ಮೈತ್ರಿಕೂಟದ ಕೃತ್ಯಗಳ ವಿರುದ್ಧ ಜಾಗೃತರಾಗಿರಬೇಕು ಎಂದು ಕರೆ ನೀಡಿದರು.

ಹಿಂದೂವಾದಿ ಗೂಂಡಾಗಳ ಕುಕೃತ್ಯಗಳು

ಕ್ರೈಸ್ತ ಸಮುದಾಯದ ವಿರುದ್ಧ ಪ್ರಚೋದನಕಾರಿ ಭಾಷಣ ಮಾಡಿದ 'ಸಾಧ್ವಿ' ರಿತಂಬರಳನ್ನು ಬಂಧಿಸಿದ ನಂತರ ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಕ್ರೈಸ್ತರ ವಿರುದ್ಧ ಆಕ್ರಮಣಗಳು ನಡೆದಿರುವ ಹಲವು ಪ್ರಕರಣಗಳು ವರದಿಯಾಗಿವೆ.

ಲೂಟಿ ಹಾಗೂ ಬಾಂಬ್ ಸ್ಫೋಟದ ನಾಲ್ಕು ಮೊಕದ್ದಮೆಗಳನ್ನು ಇಂದೋರ್ ಪೋಲಿಸರು ಧಾಖಲಿಸಿಕೊಂಡಿದ್ದಾರೆ. ಕೆಲವು ಅಪರಿಚಿತ ದುಷ್ಕರ್ಮಿಗಳು ಚರ್ಚ್ ಒಂದರ ಗೇಟನ್ನು ಸುಟ್ಟು ಹಾಕಿದ್ದಾರೆ.

ಸೇಂಟ್ ಜೋಸೆಫ್ ಚರ್ಚಿನ ಸಮಾಜ ಕಲ್ಯಾಣ ಕೇಂದ್ರದ ಆವರಣದಲ್ಲಿ ಎರಡು ಕಚ್ಚಾ ಬಾಂಬುಗಳು ಸ್ಫೋಟಗೊಂಡಿವೆ.

ಬಜರಂಗ ನಗರದಲ್ಲಿರುವ ಒಂದು ಚರ್ಚನ್ನು ಸುಡಲು ಹಾಗೂ ಚರ್ಚ್‌ವೊಂದಕ್ಕೆ ಸಂಬಂಧಿಸಿದ ಮುದ್ರಣಾಲಯವನ್ನು ಸುಟ್ಟು ಹಾಕಲು ಪ್ರಯತ್ನಗಳನ್ನು ನಡೆಸಿದೆ.

ಈ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿ ಪೊಲೀಸರು ಮೊಕದ್ದಮೆಗಳನ್ನು ಹೂಡಿದ್ದಾರೆ. ಆದರೆ ಯಾರನ್ನೂ ಬಂಧಿಸಿಲ್ಲ. ರಿತಂಬರಳ ಬಂಧನದ ವಿರುದ್ಧ ಪ್ರಚಾರ ನಡೆಸುತ್ತಿರುವ ಆರೆಸ್ಸೆಸ್- ವಿಎಚ್.ಪಿ-ಬಿ.ಜೆ.ಪಿ -ಬಜರಂಗದಳ ಮೈತ್ರಿಕೂಟದ ಕೈವಾಡ ಈ ಹಿಂಸಾಕೃತ್ಯಗಳಲ್ಲಿ ಇರುವುದು ಸ್ಪಷ್ಟವಾಗಿದೆ.

ಅನುಮಾನ ಸ್ಪಷ್ಟ ಡಿ.ಜಿ.ಪಿ ಹೇಳಿಕೆ

'ಸಾಧ್ವಿ ರಿತಂಬರಳ ಬಂಧನದ ಬೆನ್ನಲ್ಲೇ ಕ್ರೈಸ್ತರ ಪ್ರಾರ್ಥನಾ ಸ್ಥಳಗಳಲ್ಲಿ ಮಾತ್ರವೇ ದುಷ್ಕೃತ್ಯಗಳು ಏಕಾ ಏಕಿ ಹೆಚ್ಚಿರುವುದರಿಂದ ಸ್ಪಷ್ಟ ಅನುಮಾನವೊಂದು ಉಂಟಾಗುತ್ತದೆ.

ಅಭಿವೃದ್ಧಿ ಒತ್ತಾಯಿಸಿ ಸರ್ವಪಕ್ಷ ನಿಯೋಗ

ತ್ರಿಪುರಾದ ಸರ್ವ ಪಕ್ಷ ನಿಯೋಗವೊಂದು ಶೀಘ್ರವೇ ದೆಹಲಿಗೆ ತೆರಳಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಕೇಂದ್ರದ ಹಲವು ಸಚಿವರನ್ನು ಭೇಟಿ ಮಾಡಲಿದೆ. ನಿಯೋಗದಲ್ಲಿ ಸಚಿವರು, ಶಾಸಕರು ಮತ್ತು ರಾಜ್ಯದ ಎಲ್ಲಾ ಪಕ್ಷಗಳ ನಾಯಕರು ಇರುತ್ತಾರೆ.

ತ್ರಿಪುರಾದ ಅಭಿವೃದ್ಧಿಗೆ ಸಂಬದಪಟ್ಟ, ದೀರ್ಘ ಕಾಲದಿಂದ ಈಡೇರದೇ ಉಳಿದಿರುವ ನಿಯೋಗದ ಬೇಡಿಕೆಗಳ ಬಗ್ಗೆ ನಿಯೋಗ ಚರ್ಚಿಸಲಿದೆ.

ರಾಜ್ಯದ ನ್ಯಾಯ ಬದ್ಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರದ ಮೇಲೆ ಒತ್ತಡ ತರಬೇಕೆಂದು ಎಲ್ಲಾ ರಾಜಕೀಯ ಪಕ್ಷಗಳ ಬಯಕೆಯಾಗಿದೆ ಎಂದು ಆಳುವ ಎಡರಂಗದ ವಕ್ತಾರರೊಬ್ಬರು ಅಗರ್ತಲದಲ್ಲಿ ಮೇ 12 ರಂದು ತಿಳಿಸಿದರು.

ಎಡರಂಗದ ಅಂಗ ಪಕ್ಷಗಳು ಹಾಗೂ ಪ್ರತಿಪಕ್ಷವಾದ ಕಾಂಗ್ರೇಸ್(ಐ)-ಟಿಯುಜೆಎಸ್ ನೊಂದಿಗೆ ಈ ಸಂಬಂಧದ ಸಮಾಲೋಚನೆಗಳು ಪೂರ್ಣಗೊಂಡಿದೆ.

ನಮ್ಮ ಅನೇಕ ಬೇಡಿಕೆಗಳಿಗೆ ಕೇಂದ್ರ ಸರಕಾರ ಸರಿಯಾಗಿ ಗಮನಹರಿಸಿಲ್ಲ ಇದರಿಂದ ಗಂಭೀರ ಪರಿಣಾಮ ಉಂಟಾಗಿ ದೇಶವಿರೋಧಿ ಶಕ್ತಿಗಳಿಗೆ ಪ್ರಚೋದನೆ ಸಿಗಬಹುದು ಎಂದು ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಆತಂಕ ವ್ಯಕ್ತಪಡಿಸಿದ್ದಾರೆ.

ಶರಣಾದ ಉಗ್ರಗಾಮಿಗಳ ಪುನರ್ ವಸತಿಗಾಗಿ ಹಾಗೂ ಅಖಿಲ ತ್ರಿಪುರಾ ಬುಡಕಟ್ಟು ಪಡೆ (ATTF) ಯೊಂದಿಗೆ ಮಾಡಿಕೊಳ್ಳಲಾದ ಶಾಂತಿ ಒಪ್ಪಂದದ ಅನುಷ್ಠಾನಕ್ಕಾಗಿ ತ್ರಿಪುರಾ ಸರಕಾರ ರೂಪಿಸಿದ 72 ಕೋಟಿ ರೂಪಾಯಿ ಯೋಜನೆ ಇನ್ನೂ ಕೇಂದ್ರ ಸರಕಾರದಲ್ಲಿ ಬಾಕಿಯಿದೆ.

ಶರಣಾದ ಉಗ್ರಗಾಮಿಗಳು ಪುನಃ ಭೂಗತ ಚಟುವಟಿಕೆಯಲ್ಲಿ ತೊಡಗುವುದನ್ನು ತಡೆಯಲು ಅವರಿಗೆ ತಕ್ಷಣ ಮರುವಸತಿ ಸೌಲಭ್ಯಗಳನ್ನು ಕಲ್ಪಿಸುವುದೆ ತುಂಬಾ ಅಗತ್ಯವಾಗಿದೆ.

ಕ್ರೀಡೆ–ಸಾಹಸ

ನೆರವಿಲ್ಲದೇ ಎವರೆಸ್ಟ್ ಏರಿದ ಮಹಿಳೆ

ಜಗತ್ತಿನ ಅತ್ಯಂತ ಎತ್ತರದ ಭಾಗವಾದ ಎವರೆಸ್ಟ್ ಪರ್ವತವನ್ನು ಒಬ್ಬ ಮಹಿಳೆ ಏರಿದ್ದಾರೆ. ಈ ಹಿಂದೆಯೂ ಹಲವಾರು ಮಹಿಳೆಯರು ಈ ಸಾಧನೆಯನ್ನು ಮಾಡಿದ್ದಾರೆ.

ಬ್ರಿಟನ್ನಿನ ಹ್ಯಾರ್ ಗ್ರೀವ್ ಮಾಡಿರುವ ಸಾಹಸ ಪ್ರತ್ಯೇಕವಾಗಿ ನಿಲ್ಲುವಂಥದ್ದಾಗಿದೆ. ಯಾಕೆಂದರೆ ಆಕೆ ಶೆರ್ಪಾಗಳ ನೆರವಿಲ್ಲದೆ, ಅಷ್ಟೇ ಏಕೆ ಕೃತಕ ಆಮ್ಲಜನಕವನ್ನು ಕೂಡ ಒಯ್ಯದೆ ಎವರೆಸ್ಟನ್ನು ಏರಿದಳು. ಮೇ 13 ರಂದು ಹೀಗೆ ಒಂದು ಇತಿಹಾಸ ಸೃಷ್ಟಿಯಾಯಿತು.

ಶೆರ್ಪಾ ಮತ್ತು ಆಮ್ಲಜನಕ ಸಿಲಿಂಡರ್‌ಗಳ ನೆರವಿಲ್ಲದೆ ಎವರೆಸ್ಟ್ ತುದಿಯನ್ನು ತಲುಪಿದ ಪ್ರಪ್ರಥಮ ಮಹಿಳೆ ಆಗಿದ್ದಾರೆ ಹ್ಯಾರ್ ಗ್ರೀವ್ಸ್.

ಇಟಲಿಯ ಹಾಲ್ಡ್ ಮೆಸ್ನರ್ ಈ ಸಧನೆ ಮಾಡಿದ ಮೊದಲ ಪುರುಷ. ಅವರು 1978 ರಲ್ಲಿ ಈ ಸಾಧನೆಯನ್ನು ದಾಖಲಿಸಿದ್ದರು.

ಚಿನ್ನ ಬಾಚಿದ ಚೀನಾ

ಒಂದು ಟೂರ್ನಿಯಲ್ಲಿರುವ ಎಲ್ಲಾ ಚಿನ್ನದ ಪದಕಗಳನ್ನು ಒಂದೇ ದೇಶದ ತಂಡದವರು ಬಾಚಿಕೊಳ್ಳುವುದೆಂದರೆ ಅದು ಸಾಮಾನ್ಯದ ಮಾತೇನಲ್ಲ. ಬಹಳ ಅಪರೂಪಕ್ಕೆ ಒಂದು ಸಲ ಈ ರೀತಿಯ ದಾಖಲೆ ಆಗುತ್ತದೆ.

ಮೇ ಮೊದಲೆರಡು ವಾರಗಳಲ್ಲಿ ಚೀನಾದ ಟಿಯಾನ್ ಜಿನ್ ನಲ್ಲಿ ನಡೆದ ವಿಶ್ವ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಪಣಕ್ಕಿದ್ದ ಎಲ್ಲಾ ಚಿನ್ನದ ಪದಕಗಳನ್ನು ಚೀನಾದ ಆಟಗಾರರು ಗೆದ್ದಿದ್ದಾರೆ.

ಮಹಿಳೆಯರ ಸಿಂಗಲ್ಸ್, ಪುರುಷರ ಸಿಂಗಲ್ಸ್, ಮಹಿಳೆಯರ ಡಬಲ್ಸ್, ಪುರುಷರ ಡಬಲ್ಸ್-ಹೀಗೆ ಹಲವು ಇವೆಂಟ್ ಗಳಲ್ಲಿ ಚೀನಿ ಪುರುಷರು ಮತ್ತು ಮಹಿಳಾ ಸ್ಪರ್ಧಿಗಳೇ ಮೇಲುಗೈ ಸಾಧಿಸಿ ಪದಕಗಳನ್ನು ಪಡೆದರು.

1981ರಲ್ಲಿ ಒಂದು ಸಲ ಚೀನಾದ ಆಟಗಾರರು ವಿಶ್ವ ಟಿಟಿ ಸ್ಪರ್ಧೆಯಲ್ಲಿ ಈ ರೀತಿಯ ಸಾಧನೆಯನ್ನು ತೋರಿಸಿದ್ದರು

-ದೀಪು

ಸಿಐಟಿಯು ಬೆಳ್ಳಿ ಹಬ್ಬ

ಸಿಐಟಿಯು ಸಂಘಗಳಿಗೆ ಕರೆ

ಇದೇ ಮೇ 30 ರಂದು ಸಿಐಟಿಯು ಸ್ಥಾಪನೆಯ 25 ವರ್ಷಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸಿಐಟಿಯುಗೆ ಸೇರಿದ ಕಾರ್ಮಿಕ ಸಂಘಗಳು ತಂತಮ್ಮ ಕಾರ್ಖಾನೆಗೆ ಕಛೇರಿಗಳ ಮುಂದೆ ಸಿಐಟಿಯು ಧ್ವಜಾರೋಹಣ ನಡೆಸಬೇಕು ಹಾಗೂ ರ್‍ಯಾಲಿ, ಸಭೆಗಳನ್ನು ನಡೆಸಬೇಕು ಎಂದು ಸಿಐಟಿಯು ರಾಜ್ಯ ಸಮಿತಿ ಕರೆ ನೀಡಿದೆ.

ಸರ್ವ ಪಕ್ಷ ಸಭೆಯಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾ ನಿಲುವು
ಜನರನ್ನು ಕಾಡುವ ಟಾಡಾ ಬೇಡವೇ ಬೇಡ

ಭಯೋತ್ಪಾದನೆ ಮತ್ತು ವಿಚ್ಛಿದ್ರಕಾರಕ ಚಟುವಟಿಕೆ ತಡೆ ಕಾನೂನಿನ (ಟಾಡಾ) ಬಗ್ಗೆ ಚರ್ಚೆ ಮಾಡಲು ಕೇಂದ್ರ ಗೃಹ ಸಚಿವರು ಮೇ 5 ರಂದು ಎಲ್ಲಾ ರಾಜಕೀಯ ಪಕ್ಷಗಳ ಸಭೆ ಕರೆದಿದ್ದರು. ಬಿಜೆಪಿ, ಎ.ಐ.ಡಿ.ಎಂ.ಕೆ. ಶಿವಸೇನೆ, ಮತ್ತು ಆಳುವ ಕಾಂಗ್ರೆಸ್(ಐ) ಮಾತ್ರವೇ ಟಾಡಾವನ್ನು ಬೆಂಬಲಿಸುತ್ತಿವೆ ಉಳಿದಂತೆ ಬಹುತೇಕ ಪ್ರತಿಪಕ್ಷಗಳು ಈ ಕರಾಳ ಕಾಯಿದೆಯನ್ನು ವಿರೋಧಿಸಿದ್ದು ಅದನ್ನು ರದ್ದು ಪಡಿಸುವಂತೆ ಒತ್ತಾಯಿಸುತ್ತಿವೆ.

ಸಭೆಯಲ್ಲಿ ಭಾಗವಹಿಸಿದ್ದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು ಮತ್ತು ತ್ರಿಪುರಾ ಉಪಮುಖ್ಯಮಂತ್ರಿ ವೈದ್ಯನಾಥ ಮಜುಂದಾರ್ ತಮ್ಮ ಭಾಷಣದಲ್ಲಿ ಟಾಡಾ ವನ್ನು ಕಟುವಾಗಿ ಟೀಕಿಸಿದರು.

ಅಪರೂಪಕ್ಕೆ ಬಳಕೆ

ಈ ಕಪ್ಪು ಕಾಯಿದೆಯನ್ನು ತಮ್ಮ ರಾಜ್ಯದಲ್ಲಿ ತುಂಬಾ ಅಪರೂಪದ ಸಂದರ್ಭದಲ್ಲಷ್ಟೆ ಬಳಸಲಾಗಿದೆ ಎಂದು ಬಸು ಹೇಳಿದರು. 1977-78ರಲ್ಲಿ ಜಿ.ಎನ್.ಎಲ್.ಎಫ್. ಚಳವಳಿ ಹಿಂಸೆಗೆ ತಿರುಗಿದಾಗ ಒಂದು ಸಲ ಈ ಕಾನೂನನ್ನು ಅನ್ವಯಿಸಲಾಗಿತ್ತು. ಮತ್ತೊಂದು ಸಲ, ಇತ್ತೀಚೆಗೆ ಅಂದರೆ 1993ರಲ್ಲಿ ಅದನ್ನು ಬಳಸಲಾಯಿತು. ಕಲ್ಕತ್ತದ ಬವ್ ಬಜಾರ್ ನಲ್ಲಿ ಸಂಭವಿಸಿದ ಭಾರೀ ಬಾಂಬ್ ಸ್ಫೋಟಗಳಲ್ಲಿ 69 ಜನರು ಸತ್ತಿದ್ದರು. ಈ ಪ್ರಕರಣ ಆರು ಆರೋಪಿಗಳನ್ನು ಶಿಕ್ಷಿಸಲು ಟಾಡಾವನ್ನು ಅನ್ವಯಿಸಲಾಯಿತು ಎಂದು ಮುಖ್ಯಮಂತ್ರಿ ಸಭೆಗೆ ವಿವರಿಸಿದರು.

ಏನಿದ್ದರೂ ತಮ್ಮ ಸರಕಾರ ಟಾಡಾವನ್ನು ಬಳಸುವುದಕ್ಕೆ ವಿರುದ್ಧವಾಗಿದೆ. ಯಾಕೆಂದರೆ ಅದರ ಕೆಲವು ನಿಯಮಗಳು ದೇಶದ ಒಕ್ಕೂಟ ತತ್ವಕ್ಕೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂಥದ್ದಾಗಿದೆ. ಇದಲ್ಲದೆ, ಸಾರ್ವಜನಿಕ ಸುವ್ಯವಸ್ಥೆ ಹಾಗೂ ಪೊಲೀಸ್ ಆಡಳಿತ ರಾಜ್ಯಗಳ ವಿಷಯಗಳಾಗಿವೆ.ಟಾಡಾದ ವಿಧಿಗಳು ರಾಜ್ಯದ ಈ ಅಧಿಕಾರಗಳನ್ನು ಉಲ್ಲಂಘಿಸುತ್ತಿವೆ ಎಂದು ಬಸು ನುಡಿದರು. ಟಾಡಾಕ್ಕೆ ಸೂಚಿಸಲಾಗಿರುವ ಸುರಕ್ಷತಾ ಕ್ರಮಗಳು ಸ್ವಲ್ಪ ತಪ್ಪಿಕೊಡುವಂತೆ ಇವೆಯಾದರೂ ಟಾಡಾವನ್ನು ತಿದ್ದುಪಡಿಯೊಂದಿಗೂ ಮುಂದುವರಿಸಬಾರದು ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ ಎಂದರು.

ಟಾಡಾದ ದುರುಪಯೋಗ ಎಷ್ಟರ ಮಟ್ಟಿಗಿದೆಯೆಂದರೆ ಅದನ್ನು ರದ್ದುಪಡಿಸುವುದೇ ಸೂಕ್ತ ಎಂಬ ಸನ್ನಿವೇಶ ಸೃಷ್ಟಿಯಾಗಿದೆ.

ಅಪಹರಣ, ಕೊಲೆ-ಮತ್ತು ಹಿಂಸಾತ್ಮಕ ಪ್ರತ್ಯೇಕತಾವಾದಿ ಚಳುವಳಿಗಳನ್ನು ಎದುರಿಸಿ ಶಿಕ್ಷಿಸಲು ಈಗಾಗಲೇ ಇರುವ ಕ್ರಿಮಿನಲ್ ಕಾನೂನುಗಳಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಗಳನ್ನು ಕೂಡಾ ಸರಕಾರ ಸಂಸತ್ತಿನಲ್ಲಿ ಮಂಡಿಸಿ ಒಮ್ಮತಕ್ಕೆ ಬರಲು ಪ್ರಯತ್ನಿಸಬೇಕು ಎಂದು ಬಸು ಸಭೆಯಲ್ಲಿ ಹೇಳಿದರು. ಇತರ ಕಾನೂನುಗಳನ್ನು ಕೂಡಾ ದುರುಪಯೋಗ ಪಡಿಸಿಕೊಳ್ಳುವುದಿಲ್ಲ ಎಂಬುದಕ್ಕೆ ಖಾತರಿಯೇನು ಎಂದು ಅವರು ಪ್ರಶ್ನಿಸಿದರು.

ನಾಗರಿಕತೆಯ ಪೀಡೆ

ಕಾನೂನುಗಳನ್ನು ದುರುಪಯೋಗ ಪಡಿಸಿಕೊಳ್ಳುವುದು ನಾಗರಿಕ ಸಮಾಜದ ದೊಡ್ಡ ಪೀಡೆಗಳಲ್ಲಿ ಒಂದಾಗಿದೆ. ಹಿಂದೆ, ಬಂಧನದ ಕಾನೂನನ್ನು ನನ್ನ ವಿರುದ್ಧ ಮತ್ತು ಇತರ ಅನೇಕ ರಾಜ್ಯಗಳಲ್ಲಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಇಂಥ ಕಾನೂನುಗಳನ್ನು ರಾಜಕೀಯ ಕಾರಣಕ್ಕಾಗಿ ಮತ್ತು ರಾಜಕೀಯ ವಿರೋಧಿಗಳ ವಿರುದ್ಧ ಬಳಸುವುದಿಲ್ಲ ಎಂದು ಸಂಸತ್ತು ಮತ್ತು ರಾಜ್ಯ ವಿಧಾನಮಂಡಳಗಳಿಗೆ ಆಶ್ವಾಸನೆಗಳನ್ನು ನೀಡಲಾಗಿದ್ದರೂ ಪಶ್ಚಿಮ ಬಂಗಾಳದಲ್ಲಿ ನನ್ನನ್ನು ಹಾಗೂ ನನ್ನ ಬೆಂಬಲಿಗರನ್ನು ಅನೇಕ ಬಾರಿ ವಿಚಾರಣೆಯಿಲ್ಲದೆ ವರ್ಷಗಟ್ಟಲೆ ಬಂಧನದಲ್ಲಿಡಲಾಗಿತ್ತು ಎಂದು ಜ್ಯೋತಿಬಸು ನೆನಪಿಸಿದರು.

ಇಂಥ ಕಾನೂನುಗಳನ್ನು ಮುಂದುವರಿಸುವುದನ್ನು ಪ. ಬಂಗಾಳ ವಿರೋಧಿಸುತ್ತದೆ. ಪ.ಬಂಗಾಳದಲ್ಲಿ ಪ್ರತಿಬಂಧಕ ಬಂಧನ ಕಾನೂನು ಅಥವಾ ಮೀಸಾವನ್ನು ಯಾವುದೇ ವ್ಯಕ್ತಿಯ ವಿರುದ್ಧ ಬಳಸಿಯೇ ಇಲ್ಲ ಎಂದು ಹೇಳಿದರು. ಭಯೋತ್ಪಾದನೆ ಮತ್ತು ಹಿಂಸೆ ರಾಜಕೀಯ ಸ್ವರೂಪವನ್ನು ಪಡೆದಾಗ ಅಂಥ ಸನ್ನಿವೇಶವನ್ನು ಎದುರಿಸಲು ಆಡಳಿತಾತ್ಮಕ ಮತ್ತು ರಾಜಕೀಯ ಕ್ರಮಗಳನ್ನು ಅನುಸರಿಸಬೇಕು ಎಂದು ಬಸು ಪ್ರತಿಪಾದಿಸಿದರು.

ಮಜುಂದಾರ್ ಸ್ಪಷ್ಟನೆ

ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳು ಮಾತ್ರ ಟಾಡಾಕ್ಕೆ ವಿರೋಧವಾಗಿವೆ ಎಂದು ಸಭೆಯಲ್ಲಿ ಮಂಡಿಸಿದ ಗೃಹ ಖಾತೆಯ ಟಿಪ್ಪಣಿಯಲ್ಲಿ ಹೇಳಲಾಗಿದೆ. ಆದರೆ ತ್ರಿಪುರಾ ಕೂಡಾ ಈ ಕಾನೂನನ್ನು ವಿರೋಧಿಸುತ್ತದೆ ಎಂದು ಉಪಮುಖ್ಯಮಂತ್ರಿ ವೈದ್ಯನಾಥ ಮಜುಂದಾರ್ ಸಭೆಯಲ್ಲಿ ಸ್ಪಷ್ಟಪಡಿಸಿದರು.

1993ರ ಏಪ್ರಿಲ್‌ವರೆಗೂ ಸರಕಾರ ಟಾಡಾವನ್ನು ಅನ್ವಯಿಸುತ್ತಿತ್ತು. ಆದರೆ ಈಗಿನ ಸಚಿವ ಸಂಪುಟ (ಎಡರಂಗ ಸರಕಾರ) ಏಪ್ರಿಲ್ ತಿಂಗಳಲ್ಲಿ ಅಧಿಕಾರಕ್ಕೆ ಬಂದ ತಕ್ಷಣವೇ ಒಂದು ನಿರ್ಧಾರ ತೆಗೆದುಕೊಂಡಿತು. ಯಾವುದೇ ಆರೋಪ ಪಟ್ಟಿಗಳಲ್ಲಿ (ಚಾರ್ಜ್ ಶೀಟ್) ಟಾಡಾದ ನಿಯಮಗಳನ್ನು ಅನ್ವಯಿಸಿದ್ದರೆ ಅವನ್ನು ತೆಗೆದು ಹಾಕಲೆಂಬುದೇ ಆ ನಿರ್ಣಯವಾಗಿತ್ತು' ಎಂದು ಮಜುಂದಾರ್ ವಿವರಿಸಿದರು.

ಈ ಕರಾಳ ಕಾನೂನನ್ನು ಅನ್ವಯಿಸದೆ ಎರಡು ವರ್ಷಗಳಿಂದ ನಮ್ಮ ಸರಕಾರ ಅಧಿಕಾರದಲ್ಲಿರುವ ಸಂತೋಷದಾಯಕ ಪರಿಸ್ಥಿತಿಯಿದೆ ಎಂದು ಹೇಳಿದ ತ್ರಿಪುರಾ ಉಪಮುಖ್ಯಮಂತ್ರಿ ಈ ಸಮ್ಮೇಳನದ ಕಪ್ಪು ಕಾಯಿದೆಯನ್ನು ತಕ್ಷಣವೇ ರದ್ದುಪಡಿಸುವ ನಿರ್ಣಯವನ್ನು ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

1945-1995: ಯಾರನ್ನೂ ಮರೆತಿಲ್ಲ -ಯಾವುದನ್ನು ಮರೆತಿಲ್ಲ

ರಶ್ಯಾದಲ್ಲಿ ಫ್ಯಾಸಿಸಂ-ವಿರುದ್ಧ ವಿಜಯದ ಸ್ವರ್ಣ ಮಹೋತ್ಸವ ಆಚರಣೆ

ಲೋಕ ಸಂಚಾರ

ಶರತ್ಚಂದ್ರ

ಮೇ 9, 1945. ಮಾಸ್ಕೋದ ಕೆಂಪು ಚೌಕದ ಸ್ಟಾಲಿನ್‌ರವರು ಲೆನಿನ್ ಸ್ಮಾರಕದ ವೇದಿಕೆಯ ಮೇಲೆ ನಿಂತು ಕೆಂಪು ಸೇನೆಯ ಸೆಲ್ಯೂಟ್ ಸ್ವೀಕರಿಸಿದರು. ಸ್ಟಾಲಿನ್ ಸೋವಿಯೆಟ್ ಜನತೆಯನ್ನು ಫ್ಯಾಸಿಸಂನ ಮೇಲಿನ ಅಮೋಘ ವಿಜಯಕ್ಕಾಗಿ ಅಭಿನಂದಿಸುತ್ತಾ ನಾಝೀ ಮುಂದಿಗಳ ವಿರುದ್ಧ ಸೆಣಸುತ್ತಾ ಪ್ರಾಣಾರ್ಪಣ ಮಾಡಿದ ಯುದ್ಧವೀರರರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಕೆಂಪು ಸೇನೆಯ ಸೇನಾಧಿಪತಿ ಮಾರ್ಷಲ್ ಝುಕೋವ್ ಬಿಳಿ ಕುದುರೆ ಏರಿ ಸೇನಾ ಪರೇಡಿನ ನೇತೃತ್ವ ವಹಿಸಿದ್ದರು.

ಐವತ್ತು ವರ್ಷಗಳ ನಂತರ ಅದೇ ಕೆಂಪು ಚೌಕದಲ್ಲಿ ಬೋರಿಸ್ಟ್ ಯೆಲ್ಟ್ ಸಿನ್ ಅದೇ ಸ್ಮಾರಕದ ಬಳಿ ನಿಂತಿದ್ದರು. -ಅಕ್ಕಪಕ್ಕದಲ್ಲಿ 50 ದೇಶಗಳ ಮುಖ್ಯಸ್ಥರು ನಿಂತಿದ್ದರು. -ಬ್ರಿಟನ್ ಪ್ರಧಾನ ಜಾನ್ ಮೇಜರ್, ಅಮೇರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್, ಚೀಣೀ ಅಧ್ಯಕ್ಷ ಜಿಯಾಂಗ್ ಜೆಮಿನ್ ಇತ್ಯಾದಿ. ಫ್ಯಾಸಿಸಂ ಮೇಲೆ ವಿಜಯದ 50ನೇ ವಾರ್ಷಿಕೋತ್ಸವದ ಪ್ರಧಾನ ಸಮಾರಂಭದಲ್ಲಿ ಅವರು ಭಾಗವಹಿಸುತ್ತಿದ್ದರು. 5000 ಯುದ್ಧ ವೀರರು . ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅವರು ಹಿಂದಿನ ಸೋವಿಯೆತ್ ಒಕ್ಕೂಟದ ಕುಡುಗೋಲು ಸುತ್ತಿಗೆಯ ಕೆಂಬಾವುಟಗಳನ್ನು ಹಿಡಿದಿದ್ದರು. ಸೇನಾ ವಾದ್ಯವೃಂದ ಕೆಂಪು ಸೇನೆಯ ಹಾಡಿನ ರಾಗ ನುಡಿಸಿತ್ತು. ವಿಶ್ವ ಮುಖಂಡರ ಹಿಂದೆ ಚರ್ಚ್ ಮುಖಂಡರೂ ಇದ್ದರು. ಈಗಿನ ರಶ್ಯನ್ ಸೇನಾಧಿಪತಿ ಪುಲಿಕೊವ್ ಬಿಳಿಯ ಕುದುರೆ ಏರಿರಲಿಲ್ಲ, ವಾಹನದ ಮೇಲೆ ನಿಂತು ಪರೇಡ್ ಪರೀಕ್ಷಿಸಿದರು.

ತಮ್ಮ ಲಿಖಿತ ಭಾಷಣವನ್ನು ಓದಿದ ಅಧ್ಯಕ್ಷ ಯೆಲ್ಟ್‌ಸಿನ್ 50 ವರ್ಷಗಳ ಹಿಂದಿನ ಫ್ಯಾಸಿಸ್ಟ ಜರ್ಮನಿಯ ಮೇಲಿನ ವಿಜಯವನ್ನು ನೆನಪಿಸಿಕೊಂಡರು. ಈಗ ಯುದ್ಧ ಮುಗಿದಿದೆ, ಅಭಿವೃದ್ಧಿ ಹೊಂದಿದ ದೇಶಗಳಾದ ಜರ್ಮನಿ, ರಶ್ಯಾ ಗೆಳೆತನ ಬಂಧನ ಬೆಳೆಸಿವೆ ಎಂದರು.

ಬೈಲೋರಶ್ಯಾದಲ್ಲಿ ಉತ್ಸಾಹ ಪೂರ್ಣ ಆಚರಣೆ

ಮಾಸ್ಕೋದಲ್ಲಿ ಈ ಸರಕಾರೀ ಸಮಾರಂಭ ನಡೆಯುತ್ತಿದ್ದಂತೆ ಬೆಲಾರೂಸ್‌ನ ಸ್ಕೀ ಎಂಬ ನಗರದಲ್ಲಿ ಎರಡನೇ ಮಹಾಯುದ್ಧದ ವೀರರು ತಮ್ಮ ಕೆಂಪು ಸೇನೆಯ ಸಮವಸ್ತ್ರ ಧರಿಸಿ ನಗರದ ಪ್ರಧಾನ ಚೌಕದಲ್ಲಿ ನೆರೆದಿದ್ದರು. ಸಾವಿರಾರು ಕುಡುಗೋಲು -ಸುತ್ತಿಗೆಯ ಕೆಂಬಾವುಟಗಳನ್ನು ಎತ್ತಿ ಹಿಡಿದಿದ್ದರು. ಸ್ಟಾಲಿನ್‌ರ ಭಾವಚಿತ್ರಗಳನ್ನು ಹಿಡಿದಿದ್ದರು. ಯುದ್ಧವೀರರ ನಡುವೆ 12 ರಿಂದ 32 ವರ್ಷ ವಯಸ್ಸಿನ ಸ್ಟಾಲಿನ್ ಬ್ರಿಗೇಡಿನ ಸದಸ್ಯರು -ಕೆಂಪು ಶರ್ಟು, ಕೆಂಪು ಟೋಪಿ, ಬಿಳಿಯ ಟ್ರೌಜರ್ ಸಮವಸ್ತ್ರದಲ್ಲಿ, ಕೆಲವರು ನೀಲಿ ಟ್ರೌಜರ್ ಗಳನ್ನು ಧರಿಸಿದ್ದರು. ಅಕ್ಟೋಬರ್ ಕ್ರಾಂತಿಯ ಹಾಡು "ಕಾಮ್ರೇಡ್ ಲೆನಿನ್ ಕೊಟ್ಟ ಕರೆಗೆ......." ಎಂಬ ಅಕ್ಟೋಬರ್ ಕ್ರಾಂತಿಯ ಹಾಡು ಹಾಡುತ್ತಾ ಅವರು ನಗರದ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬಂದಿದ್ದರು. ಮಹಿಳೆಯರೂ ಈ ಪರೇಡಿನಲ್ಲಿ ಬಹಳ ಸಂಖ್ಯೆಯಲ್ಲಿ ಭಾಗವಹಿಸಿದರು. ಎಲ್ಲರೂ ಸ್ಟಾಲಿನ್ ಹಾಗೂ ಝುಕೋವ್‌ರ ಪ್ರತಿಮೆಗಳಿಗೆ ಹಾರಾರ್ಪಣೆ ಮಾಡಿದರು. ಜನಗಳ ಉತ್ಸಾಹ ಎಷ್ಟಿತ್ತೆಂದರೆ ಮಧ್ಯಾಹ್ನ ವೇಳೆಗೆ ಪ್ರತಿಮೆಗಳು ಹೂ ಮಾಲೆಗಳಿಂದ ಮುಚ್ಚಿ ಹೋದವು.

ಮಾಸ್ಕೋದಲ್ಲೂ ಅತ್ಯುತ್ಸಾಹ ಸರಕಾರಿ ಆಚರಣೆಯಲ್ಲಲ್ಲ

ಮಾಸ್ಕೋದಲ್ಲೂ ಲಕ್ಷಾಂತರ ಜನ ಮೆರವಣಿಗೆಯಲ್ಲಿ ವೃದ್ಧ ಮಹಿಳೆಯರು, ಗಂಡಸರು ತಮ್ಮ ಮೊಮಕ್ಕಳ ಸಹಾಯದಿಂದ ಬಂದರು. ರಶ್ಯನ್ ಸೇನೆಯ ಕೆಲವು ಸಿಬ್ಬಂದಿಯೂ ಈ ವೃದ್ಧರಿಗೆ ನೆರವಾದ್ದರು. ಮೆರವಣಿಗೆಯನ್ನು ಕೆಂಪು ಚೌಕದತ್ತ ಹೋಗಲು ಬಿಡಲಿಲ್ಲವಾದ್ದರಿಂದ ಕ್ರೆಮ್ಲಿನ್ ಬಳಿಯೇ ಸಭೆ ನಡೆಯಿತು. ಪ್ರತಿ ಪಕ್ಷಗಳ ಮುಖಂಡರು ಮಾತನಾಡಿದರು. ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಮತ್ತು ಸೋವಿಯೆತ್ ಜನತೆಯ ಐಕ್ಯತೆಯಿಲ್ಲದೆ, ತ್ಯಾಗ-ಬಲಿದಾನವಿಲ್ಲದೆ ಫ್ಯಾಸಿಸಂ ಮೇಲೆ ವಿಜಯ ಸಾಧ್ಯವಿರಲಿಲ್ಲ ಎಂದರು. ಇಂದು ಸೋವಿಯೆತ್ ಒಕ್ಕೂಟವನ್ನು ಒಡೆಯಲು ಕಾರಣರಾದವರನ್ನು ತರಾಟೆಗೆ ತೆಗೆದುಕೊಳ್ಳಬೇಕಾದ ಗಂಭೀರ ಸಮಯ ಬಂದಿದೆ. ಫ್ಯಾಸಿಸಂ ವಿರುದ್ಧ ಈ ಭವ್ಯ ವಿಜಯಕ್ಕಾಗಿ ಮಿಲಿಯಗಟ್ಟಲೆ ಜನ ಸುರಿಸಿದ ರಕ್ತ ವ್ಯರ್ಥವಾಗಲು ಸಾಧ್ಯವಿಲ್ಲ ಎಂದು ಮುಖಂಡರು ಹೇಳಿದರು.

ಮತ್ತೆ ಹಿಂದಿನ ಸೋವಿಯೆತ್ ಒಕ್ಕೂಟವನ್ನು ಕಟ್ಟುವ ಒಂದು ಪ್ರತಿಜ್ಞೆಯನ್ನು ಈ ಸಭೆಯಲ್ಲಿ ಕೈಗೊಳ್ಳಲಾಯಿತು. ಅಲ್ಲಿದ್ದವರು ಸೋವಿಯೆತ್ ಒಕ್ಕೂಟ ತಮ್ಮ ಮಾತೃಭೂಮಿ ಎಂದೇ ಹೇಳುತ್ತಿದ್ದರು. ಹಿಂದಿನ ಸೋವಿಯೆತ್ ಒಕ್ಕೂಟದ ಜನ ಒಂದೇ ರಕ್ತ ಹಂಚಿಕೊಂಡಿರುವುದರಿಂದ ಬಹಳ ದಿನ ಸಣ್ಣ ದೇಶಗಳಾಗಿ ಪ್ರತ್ಯೇಕವಾಗುಳಿಯಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ತಮ್ಮನ್ನು ದೇಶವನ್ನು ಪಾಶ್ಚಿಮಾತ್ಯರಿಗೆ ಮಾರಿಕೊಂಡವರನ್ನು ಕ್ಷಮಿಸಬಾರದು, ಬೋರಿಸ್ ಯೆಲ್ಟ್‌ಸಿನ್ ಜನಗಳಿಗೆ ಕಣ್ಣೀರು ತಂದಿದ್ದಾನಷ್ಟೆ, ಆತನಿಗೆ ಸರಿಯಾದ ಜಾಗವೆಂದರೆ ಜೈಲು ಎಂದರು. ಆಳುವ ಕೂಟವನ್ನು ಸಂಪೂರ್ಣ ತೆಗೆದುಹಾಕುವವರೆಗೆ ಹೋರಾಟ ಮುಂದುವರಿಯುತ್ತದೆ ಎಂದು ಸಾರಲಾಯಿತು. ಝುಗನೋವ್ ಅಲೆಕ್ಸಾಂಡರ್ ಕೆಮಿನ್, ವಿಕ್ಟರ್ ಅಂಪಿಲೋವ್ ಮಾತನಾಡಿದ ಮುಖಂಡರಲ್ಲಿ ಮುಖ್ಯರು.

ಹೊಸದಾಗಿ ಕಟ್ಟಿದ ಪೋಕ್ಲನಾಯಾ ಗೋರಾ ಚೌಕದಲ್ಲಿ ಸೇನೆ ಪ್ರತ್ಯೇಕ ಪರೇಡ್ ನಡೆಸಿತು. ಕೆಳಗೆ ರಶ್ಯನ್ ಟ್ಯಾಂಕುಗಳು, ಮೇಲೆ ರಶ್ಯನ್ ಯುದ್ಧ ವಿಮಾನಗಳು ಸುಯ್ಯೆಂದು ಹಾರಿ ಹೋದವು. ಕ್ಲಿಂಟನ್, ಮೇಜರ್ ಇತ್ಯಾದಿಗಳು ಈ ಪರೇಡ್ ನಡೆಯುವಾಗ ಇರಲಿಲ್ಲ, ಪರೇಡ್ ಮುಗಿದ ಮೇಲೆ ತಂತಮ್ಮ ಲಿಖಿತ ಭಾಷಣಗಳನ್ನು ಓದಿದರು. ಜರ್ಮನ್ ಛಾನ್ಸಲರ್ ಕೋಹ್ಲ್ ಎಲ್ಲಿಯೂ ಕಾಣಿಸಲೇ ಇಲ್ಲ, ಅವರು ಈ ಕಾರ್ಯಾಚರಣೆಯಲ್ಲಿ ಸತ್ತ ಜರ್ಮನ್ ಸೈನಿಕರ ಗೋರಿಯ ಮೇಲೆ ಹೂ ಅರ್ಪಿಸಲು ಹೋಗಿದ್ದರು.

ವಿಜಯೋತ್ಸವಕ್ಕಾಗಿ ರಶ್ಯಾದಲ್ಲಿ ಸೋಮವಾರ ಹಾಗೂ ಮಂಗಳವಾರ ಎರಡು ದಿನ ರಜಾ ಇತ್ತು. ಇಡೀ ಮಾಸ್ಕೋ ನಗರ ಸಾವಿರಾರು ಪತಾಕೆಗಳು, ಪೋಸ್ಟರುಗಳು, ಯುದ್ಧ ವೀರರ ಕಟೌಟ್ ಗಳಿಂದ ಅಲಂಕೃತವಾಗಿತ್ತು. 50 ವರ್ಷಗಳ ಹಿಂದೆ ವಿಜಯ ಪರೇಡ್ ನ ನೇತೃತ್ವ ವಹಿಸಿದ್ದ ಮಾರ್ಷಲ್ ಝುಕೋವ್‌ರನ್ನು ಯೆಲ್ಟ್‌ಸಿನ್ ಮರೆಯಲೆತ್ನಿಸಿದರೂ ರಶ್ಯಾ ಮರೆಯುವಂತೆ ಮಾಡಲಾಗಲಿಲ್ಲ. ಯುದ್ಧವೀರರು ಒತ್ತಾಯಿಸಿದಂತೆ ಕೆಂಪು ಚೌಕದಲ್ಲಿ ಅವರ ಪ್ರತಿಮೆ ನಿಲ್ಲಿಸದಿದ್ದರೂ (ಬಾಕ್ಸ್ ನೋಡಿ) ಪೋಕ್ಲನಾಯಾ ಚೌಕದ ಮೂಲೆಯಲ್ಲಿ ಒಂದು ಎತ್ತರದ ಪ್ರತಿಮೆಯನ್ನು ಯೆಲ್ಟ್‌ಸಿನ್‌ರೇ ಮೇ 8 ರಂದು ಅನಾವರಣ ಮಾಡಿದರು. ಸೇನಾ ವಾದ್ಯವೃಂದದ ವಾದ್ಯಗೋಷ್ಠಿ ಸಾಗುತ್ತಿದ್ದಂತೆ ಒಂದು ಬೃಹತ್ ಪತಾಕೆ ಗಾಳಿಯಲ್ಲಿ ಪಟಪಟನೆ ಸದ್ದು ಮಾಡುತ್ತಿತ್ತು. "1945-1995: ಯಾರನ್ನೂ ಮರೆತಿಲ್ಲ, ಯಾವುದನ್ನೂ ಮರೆತಿಲ್ಲ" ಎಂದು ಅದರಲ್ಲಿ ಬರೆಯಲಾಗಿತ್ತು.

ಮಹಾನ್ ಅಕ್ಟೋಬರ್ ಕ್ರಾಂತಿಯ ನಂತರ ಈ ಶತಮಾನದ ಎರಡನೇ ಅತ್ಯಂತ ದೊಡ್ಡ ಚಾರಿತ್ರಿಕ ಘಟನೆ ಎಂದರೆ ಎರಡನೇ ಮಹಾಯುದ್ದ. ನಾಝಿವಾದದ ಸೋಲನ್ನು ಹಾಗೂ ಸೋವಿಯೆತ್ ಒಕ್ಕೂಟ ಮತ್ತು ಮಿತ್ರ ಕೂಟದ ವಿಜಯವನ್ನು ಜನ ಶತಮಾನಗಳ ಕಾಲ ನೆನಪಿಸಿಕೊಳ್ಳುತ್ತಾರೆ.

(ಐ.ಎನ್.ಎಸ್.)

ಯೆಲ್ಟ್‌ಸಿನ್ ಇಕ್ಕಟ್ಟು

ಕೊನೆಗೂ ಎರಡನೇ ಮಹಾಯುದ್ಧದಲ್ಲಿ ಸೋವಿಯೆತ್ ಕೆಂಪುಸೇನೆಯ ಸೇನಾಧಿಪತಿ ಮಾರ್ಶಲ್ ಝುಕೊವ್ ರ ಪ್ರತಿಮೆ ಮಾಸ್ಕೋದಲ್ಲಿ ಸ್ಥಾಪನೆಗೊಂಡಿತು. ಆದರೆ ಕೆಂಪು ಚೌಕದಲ್ಲಲ್ಲ ಪಕ್ಕದ ಚಿಕ್ಕ ಚೌಕವೊಂದರಲ್ಲಿ. ಯುದ್ಧವೀರರು ಪ್ರತಿಮೆಯನ್ನು ಕೆಂಪುಚೌಕದಲ್ಲೇ ಸ್ಥಾಪಿಸಬೇಕೆಂದು ಒತ್ತಾಯ ಮಾಡಿದ್ದನ್ನು ಯೆಲ್ಟ್‌ಸಿನ್ ನಿರ್ಲಕ್ಷಿಸಿದ್ದರೂ 50 ದೇಶಗಳ ಮುಖಂಡರ ಸಮ್ಮುಖ ಯುದ್ಧ ವೀರರ ಅಸಂತೃಪ್ತಿ ಪ್ರಕಟವಾಗದಿರಲಿ ಎಂದು ಕೊನೆಗೂ ಕೆಂಪು ಚೌಕದ ಬಳಿಯ ಒಂದು ಸಣ್ಣ ಚೌಕದಲ್ಲಿ ಪ್ರತಿಮೆಯನ್ನು ಸ್ಥಾಪಿಸಲಾಯಿತು.

ಮೇ 9ರ ಸ್ವರ್ಣ ಮಹೋತ್ಸವ ಕುರಿತಂತೆ ಯೆಲ್ಟ್‌ಸಿನ್ ಆಡಳಿತ ಇಕ್ಕಟ್ಟಿನಲ್ಲಿ ಸಿಲುಕಿತು. ಸ್ವರ್ಣ ಮಹೋತ್ಸವ ಆಚರಿಸದಿರುವಂತಿಲ್ಲ. ಆಚರಿಸಿದರೆ ಕೆಂಪು ಸೇನೆಯ, ಸ್ಟಾಲಿನ್‌ರ ಪಾತ್ರವನ್ನು ಮರೆಮಾಚುವಂತೆಯೇ ಇಲ್ಲ. ಕೆಲವು ಯುದ್ಧವೀರರು ಯೆಲ್ಟ್‌ಸಿನ್ ಫ್ಯಾಸಿಸಂ ವಿರುದ್ಧ ಸೋವಿಯೆತ್ ಜನತೆಯ ವಿಜಯದ ಮಹಾನ್ ಪರಂಪರೆಗೆ ಮಸಿಹಚ್ಚಿರುವುದರಿಂದ ಪದಕ ವಿತರಣೆ ಸಮಾರಂಭದಲ್ಲಿ ಭಾಗವಹಿಸಲು ನಿರಾಕರಿಸಿದರು.

ಕೆಂಪು ಚೌಕದಲ್ಲಿ ಕಳೆದ 50 ವರ್ಷಗಳಲ್ಲಿ ವಿಜಯದ ವಾರ್ಷಿಕೋತ್ಸವದ ದಿನಾಚರಣೆ ನಡೆಯುವಾಗ ಲೆನಿನ್ ಹೆಸರು ಜನರ ಗಮನದಿಂದ ಎಂದೂ ಹೊರಹೋಗದಂತೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಯೆಲ್ಟ್ ಸಿನ್ ಸರಕಾರ ಲೆನಿನ್ ರ ಹೆಸರಿನ ಮೇಲೆ ಹೊದಿಕೆ ಹಾಕಿ ಮುಚ್ಚಿಸಿತ್ತು. ಇದರಿಂದಾಗಿ ಜನರ ಗಮನ ಸದಾ ಆ ಹೊದಿಕೆಯ ಹಿಂದಿನ 'ಲೆನಿನ್' ಹೆಸರಿನ ಮೇಲೆ ನೆಟ್ಟಿತ್ತು.

ಯೆಲ್ಟ್‌ಸಿನ್ ಸರಕಾರಕ್ಕೆ ಇನ್ನೊಂದು ಕೆಲಸವನ್ನೂ ಮಾಡಲಾಗಲಿಲ್ಲ. ವಿಜಯೋತ್ಸವದ ಸಂದರ್ಭಗಳಲ್ಲಿ, ಸದಾ ಹಾರುತ್ತಿದ್ದ ಕೆಂಬಾವುಟಗಳ ಬದಲು ರಶ್ಯನ್ ಬಾವುಟ ಹಾರಿಸುವ ಧೈರ್ಯ ಮಾಡಲಾಗಲಿಲ್ಲ. ಏಕೆಂದರೆ ಫ್ಯಾಸಿಸಂ ಮೇಲಿನ ವಿಜಯ ಹಾಗೂ ಕೆಂಬಾವುಟದ ನಡುವಿನ ಸಂಬಂಧ ಜನರ ಮನದಲ್ಲಿ ಅಚ್ಚೊತ್ತಿದಂತಿದೆ. ಇದನ್ನು ಅಳಿಸಲು ಯೆಲ್ಟ್‌ಸಿನ್‌ಗೆ ಸಾಧ್ಯವಾಗುತ್ತಿಲ್ಲ.

ಎರಡು ಸಿದ್ಧಾಂತಗಳ ನಡುವೆ ಹೋರಾಟ

ಮೇ 9, 1945ರ 'ಪ್ರಾವ್ದ' ಪತ್ರಿಕೆಯ ಸಂಚಿಕೆಯನ್ನು ಪುನರ್ಮುದ್ರಿಸಿ ಮಾಸ್ಕೋದ ಬೀದಿಗಳಲ್ಲಿ ಮಾರಲಾಗುತ್ತಿದೆ. ಅದರ ಮುಖಪುಟದಲ್ಲಿ ಸ್ಟಾಲಿನ್ನರ ದೊಡ್ಡ ಚಿತ್ರ ಇತ್ತು. "ಸೋವಿಯೆತ್ ಸ್ಕಾಯಾ ರಶ್ಯಾ" ಪತ್ರಿಕೆ ಕೂಡ ವಿಶೇಷ ಸಂಚಿಕೆ ಹೊರತಂದಿದೆ. ಅದರಲ್ಲಿ ಪ್ರಸ್ತುತ ಸರಕಾರದ ನೀತಿಯನ್ನು ಬಲವಾಗಿ ಟೀಕಿಸಲಾಗಿದೆ. ಇನ್ನೊಂದು ಪತ್ರಿಕೆ ಜಾವತ್ರಾ(ನಾಳೆ) ವಿಶೇಷ ಲೇಖನಗಳನ್ನು ಪ್ರಕಟಿಸಿ ಸ್ಟಾಲಿನ್‌ರ ನೇತೃತ್ವ ಹಾಗೂ ಕೊಡುಗೆಯನ್ನು ಸ್ಮರಿಸಿದೆ. ನಗರದ ಮಧ್ಯಭಾಗದಲ್ಲಿ ಸ್ಟಾಲಿನ್ ರ ಪ್ರತಿಮೆ ಸ್ಥಾಪಿಸಲು ನಿಧಿಗೆ ಕರೆ ನೀಡಿದೆ. ಈ ಪ್ರತಿಮೆಗಾಗಿ ಶಿಲ್ಪಿಗಳು, ವಾಸ್ತುಶಿಲ್ಪಿಗಳು ಹಾಗೂ ಚಿತ್ರಕಾರರಿಗೆ ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಹೀಗೆ ಮೇ 9ರ ಆಚರಣೆಗೆ ಸಂಬಂಧಪಟ್ಟಂತೆ ರಶ್ಯಾದಲ್ಲಿ ಎರಡು ಸಿದ್ಧಾಂತಗಳ ನಡುವೆ ಹೋರಾಟ ನಡೆದಿರುವುದು ಸ್ವಯಂ ವೇದ್ಯ. ಯೆಲ್ಟ್ ಸಿನ್ ಕಡೆಯವರು ಇದು ಕೇವಲ ಇನ್ನೊಂದು ಯುದ್ಧ ಎನ್ನುವಂತೆ ಚಿತ್ರಿಸ ಬಯಸಿದರೆ, ಜನತೆ, ಕೆಂಪುಸೇನೆ, ಸ್ಟಾಲಿನ್ ರ ನೇತೃತ್ವ, ಸಮಾಜವಾದದ ಹಿರಿಮೆಯನ್ನು ಗೌರವದಿಂದ ನೆನಪಿಸಬಯಸುತ್ತಾರೆ. ನಾಝಿಗಳ ಪರಾಭವವನ್ನು ಸಾರಿದ್ದು ರೈಕ್‌ಸ್ಟಾಗ್ ಮೇಲೆ ಹಾರಿದ ಕೆಂಬಾವುಟವೇ. ಆದ್ದರಿಂದ ಯೆಲ್ಟ್ ಸಿನ್ ಕಡೆಯವರ ಇಕ್ಕಟ್ಟು ಸಹಜವೇ ಆಗಿತ್ತು.

ಸಲಾಂ 'ಬಾಂಬೆ'

....ಪುಟ 2 ರಿಂದ

ತಂದೆಗೆ ಮನೆಯಲ್ಲಿ ನಮಾಜು ಮಾಡಲು ಯಾವುದೆ ತಡೆ ಮಾಡದಿರುವುದು, ಮಕ್ಕಳಿಬ್ಬರನ್ನು ಎರಡೂ ಧರ್ಮದ ಕಾರ್ಯಕ್ರಮಗಳಿಗೆ ನಾಯಕಿಯ ತಂದೆ ಮತ್ತು ನಾಯಕನ ತಂದೆ ತೊಡಗಿಸಿಕೊಂಡಾಗ ನಾಯಕನಾಗಲೀ, ನಾಯಕಿಯಾಗಲೀ ವಿರೋಧಿಸದಿರುವುದು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ.

ಹಂತಹಂತವಾಗಿ ಕೋಮುವಾದದ ಅಪಾಯವನ್ನು ಇಡೀ ದೇಶದ ಜನತೆಯ ಮುಂದೆ ಚಿತ್ರದ ಮುಖಾಂತರ ಮಣಿರತ್ನಂ ತೋರಿಸಿರುವುದು ಜಾತ್ಯಾತೀತ ಭಾರತದ ಅಡಿಗಲ್ಲಿಗೆ ಭದ್ರ ಬುನಾದಿಯನ್ನು ನೀಡಿದೆ.

ನೀ ಹಿಂದುವೋ? ಮುಸ್ಲಿಮನೋ? ಹಿಂದೂವೋ? ಮುಸ್ಲಿಮನೋ ? ಎಂದು ಪದೆ ಪದೆ ನನ್ನನೇಕೆ ಕೇಳುತ್ತಾರೆ? ಎಂದು ಭಯಂಕರ ಸ್ವಪ್ನ ಕಂಡಂತೆ ಚೀರುವ ಮಗು ತನ್ನ ಅಪ್ಪ ಅಮ್ಮನನ್ನು ಕೇಳುತ್ತದೆ. ಕೋಮುವಾದಿ ದುಷ್ಕರ್ಮಿಗಳು ಮಕ್ಕಳಿಬ್ಬರ ಮೇಲೆ ನಡೆಸಿದ ಹಲ್ಲೆಯ ದೃಶ್ಯ ಇಡೀ ಪ್ರೇಕ್ಷಕರನ್ನು ನಡುಗಿಸುತ್ತದೆ.

'ನೀನು ನನ್ನ ಸಹೋದರ ಎಂದು ಹೇಳಿದೆ' ಮುಂಬೈ ಕೋಮುಗಲಭೆಯ ಸಂದರ್ಭದಲ್ಲಿ ಮುಸ್ಲಿಂ ಕೋಮುವಾದಿಗಳಿಂದ ಪಾರು ಮಾಡಿದಾಗ ಒಬ್ಬರಿಗೊಬ್ಬರು ವಿರೋಧದಂತಿದ್ದ ಬಶೀರ್ ಹಾಮದ್, ನಾರಾಯಣ ಪಿಳ್ಳೆಗೆ ಹೇಳುವ ಮಾತು.

'ಈಕೆ ನನ್ನ ಸೋರಿ, ಇದು ನನ್ನ ಸ್ವಂತ ಕೂಸು, ನನ್ನನ್ನು ಕೊಂದ ನಂತರವಷ್ಟೇ ನೀವು ಈಕೆಯನ್ನು, ಈಕೆಯ ಮಗುವನ್ನು ಮುಟ್ಟಲು ಸಾಧ್ಯ....' ಎಂದಾ ಕೋಮುವಾದಿಗಳನ್ನು ಉದ್ದೇಶಿಸಿ ಕೂಗಿಡುವ ಹಿರಿಯ ಬುರ್ಖಾ ಧರಿಸಿದ ಹೆಂಗಸು, ಹಿಂದೂ ಸೋದರಿ ಮಗುವನ್ನು ರಕ್ಷಿಸುವ ಸನ್ನಿವೇಶ.

'ಮೊದಲು ಈ ಮೂರ್ಖನನ್ನು ಜೀವಂತ ಸುಡಿ' ದೊಂಬಿಕೋರರನ್ನು ಚಿತ್ರದ ನಾಯಕ ತಡೆದಾಗ ವ್ಯಕ್ತಿಯೊಬ್ಬ ಹೇಳುವ ಮಾತು. ಆ ಮಾತಿನ ಬೆನ್ನ ಹಿಂದೆಯೇ ನಾಯಕ ತನ್ನ ಮೇಲೆ ಪೆಟ್ರೋಲ್ ಸುರಿದು ಕೊಂಡು ಬನ್ನಿ ಬನ್ನಿ ನನ್ನನ್ನು ಸುಡಿ, ಯಾರೋ ನಿಮ್ಮನ್ನು ಉದ್ರೇಕಿಸುತ್ತಾರೆ, ನೀವು ಬಡಿದಾಡಿ ಸಾಯುತ್ತೀರಿ. ಇದರಿಂದ ನಿಮಗೇನು ಲಾಭ? ಈ ಅಮಾಯಕರು ನಿಮಗೇನು ಮಾಡಿದ್ದಾರೆ? ಎಂದು ಪ್ರಶ್ನಿಸುವ ಸನ್ನಿವೇಶ ಇಡೀ ಕೋಮುಗಲಭೆಗೆ ಪ್ರೇಕ್ಷಕರು ವಿರೋಧಿಸುವಂತೆ ಮಾಡುತ್ತದೆ. ಈ ಎಲ್ಲಾ ಸಂಭಾಷಣೆ ಮಾತ್ರವಲ್ಲದೆ ಸುಟ್ಟ ಅಂಗಡಿ, ಮನೆ, ಸತ್ತ ಮಕ್ಕಳ ಹೆಣಗಳ ರಾಶಿಯನ್ನು ಕಂಡಾಗ ಡಿಸೆಂಬರ್ ೬ ರ ನಂತರ ಮುಂಬಯಿಯಲ್ಲಿ ನಡೆದ ಗಲಭೆಯ ಘಟನೆ ಎಷ್ಟು ಕ್ರೂರವಾಗಿತ್ತು ಎಂಬುದನ್ನು ಚಿತ್ರ ತೋರಿಸಿದೆ. ಎಲ್ಲೂ ಕೂಡಾ ಯಾವುದೇ ಕೋಮು ಭಾವನೆಯನ್ನು ಉದ್ರೇಕಿಸುವುದಿಲ್ಲ, ತಪ್ಪನ್ನು ನೇರವಾಗಿ ತೋರಿಸಿದೆ. ಈ ಕಾರಣದಿಂದಲೇ ಎರಡೂ ಕೋಮುವಾದಿ ಶಕ್ತಿಗಳು ಈ ಚಿತ್ರವನ್ನು ನಿಷೇಧಿಸಲು ಒತ್ತಾಯಿಸುತ್ತಿವೆ. ಜಾತ್ಯಾತೀತ, ಪ್ರಗತಿಪರ ಶಕ್ತಿಗಳು ಪ್ರದರ್ಶನಕ್ಕಾಗಿ ಮನವಿ ಮಾಡುತ್ತಿವೆ.

ಚಿತ್ರ ಮುಸ್ಲಿಂ ಮಹಿಳೆ ಮತ್ತು ಹಿಂದು ಪುರುಷರಲ್ಲಿ ಪ್ರೇಮ ಅಂಕುರಿಸುವಿಕೆಯಿಂದ ಪ್ರಾರಂಭವಾಗಿ ಅಲ್ಲಿಂದ ಮುಂಬಾಯಿಯಲ್ಲಿ ನಡೆದ ಕೋಮುಗಲಭೆಯವರೆಗೆ ಹೋಗಿ ಕೊನೆಗೆ ದೇಶದ ಸಮಗ್ರತೆಯನ್ನು ಪ್ರತಿನಿಧಿಸುವ ಮಾನವ ಸರಪಣಿಯೊಂದಿಗೆ ಕೊನೆಗೊಳ್ಳುತ್ತದೆ. ಎರಡು ಬೇರೆ ಬೇರೆ ಕೋಮಿನ ಜೋಡಿಗಳು ಒಂದಾಗುವ ದೃಶ್ಯವನ್ನು ಯಾವುದೇ ಕೋಮಿಗೂ ನೋವಾಗದಂತೆ (ವೈಭವೀಕರಿಸದೆ) ಹೆಣೆಯಲಾಗಿದ್ದು, ಕೋಮು (ಜಾತಿ) ಯಾವುದಾದರೇನು ಪ್ರೀತಿಗೆ ಅದು ತಡೆಯಲ್ಲ ಎಂಬುದನ್ನು ತೋರಿಸುತ್ತದೆ. ದೋಣಿಯ ಮುಖಾಂತರ ನದಿ ದಾಟಿ ದಡಕ್ಕೆ ಬರುವ ನಾಯಕಿ ಎಡವಿ ಕೈಯಲ್ಲಿದ್ದ ಪುಸ್ತಕ ಕೆಳಗಡೆ ಬಿದ್ದಾಗ ಅದನ್ನು ಹೆಕ್ಕುವಾಗ ಆಕೆಯ ಬುರ್ಖಾದ ಬಟ್ಟೆ ಮುಖ ಬಿಟ್ಟು ಹಾರುವ ದೃಶ್ಯ, ಆಕೆಯ ಸುಂದರವಾದ ಮುಖ ನಾಯಕನ ಸುಂದರವಾದ ಮುಖದೊಂದಿಗೆ ಹಿಡಿದಿಡುವುದು. ಅದಕ್ಕೆ ಪೂರಕವಾಗಿ ಪ್ರಕೃತಿ(ಗಾಳಿ) ಕೂಡಾ ಅವರನ್ನು ಒಟ್ಟು ಸೇರಲು ಸಹಕರಿಸುತ್ತಿರುವುದನ್ನು ಚಿತ್ರ ಬಿಂಬಿಸುತ್ತದೆ. ನಂತರ ಅವರಿಬ್ಬರೂ ರಿಜಿಸ್ಟರ್ ಮದುವೆಯಾಗಿ, ಗರ್ಭಿಣಿ ಹೆಂಡತಿಯ ಹೆರಿಗೆ ನೋವಿನೊಂದಿಗೆ ಬೆರೆಯುವ ನಾಯಕನ ಪಾತ್ರ ಅವರಿಬ್ಬರಲ್ಲಿ ಪ್ರೀತಿಯಲ್ಲಿ ಯಾವುದೇ ಕಲ್ಮಶವಿಲ್ಲವೆಂಬುದನ್ನು ಧಾರ್ಮಿಕ ಅಡೆ-ತಡೆಗಳನ್ನು ಮೀರಿಗೆದ್ದು ಬರುವುದನ್ನು ತೋರಿಸುತ್ತದೆ. ಅದಲ್ಲದೆ ಅವಳ ಮಕ್ಕಳಿಬ್ಬರಿಗೂ ಹಿಂದೂ-ಮುಸ್ಲಿಂ ಹೆಸರು ಒಟ್ಟಿಗೆ ಬರುವಂತೆ ಜೋಡಿಸಿರುವುದು ಪ್ರೇಕ್ಷಕರನ್ನು ಮನ ತುಂಬಿ ಕೈ ಚಪ್ಪಾಳೆ ತಟ್ಟಿಸುವಂತೆ ಮಾಡುತ್ತದೆ.

ಮಣಿರತ್ನಂ ರವರ ವರ್ಷದ ಮುದಿತ ಕಲಾತ್ಮಕ ಗುಣಾತ್ಮಕ ಸ್ಪರ್ಶ-ನಿರ್ಪೇಕ್ಷವಾಗಿ ಪ್ರದರ್ಶನವಾಗಬೇಕಾಗಿದೆ. ಅನಿವಾರ್ಯ ಕೂಡ. ಪ್ರದರ್ಶನವಾದಲ್ಲೆಲ್ಲ ಮಧ್ಯಮ ವರ್ಗದ ಸ್ತ್ರೀಪುರುಷರು ದಿನವಿಡೀ ಕಾದು ಟಿಕೇಟು ಪಡೆದು ಚಿತ್ರ ವೀಕ್ಷಿಸುತ್ತಿದ್ದಾರೆ. ಅಂದರೆ . ಚಿತ್ರದ ಸಂದೇಶ ಅವರ ಬಳಿಗೆ ಹೋಗುತ್ತಿದೆ. ಸರಕಾರ ತೆರಿಗೆ ರಹಿತವಾಗಿ ಪ್ರದರ್ಶನಕ್ಕೆ ಅವಕಾಶ ನೀಡಿ ಜನಸಾಮಾನ್ಯರಿಗೂ ಚಿತ್ರದ ಆಶಯ ತಿಳಿಯುವಂತಾದರೆ ದೇಶದ ಸಮಗ್ರತೆಗೆ-ಕೋಮು ಸೌಹಾರ್ದತೆಗೆ ಚಿತ್ರದ ಕಾಣಿಕೆ ಮಹತ್ವದಾಗಬಹುದು.

ಪ್ರಕೃತಿಯನ್ನು ತನ್ನ ಕ್ಯಾಮರಾ ಕಣ್ಣುಗಳಿಂದ ಸೆರೆಹಿಡಿಯುತ್ತಾ, ಪ್ರೀತಿಯ ಭಾವನೆಗಳ್ನು ಸ್ಪಷ್ಟೀಕರಿಸುತ್ತಾ, ಚಿತ್ರವು ದೇಶದ ಗಂಭೀರ ಪಿಡುಗಿನ ಬಗ್ಗೆ ಜನರಿಗೆ ಎಚ್ಚರಿಕೆ ನೀಡುತ್ತಾ ಅದರ ವಿರುದ್ಧ ಹೋರಾಡುವಂತೆ ಪ್ರೇರೆಪಿಸುವ ಚಿತ್ರದ ಆಶಯ, ನಿರ್ದೇಶನ, ರಚನೆ, ಸಂಭಾಷಣೆ, ಗಂಭೀರತೆ ಚಿತ್ರ ಜಗತ್ತಿಗೆ ಹೊಸ ಮೆರಗು ನೀಡಿದೆ. ಈ ದೃಷ್ಟಿಯಿಂದ ಸರಕಾರ ಸಂಪೂರ್ಣ ರಕ್ಷಣೆಯನ್ನು ಒದಗಿಸುತ್ತಾ ಎಲ್ಲಾ ಕಡೆಗಳಲ್ಲಿ ಮುಕ್ತವಾಗಿ ಚಿತ್ರ ವೀಕ್ಷಿಸಲು ಅವಕಾಶ ನೀಡಿ ದೇಶ ಸಮಗ್ರತೆಗೆ 'ಬಾಂಬೆ' ಚಿತ್ರವು ತನ್ನದೆ ಆದ ಕೊಡುಗೆ ನೀಡಲು ಸಹಕರಿಸಬೇಕಾಗಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಪೇಟೆಂಟ್ ತಿದ್ದುಪಡಿ ಮಸೂದೆ ಹಿಂತೆಗೆದುಕೊಳ್ಳಿ

ಪ್ರಧಾನಿಗಳಿಗೆ ಜಂಟಿ ನಿಯೋಗದ ಆಗ್ರಹ ಮೇ 22 ರಂದು ಪ್ರತಿಭಟನಾ ದಿನ

ಏಪ್ರಿಲ್ 22 ರಂದು ಸಂಸತ್ ಸದಸ್ಯರಾದ ಬಾಸುದೇವ ಆಚಾರ್ಯ, ರೂಪ್ ಚಂದ್ ಪಾಲ್, ಅಜೀಮ್ ಬಾಲಾ, ದೀಪಂಕರ್ ಮುಖರ್ಜಿ, ಸಿಐಟಿಯು ಕಾರ್ಯಕರ್ತೆ ಪಿ.ಕೆ. ಗಂಗೂಲಿ, ಕಿಸಾನ್ ಸಭಾದ ಅಖಿಲ ಭಾರತ ಕಾರ್ಯದರ್ಶಿ ಎಸ್.ಕೆ. ಶುಕ್ಲಾ, ವೈದ್ಯಕೀಯ ಪ್ರತಿನಿಧಿಗಳ ಒಕ್ಕೂಟದ ಮುಖಂಡರಾದ ಸುಭೀರ್ ಕುಮಾರ್ ಮತ್ತು ವಿನೋದ್ ಮಣಿ, ಪೇಟೆಂಟ್ ಕಾನೂನುಗಳನ್ನು ಕುರಿತಾದ ರಾಷ್ಟ್ರೀಯ ಕಾರ್ಯಕಾರಿ ಗುಂಪಿನ ಸಂಯೋಜಕ ಬಿ.ಕೆ. ಕೆಯಾಲಾ ಮತ್ತು ಅಖಿಲ ಭಾರತ ಜನತಾ ವಿಜ್ಞಾನ ಜಾಲದ ಪ್ರಧಾನ ಕಾರ್ಯದರ್ಶಿ ದಿನೇಶ್ ಅಬ್ರೋಲ್ ಪ್ರಧಾನ ಮಂತ್ರಿಯವರನ್ನು ಭೇಟಿಯಾಗಿ ಒಂದು ಜಂಟಿ ಮನವಿಯನ್ನು ಅರ್ಪಿಸಿದರು. ರಾಷ್ಟ್ರೀಯ ಸಾರ್ವಭೌಮತೆ, ಸ್ವಾವಲಂಬನೆ ಹಾಗೂ ಜನತೆಯ ಕಲ್ಯಾಣಕ್ಕಾಗಿ ಪೇಟೆಂಟ್ ಕಾನೂನು ತಿದ್ದುಪಡಿ ಮಸೂದೆಯನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಮನವಿ ಆಗ್ರಹಪಡಿಸಿದೆ.

ನಂತರ ಅವರು ಜಂತರ್ ಮಂತರ್ ನಲ್ಲಿ ವೈದ್ಯಕೀಯ ಮತ್ತು ಮಾರಾಟ ಪ್ರತಿನಿಧಿಗಳ ಸಂಘಗಳ ಒಕ್ಕೂಟ (FMRAI) ಏರ್ಪಡಿಸಿದ್ದ ಧರಣಿಯನ್ನುದ್ದೇಶಿಸಿ ಮಾತನಾಡಿದರು.

ಏಪ್ರಿಲ್ 10 ರಂದು FMKAI ಏರ್ಪಡಿಸಿದ್ದ ಈ ಕುರಿತ ರಾಷ್ಟ್ರೀಯ ಸಮಾವೇಶದ ನಿರ್ಣಯದ ಪ್ರಕಾರ ಈ ಧರಣಿ ಹಾಗೂ ಮನವಿಯ ಕಾರ್ಯಕ್ರಮ ನಡೆಸಲಾಯಿತು.

ಮೇ 22 ರಂದು ಪೇಟೆಂಟ್ ಕಾನೂನು ತಿದ್ದುಪಡಿ ಎಂಬ ಪ್ರತಿಭಟನಾ ದಿನವಾಗಿ ಆಚರಿಸಬೇಕು ಎಂದೂ ಸಮಾವೇಶ ಕರೆ ನೀಡಿತ್ತು, ಅಂದು ರಾಷ್ಟ್ರಪತಿಗಳಿಗೆ ಈ ಮಸೂದೆಯನ್ನು ವಾಪಸು ಪಡೆಯುವಂತೆ ಒತ್ತಾಯಿಸಿ ಸಾವಿರಾರು ಟೆಲಿಗ್ರಾಂಗಳನ್ನು ಕಳಿಸಲಾಗುತ್ತದೆ.

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಈ ಕಾರ್ಯಕ್ರಮವನ್ನು ಬೆಂಬಲಿಸುತ್ತಾ ಮೇ 22 ರ ಕಾರ್ಯಕ್ರಮದಲ್ಲಿ ವೇದಿಕೆಯ ಅಂಗ ಸಂಸ್ಥೆಗಳು ಭಾಗವಹಿಸಬೇಕು ಎಂದು ಕರೆ ನೀಡಿದೆ.

(ಐ.ಎನ್.ಎನ್.)

ಕೃಷಿ ಕೂಲಿಕಾರರ ಬವಣೆಗಳ ಪರಿಹಾರ 4 ಅಖಿಲ ಭಾರತ ಸಂಘಟನೆಗಳ ಒತ್ತಾಯ

ನಾಲ್ಕು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಟನೆಗಳು ನವದೆಹಲಿಯಲ್ಲಿ ಒಂದು ಜಂಟಿ ಹೇಳಿಕೆ ನೀಡಿ ಐ.ಎಂ.ಎಫ್.-ವಿಶ್ವಬ್ಯಾಂಕ್ ಗಳ ಆದೇಶದ ನರಸಿಂಹರಾವ್ ಸರಕಾರದ ಬುದ್ಧಿಹೀನ ಆರ್ಥಿಕ ನೀತಿಗಳಿಂದಾಗಿ 16 ಕೋಟಿ ಕೃಷಿ ಕಾರ್ಮಿಕರ ಮೇಲೆ ಅಮಾನವೀಯ ಪರಿಸ್ಥಿತಿ ಹೇರಲಾಗುತ್ತಿದೆ ಎಂಬ ಸಂಗತಿಯತ್ತ ಗಮನ ಸೆಳೆದಿವೆ. 1995 ರ ಮೇ ದಿನದಂದು ಗ್ಯಾಟ್ ಶರತ್ತುಗಳನ್ನು ದೃಢವಾಗಿ ವಿರೋಧಿಸಲು ಈ ನಾಲ್ಕು ಸಂಘಟನೆಗಳು ಕರೆ ನೀಡಿವೆ.

ಈ ನೀತಿಗಳು ಲೇವಾದೇವಿಯಿಂದ ನಮ್ಮ ಸಂಪನ್ಮೂಲವನ್ನು ಕೊಳ್ಳೆ ಹೊಡೆಯಲು, ಎರಡಂಕಿ ಹಣದುಬ್ಬರದ ಮೂಲಕ ಅತ್ಯಂತ ಬಡವ, ದಲಿತ ವಿಭಾಗಗಳ ಜೀವನವನ್ನು ಇನ್ನಷ್ಟು ದುರ್ಭರಗೊಳಿಸಲು, ವರ್ಷದಲ್ಲಿ ಉದ್ಯೋಗ ಸಿಗುವ ದಿನಗಳನ್ನು ಕಡಿತ ಗೊಳಿಸಲು, ಭೂಸುಧಾರಣೆಯನ್ನು ಬದಲಿಸಿ ಮತ್ತೆ ಗೇಣಿದಾರಿಕೆ ಆರಂಭಿಸಲು ಅವಕಾಶ ಮಾಡಿ ಕೊಟ್ಟಿವೆ ಎಂದು ಹೇಳಿಕೆ ಅಭಿಪ್ರಾಯಪಟ್ಟಿದೆ.

ಇಂದಿನ ಕೂಲಿ ಮತ್ತಷ್ಟು ಕಡಿತವಾಗಿದೆ, ಕೆಲಸದ ಹೊರೆ ಹೆಚ್ಚಿ ಗಂಭೀರ ಅಪಘಾತಗಳೂ ಹೆಚ್ಚುತ್ತಿವೆ. ಅಮಾನವೀಯ ಪರಿಸ್ಥಿತಿಯಲ್ಲಿ ವಲಸೆ ಹಾಗೂ ಹಸಿವಿನ ಬಾಧೆಯಿಂದ ನರಳುವಂತಾಗಿದೆ. ಈ ವರ್ಷದ ಬಲದಿಂದ ಇವೆಲ್ಲಾ ಇನ್ನೂ ಹೆಚ್ಚಲಿದೆ ಎಂದು ಹೇಳಿಕೆ ತಿಳಿಸಿದೆ. ತಕ್ಷಣ ಉದ್ಯೋಗ ಖಾತರಿ ಯೋಜನೆಗಳನ್ನು ಹೆಚ್ಚಿಸಬೇಕು, ಕನಿಷ್ಠ ಕೂಲಿ ಜ್ಯಾರಿಗೆ ತರಬೇಕು, ಕೃಷಿ ಕೂಲಿಕಾರರಿಗೆ ಒಂದು ಸಮಗ್ರ ಶಾಸನವನ್ನು ಸಂಸತ್ತಿನ ಪ್ರಸಕ್ತ ಅಧಿವೇಶನದಲ್ಲೇ ತರಬೇಕು, ಮಹಿಳೆಯರು, ದಲಿತರ ಮೇಲೆ ಅತ್ಯಾಚಾರ ನಿಲ್ಲಬೇಕು, ರೇಷನ್ ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಬೇಕು, ವಲಸೆ ಬಂದ ಕಾರ್ಮಿಕರ ಹಕ್ಕುಗಳನ್ನು ಸಾಕಷ್ಟು ಪ್ರಮಾಣದಲ್ಲಿ ರಕ್ಷಿಸಲು ಸಮಿತಿಗಳನ್ನು ರಚಿಸಬೇಕು ಎಂದು ಕೃಷಿ ಕಾರ್ಮಿಕ ಸಂಘಟನೆಗಳು ಒತ್ತಾಯಿಸಿವೆ.

ಮೇ ದಿನವನ್ನು ತಮ್ಮ ನೈಜ ಬೇಡಿಕೆಗಳನ್ನು ಎತ್ತಿ ಹಿಡಿದು ಹೆಚ್ಚಿನ ಉತ್ಸಾಹದಿಂದ ಇತರ ಕಾರ್ಮಿಕರ ಜತೆ ಗೂಡಿ ಆಚರಿಸಬೇಕೆಂದೂ ಈ ಸಂಘಟನೆಗಳು ಕರೆ ನೀಡಿದವು. ಇದರಿಂದ ರಾವ್ ಸರಕಾರದ ಜನ-ವಿರೋಧಿ ನೀತಿಗಳ ದಿಕ್ಕು ಬದಲಿಸಲು ಸಾಧ್ಯ ಎಂದಿವೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ, ಭಾರತೀಯ ಖೇತ್ ಮಜ್ದೂರ್ ಯೂನಿಯನ್, ಅಖಿಲ ಭಾರತ ಅಗ್ರವಾಣಿ ಕಿಸಾನ್ ಸಭಾ ಮತ್ತು ಸಂಯುಕ್ತ ಕಿಸಾನ್ ಸಭಾ ಈ ಹೇಳಿಕೆಗೆ ಸಹಿ ಹಾಕಿದ ನಾಲ್ಕು ಸಂಘಟನೆಗಳು.

(ಐ.ಎನ್.ಎನ್.)

ಆರ್ಥಿಕ ನೀತಿಗಳ ವಿರುದ್ಧ ಹೋರಾಟ ತೀವ್ರ ರಾಷ್ಟ್ರೀಯ ವೇದಿಕೆ ನಿರ್ಧಾರ

ಏಪ್ರಿಲ್ 26ರಂದು ಸಭೆ ಸೇರಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ನರಸಿಂಹ ರಾವ್ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿದೆ.

ಎ.ಐ.ಟಿ.ಯು.ಸಿ.ಯ ಎ.ಬಿ. ಬರ್ದನ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಒಕ್ಕೂಟಗಳು, ರೈತ ಕೃಷಿ ಕೂಲಿಕಾರರ ಸಂಘಟನೆಗಳು, ವಿದ್ಯಾರ್ಥಿ-ಯುವಜನ, ಮಹಿಳೆಯರ ಸಂಘಟನೆಗಳು, ವಿಜ್ಞಾನ ಕಾರ್ಯಕರ್ತರ ಸಂಘ ಹಾಗೂ ಪೇಟೆಂಟ್ ಕಾನೂನು ರಾಗಿತ ರಾಷ್ಟ್ರೀಯ ಗುಂಪಿನ ಒಟ್ಟು 40 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ. ಪಂಧೆ ಇದುವರೆಗೆ ನಡೆಸಿರುವ ಹೋರಾಟದ ಹಾಗೂ "ಸಂರಚನಾ ಹೊಂದಾಣಿಕೆ ಕಾರ್ಯಕ್ರಮ"ದಲ್ಲಿ ಇತ್ತೀಚಿನ ಬೆಳವಣಿಗೆಗಳ ಪರಾಮರ್ಶೆ ನೀಡಿದರು. ವಿದ್ಯುತ್, ದೂರಸಂಪರ್ಕ, ಸಾರಿಗೆ, ಹಣಕಾಸು ವಲಯ ಇತ್ಯಾದಿಗಳಲ್ಲಿ ಮನಸ್ವೇಚ್ಛೆ ಖಾಸಗೀಕರಣ ಪ್ರಯತ್ನ ಭರದಿಂದ ಸಾಗಿದೆ. ಲಾಭದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ ನಡೆದಿವೆ ಎಂದರು. ಹೆಚ್ಚುತ್ತಿರುವ ನಿರುದ್ಯೋಗ, ಏರುತ್ತಿರುವ ಬೆಲೆಗಳು, ಕೈಗಾರಿಕೆಗಳು ರೋಗಗ್ರಸ್ತವಾಗಿ ಮುಚ್ಚುತ್ತಿರುವುದು ಹಾಗೂ ರೈತ-ಕೃಷಿ ಕೂಲಿಕಾರರ ಪರಿಸ್ಥಿತಿ ಹದಗೆಡುತ್ತಿರುವುದರತ್ತ ವಿಶೇಷ ಗಮನ ಸೆಳೆದರು.

ಕೂಲಂಕುಷ ಚರ್ಚೆಯ ನಂತರ ಚಳವಳಿಯನ್ನು ಹಂತಹಂತವಾಗಿ ತೀವ್ರಗೊಳಿಸಲು ನಿರ್ಧರಿಸಲಾಯಿತು. ಪೇಟೆಂಟ್ ಶಾಸನ ತಿದ್ದುಪಡಿ, ಎನ್ರೋನ್ ಪ್ರಾಜೆಕ್ಟ್ ಬಗ್ಗೆ ಪ್ರತಿನಿಧಿಗಳು ವಿಶೇಷ ಗಮನ ಸೆಳೆದರು.

ರೈತ, ಕೃಷಿ ಕೂಲಿಕಾರ, ವಿದ್ಯಾರ್ಥಿ, ಯುವಜನ ಇತ್ಯಾದಿ ಜನವಿಭಾಗಗಳ ಸಂಘಟನೆಗಳು ತಂತಮ್ಮ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಕಾರ್ಯಾಚರಣೆ ಕಾರ್ಯಕ್ರಮಗಳನ್ನು ರೂಪಿಸಬೇಕೆಂದು ಸಭೆ ಕರೆ ನೀಡಿದರು.

ಕಾರ್ಮಿಕ ಸಂಘಟನೆಗಳು ಉದ್ದಿಮೆಗಳಲ್ಲಿ ರೋಗಗ್ರಸ್ತತೆ ಹಾಗೂ ಮುಚ್ಚಿಕೆಗಳ ಬಗ್ಗೆ ರಾಷ್ಟ್ರೀಯ ಸಮಾವೇಶ ನಡೆಸುತ್ತವೆ.

ಪೇಟೆಂಟ್ ಕಾನೂನಿನ ತಿದ್ದುಪಡಿ ಮಸೂದೆ ಹಿಂತೆಗೆದುಕೊಳ್ಳಲು ಒತ್ತಾಯಿಸಿ ಮೇ 22 ರಂದು ಅಖಿಲ ಭಾರತ ಪ್ರತಿಭಟನಾ ದಿನ ಆಚರಿಸಬೇಕು ಎಂದೂ ರಾಷ್ಟ್ರೀಯ ವೇದಿಕೆ ಕರೆ ನೀಡಿದೆ.

ಮಹಾರಾಷ್ಟ್ರದಲ್ಲಿ 'ಎನ್ರೋನ್ ವಿರೋಧಿ ಸಂಘರ್ಷ ಮಂಚ್' ಆರಂಭಿಸಿರುವ ಚಳುವಳಿಯನ್ನು ಬೆಂಬಿಲಸಬೇಕು ಎಂದು ಸಭೆ ಕರೆನೀಡಿತು.

ನಿರುದ್ಯೋಗ, ಬೆಲೆಯೇರಿಕೆ, ರೈತರ-ಕೃಷಿಕೂಲಿಕಾರರ ಪರಿಸ್ಥಿತಿಗಳ ಬಗ್ಗೆ ಒಂದು ರಾಷ್ಟ್ರೀಯ ಸಮಾವೇಶ ನಡೆಸಲು ನಿರ್ಧರಿಸಲಾಯಿತು. ಸಾರ್ವಜನಿಕ ಹಾಗೂ ಖಾಸಗಿ ಎರಡೂ ವಲಯಗಳಲ್ಲೂ ಕಾಂಟ್ರಾಕ್ಟ್ ಕಾರ್ಮಿಕರ ಸಮಸ್ಯೆಗಳ ಕುರಿತು ಒಂದು ರಾಷ್ಟ್ರೀಯ ಸಮಾವೇಶ ನಡೆ ಸಬೇಕೆಂಬ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳ ಸಮಿತಿ (CPSTU)ಯ ನಿರ್ಣಯವನ್ನು ಸಭೆ ಅನುಮೋದಿಸಿತು.

ಫ್ಯಾಸಿಸಂ ವಿರೋಧಿ ಹೋರಾಟದ ಮುಂಚೂಣಿಯಲ್ಲಿ

ಪುಟ 5 ರಿಂದ....

ಯುದ್ಧದಲ್ಲಿ ಐಕ್ಯ ಸಾಮೂಹಿಕ ಕಾರ್ಯಾಚರಣೆಗಳಿಗೆ ಕರೆ ನೀಡಿತು. ಯುದ್ಧದ ಆರಂಭದ ಹಂತದಲ್ಲೇ 8000ಕ್ಕಿಂತಲೂ ಹೆಚ್ಚು ಕಮ್ಯುನಿಸ್ಟರು ಬಂಧಿಸಲ್ಪಟ್ಟರು. ಆದರೂ ಧೃತಿಗೆಡದೆ ಪಕ್ಷ ಗುಪ್ತ ಜನತಾ ಪ್ರತಿರೋಧ ಸಮಿತಿಗಳನ್ನು ಪಕ್ಷವರ್ತಿ (Partisan) ಗುಂಪುಗಳು ಎಂದೆನಿಸಿಕೊಂಡ ಸಶಸ್ತ್ರ ಹೋರಾಟಗಾರರ ಲಘು ದಳಗಳನ್ನು (Partisan Groups) ಸಂಘಟಿಸಿತು. ಜುಲೈ 1941 ರಲ್ಲಿ ಎಲ್ಲಾ ಪ್ರಗತಿಪರ ಶಕ್ತಿಗಳನ್ನು ಒಂದುಗೂಡಿಸಿ 'ರಾಷ್ಟ್ರೀಯ ಪ್ರತಿರೋಧ ರಂಗ' ರಚಿಸಲಾಯಿತು. ಒಟ್ಟು 5 ಲಕ್ಷಕ್ಕೂ ಹೆಚ್ಚು ಮಂದಿ ಶಸ್ತ್ರ ಹಿಡಿದು ಈ partisan ಪಡೆಗಳಲ್ಲಿ ಹೋರಾಡಿದರು. -ಪ್ರತಿರೋಧ ಚಳುವಳಿಯ ನಿರಂತರ ಚಟುವಟಿಕೆಗಳಲ್ಲಿ ಭಾಗವಹಿಸಿದರು. 1941ರಲ್ಲಿ ಹಾಗೂ 1943ರವರೆಗೂ ಕಾನೂನು ಬಾಹಿರವೆಂದಾಗಿದ್ದ ಸಂದರ್ಭದಲ್ಲೂ ಸಾಮೂಹಿಕ ಪ್ರತಿಭಟನಾ ಕಾರ್ಯಾಚರಣೆಗಳಿಂದ ವಿವಿಧ ಸ್ವರೂಪಗಳಲ್ಲಿ ಈ ಪಕ್ಷವರ್ತಿ ದಳಗಳು ಸಶಸ್ತ್ರ ಸಮರವನ್ನು ನಡೆಸಿದವು. ಪ್ರತಿರೋಧ ಶಕ್ತಿಗಳ ಒಂದು ಐಕ್ಯ ಸೇನಾಧಿಪತ್ಯವನ್ನು ರಚಿಸಿಲಾಯಿತು. ಇದರಲ್ಲಿ ದೇಶಪ್ರೇಮಿ ಬೂರ್ಜ್ವಾ ವಿಭಾಗಗಳೂ ಇದ್ದವು. ಒಬ್ಬ ಕಮ್ಯುನಿಸ್ಟರೇ ಸೇನಾಧಿಪತಿಯಾದರು. ಏಪ್ರಿಲ್ 5, 1943 ರಂದು ದೇಶವ್ಯಾಪಿ ಸಶಸ್ತ್ರ ಬಂಡಾಯವೇಳಲು ಕರೆ ನೀಡುವುದು ಪ್ರತಿರೋಧ ಆಂದೋಲನಕ್ಕೆ ಸಾಧ್ಯವಾಯಿತು. 1944ರ ವೇಳೆಗೆ 40 ಇಲಾಖೆಗಳಲ್ಲಿ (ಪ್ರಾಂತ್ಯಗಳಲ್ಲಿ) ಸಶಸ್ತ್ರ ಕಾರ್ಯಾಚರಣೆಗಳು ನಡೆದವು. ಅರ್ಧದಷ್ಟು ದೇಶವನ್ನು ಆಕ್ರಮಣಕೋರರ ಹಿಡಿತದಿಂದ ವಿಮೋಚನೆಗೊಳಿಸಲಾಯಿತು. ಆಗಸ್ಟ್ 25, 1944 ರಂದು ವೀರಾವೇಶದ ಸಶಸ್ತ್ರ ಕಾರ್ಯಾಚರಣೆಯ ನಂತರ ಪ್ಯಾರೀಸ್ ವಿಮೋಚನೆಗೊಂಡಿತು. ಕ್ರಾಂತಿಕಾರಿ ಬಂಡಾಯದ ಸತತ ಸಮರಗಳು ನಂತರ ನಾಝಿಗಳ ಅಂತಿಮ ಸೋಲಿನಲ್ಲಿ ಪ್ರಮುಖ ಪಾತ್ರ ವಹಿಸಿದವು ಎಂಬುದರಲ್ಲಿ ಸಂಶಯವಿಲ್ಲ, ಈ ಹೋರಾಟದಲ್ಲಿ ಕಮ್ಯುನಿಸ್ಟರು ಮತ್ತು ಕಾರ್ಮಿಕ ವರ್ಗ ಮುಂಚೂಣಿಯಲ್ಲಿತ್ತು. 75 ಸಾವಿರ ಕಮ್ಯುನಿಸ್ಟರು ಈ ಹೋರಾಟದಲ್ಲಿ ಪ್ರಾಣಾರ್ಪಣೆ ಮಾಡಿದರು. ಕೇಂದ್ರ ಸಮಿತಿಯ 8 ಸದಸ್ಯರು ಪ್ರಾಣ ಬಲಿದಾನ ನೀಡಿದರು. ಇವರಲ್ಲಿ ಗೇಬ್ರಿಯಲ್ ಪೆರಿ, ಪೀಟರ್ ಸೆಮಾರ್ಡ್ ಹಾಗೂ ಜಾರ್ಜ್ ಪೊಲಿಟ್ಜರ್ ಹೆಸರುಗಳು ಜನಜನಿತವಾದವು. ಈ ಸ್ವಾತಂತ್ರ್ಯ ಸಮರದಲ್ಲಿ ಧೀರ ಪುತ್ರರನ್ನು ಬಲಿದಾನ ನೀಡಿದ ಕಮ್ಯುನಿಸ್ಟರ ದಾಖಲೆ ಸದಾ ಅವಿಸ್ಮರಣೀಯ.

ಆರಂಭದಲ್ಲೇ ಕಮ್ಯುನಿಸ್ಟರು ಫ್ಯಾಸಿಸಂ ವಿರುದ್ಧ ತಲೆಮರೆಸಿಕೊಂಡು ಹೋರಾಟ ನಡೆಸುತ್ತಿದ್ದ ಇಟಲಿಯಲ್ಲಿ ಎರಡನೇ ಮಹಾಯುದ್ಧ ಸಿಡಿದ ನಂತರ ವೀರ ಸಶಸ್ತ್ರ ಕಾರ್ಯಾಚರಣೆಗಳು ತೀವ್ರಗೊಂಡವು. 1941ರಲ್ಲಿ ಇಟಲಿಯ ಕಮ್ಯುನಿಸ್ಟರು ಮತ್ತು ಸೋಶಲಿಸ್ಟರು ಸೇರಿಕೊಂಡು ಒಂದು ಸಂಯುಕ್ತ ರಂಗ ಸ್ಥಾಪಿಸಿಕೊಂಡರು. 'ಯುನಿಟಾ' ಮತ್ತು 'ಅವಾಂತೆ', ಪತ್ರಿಕೆಗಳು ಈ ಹೋರಾಟದ ಜನಪ್ರಿಯ ಅಂಗಗಳಾದವು. ಇಟಲಿಯಾದ್ಯಂತ ಪಕ್ಷವರ್ತಿ (partisan) ಸಶಸ್ತ್ರ ದಳಗಳು ರಚನೆಗೊಂಡು ಗ್ಯಾರಿಬಾಲ್ಡಿ ಬ್ರಿಗೇಡ್ ಎಂಬ (ಇಟಲಿಯ ಇತಿಹಾಸ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ ಗ್ಯಾರಿಬಾಲ್ಡಿ ಗೌರವಾರ್ಥ) ಹೆಸರಲ್ಲಿ ಅಸ್ತಿತ್ವಕ್ಕೆ ಬಂತು. ಗೆರಿಲ್ಲಾ ಕಾರ್ಯಾಚರಣೆಗಳೊಂದಿಗೆ ಸಾಮೂಹಿಕ ಕಾರ್ಮಿಕ ವರ್ಗದ ಕಾರ್ಯಾಚರಣೆಗಳು ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದವು. ಮಾರ್ಚ್ 1943ರಲ್ಲಿ 3 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಪ್ರಮುಖ ಕೈಗಾರಿಕಾ ನಗರಗಳು ತುರಿನ್,ಮಿಲಾನ್ ಇತ್ಯಾದಿ ಕಡೆ ಮುಷ್ಕರ ನಡೆಸಿದರು. ಮಾರ್ಚ್ 1944ರಲ್ಲಿ 10 ಲಕ್ಷ ಕಾರ್ಮಿಕರು ಎಂಟು ದಿನಗಳ ಮುಷ್ಕರ ನಡೆಸಿದರು. ಇಟಲಿಯಾದ್ಯಂತ 3.5 ಲಕ್ಷ ಪಾರ್ಟಿಸಾನ್ ಹೋರಾಟಗಾರರು ಅಂದರೆ ಫ್ಯಾಸಿಸಂ ವಿರುದ್ಧ ಸಶಸ್ತ್ರ ಹೋರಾಟದಲ್ಲಿ ತೊಡಗಿದ್ದ ನಾಗರಿಕರಿದ್ದರು. ಅವರಲ್ಲಿ 2.10 ಲಕ್ಷ ಕಮ್ಯುನಿಸ್ಟರು. ಇದೊಂದು ಮಹತ್ವಪೂರ್ಣ ಸಂಗತಿ.

ಯುದ್ಧದ ಆರಂಭದಲ್ಲೇ ತುಳಿತಕ್ಕೆ ಒಳಗಾದ ಯುಗೊಸ್ಲಾವಿಯಾದಲ್ಲಿ ಕಮ್ಯುನಿಸ್ಟರು ಎಲ್ಲಾ ದೇಶಪ್ರೇಮಿ ಶಕ್ತಿಗಳನ್ನು ಒಂದುಗೂಡಿಸಲು ಮುಂದಾದರು. ಯುಗೊಸ್ಲಾವಿಯಾದ ಫ್ಯಾಸಿಸಂ-ವಿರೋಧಿ ರಾಷ್ಟ್ರೀಯ ವಿಮೋಚನಾ ಸೇನೆಯಲ್ಲಿ 7 ಲಕ್ಷಕ್ಕೂ ಹೆಚ್ಚು ಮಂದಿ, ಪಾರ್ಟಿಸಾನ್ ದಳಗಳ ಸದಸ್ಯರು ಭಾಗವಹಿಸಿದ್ದರು. ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಯುಗೋಸ್ಲಾವಿಯಾ ಜನರ ಹೋರಾಟ ಹೆಚ್ಚು ಮಹತ್ವಪೂರ್ಣವಾಗಿತ್ತು. ಏಕೆಂದರೆ ಯುದ್ಧದ ಮೊದಲ ಎರಡು ವರ್ಷಗಳಲ್ಲೇ ದೇಶದ ಬಹುಪಾಲು ಭಾಗವನ್ನು ವಿಮೋಚನೆಗೊಳಿಸುವಲ್ಲಿ ಅದು ಯಶಸ್ವಿಯಾಗಿತ್ತು, ಯುಗೋಸ್ಲಾವಿಯಾದ ಹೋರಾಟ ಒಂದು ಅತ್ಯಂತ ಶ್ರೇಷ್ಠ ಘಟನೆ. ಬೇಗನೇ ಅದಕ್ಕೆ ಅಂತರಾಷ್ಟ್ರೀಯ ಮಾನ್ಯತೆಯೂ ದೊರೆಯಿತು.

ಮಹಾನ್ ದಿಮಿತ್ರೋವ್‌ರ ದೇಶ ಬಲ್ಗೇರಿಯಾದಲ್ಲಿ ಜನಪ್ರಿಯ ವಿಮೋಚನಾ ಸೇನೆ ಮತ್ತು ಪಾರ್ಟಿಸಾನ್ ಘಟಕಗಳು ಆರಂಭದಿಂದಲೇ ಅಂದರೆ ಮಾರ್ಚ್ 1942ರಿಂದಲೇ ಸೋವಿಯೆತ್ ಒಕ್ಕೂಟದ ಮೇಲೆ ನಾಝಿಗಳು ಆಕ್ರಮಣ ನಡೆಸುವ ಮೊದಲೇ ನಾಝಿ ಆಕ್ರಮಣಕೋರರ ವಿರುದ್ಧ ಸೆಣಸಾಟ ನಡೆಸಿದ್ದವು. ಈ ಸೇನೆಯಲ್ಲಿ 3,00,500 ಹೋರಾಟಗಾರರಿದ್ದರು, 37 ತುಕಡಿಗಳು ಹಾಗೂ 11 ಬ್ರಿಗೇಡ್ ಗಳಿದ್ದವು. ಆಗಸ್ಟ್ 1943ರಲ್ಲಿ 'ಪಿತೃಭೂಮಿ ರಂಗ' ಎಂಬ ಸಂಯುಕ್ತ ರಂಗ ರಚನೆಗೊಂಡಿತು. ಇಲ್ಲಿಯ ನಿರಂತರ ಪಾರ್ಟಿಸಾನ್ ಸಮರ ಕೆಂಪು ಸೇನೆ ಜರ್ಮನಿಯ ಮೇಲೆ ಪ್ರಹಾರ ಮಾಡಲಾರಂಭಿಸಿದಾಗ ಇನ್ನಷ್ಟು ತೀವ್ರಗೊಂಡಿತು. ಸೆಪ್ಟೆಂಬರ್ 1944ರಲ್ಲಿ ಬಲ್ಗೇರಿಯಾದ ರಾಜಧಾನಿ ಸೋಫಿಯಾ ಜನತೆಯ ಸಾರ್ವತ್ರಿಕ ಸಶಸ್ತ್ರ ಬಂಡಾಯದ ದೃಶ್ಯ ಕಂಡಿತು. ಆ ನಗರ ವಿಮೋಚನೆಗೊಂಡಿತು.

1939ರಲ್ಲೇ ಜರ್ಮನರು ಕಿತ್ತುಕೊಂಡ ಜೆಕೋಸ್ಲೊವಾಕಿಯಾದಲ್ಲಿ ಆರಂಭದಿಂದಲೇ ಗುಲಾಮಗಿರಿಯ ವಿರುದ್ಧ ಜನರು ವಿವಿಧ ರೀತಿಗಳಲ್ಲಿ ಹೋರಾಡಿದರು. ನಾಝಿಗಳ ಕ್ರೂರ ದಮನ, ಸಾಮೂಹಿಕ ನೇಣು, ಭಯೋತ್ಪಾದನೆಗಳನ್ನು ಎದುರಿಸಬೇಕಾಗಿ ಬಂದರೂ ಜನ ಅತ್ಯಂತ ವೀರಾವೇಶದಿಂದ ಹೋರಾಡಿದರು. ಇದರಲ್ಲೂ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು. ಆಗಸ್ಟ್ 1944ರಲ್ಲಿ ಸ್ಲೋವಾಕ್ ಫ್ಯಾಸಿಸಂ-ವಿರೋಧಿ ಶಕ್ತಿಗಳ ರಾಷ್ಟ್ರೀಯ ಬಂಡಾಯ ಈ ಹೋರಾಟದಲ್ಲಿ ಒಂದು ಮಹತ್ವದ ಘಟ್ಟ. 1943 ರಿಂದ ಮೇ 5, 1945 ರಂದು ರಾಜಧಾನಿ ಪ್ರಾಹಾದ ವಿಮೋಚನೆಯವರೆಗೂ ಪಾರ್ಟಿಸಾನ್ ಸಮರ ಎಡೆಬಿಡದೆ ಮುಂದುವರೆಯಿತು.

ನಾಝೀ ಆಕ್ರಮಣಕ್ಕೊಳಗಾದ ಇತರ ದೇಶಗಳಲ್ಲೂ ಆಕ್ರಮಣಕೋರರ ವಿರುದ್ಧ ಹೋರಾಟದಲ್ಲಿ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು. ಬೆಲ್ಜಿಯಂನಲ್ಲಿ 50 ಸಾವಿರಕ್ಕೂ ಹೆಚ್ಚು ಪಾರ್ಟಿಸಾನ್ ಸೇನೆಯ ನೇತೃತ್ವವನ್ನು ಕಮ್ಯುನಿಸ್ಟರು ವಹಿಸಿದ್ದರು. ಮೂರು ವರ್ಷಗಳ ಸತತ ಕಾರ್ಯಾಚರಣೆಗಳ ನಂತರ ಆ ದೇಶದ ಪ್ರಧಾನ ನಗರ ಆಂಟ್‌ವರ್ಪ್‌ನಲ್ಲಿ ಸೆಪ್ಟೆಂಬರ್ 3, 1944ರಂದು ಒಂದು ಸಾಮೂಹಿಕ ಬಂಡಾಯ ನಡೆಯಿತು. ರುಮಾನಿಯಾದಲ್ಲಿ 1941ರಲ್ಲೇ 'ರಾಷ್ಟ್ರೀಯ ದೇಶಪ್ರೇಮಿ ರಂಗ' ರಚನೆಗೊಂಡು ಜರ್ಮನ್ ಆಕ್ರಮಣಕೋರರು ಹಾಗೂ ಅವರ ರುಮಾನಿಯನ್ ಪಿತೂರಿಕೋರರ ವಿರುದ್ಧ ಹೋರಾಟ ನಡೆಯಿತು. 23 ಆಗಸ್ಟ್ 1944 ರಲ್ಲಿ ಬಂಡಾಯ ನಡೆದು ಬುಖಾರೆಸ್ಟ್ ವಿಮೋಚನೆಗೊಂಡಿತು.

ಪೋಲೆಂಡ್, ಹಂಗೇರಿ ಹಾಗೂ ಅಲ್ಬೇನಿಯಾದಲ್ಲಿ ಜನತಾ ವಿಮೋಚನಾ ಸೇನೆಗಳು ಮತ್ತು ಸಂಯುಕ್ತ ರಾಷ್ಟ್ರೀಯ ಫ್ಯಾಸಿಸಂ-ವಿರೋಧಿ ರಂಗಗಳು 1941 ರಿಂದ ಕಾರ್ಯಾಚರಣೆಗಿಳಿದು ನಾಝಿಗಳ ಪರಾಭವದಲ್ಲಿ ಮಹತ್ವದ ಪಾತ್ರ ವಹಿಸಿದರು. ಗ್ರೀಸ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸಶಸ್ತ್ರ ಪಡೆಗಳು ಕಮ್ಯುನಿಸ್ಟರ ನೇತೃತ್ವದಲ್ಲಿ ಏಲಾಸ್ (ELAS) ಎಂಬ ಹೆಸರಿನ ದೇಶಪ್ರೇಮಿ ಸೇನಾಪಡೆ ಹಾಗೂ EAM ಎಂಬ ಹೆಸರಿನ ಒಂದು ಸಂಯುಕ್ತ ರಾಷ್ಟ್ರೀಯ ವಿಮೋಚನಾ ರಂಗ ರಚಿಸಿಕೊಂಡು ಜರ್ಮನ್‌ರನ್ನು ದೇಶದ ಹಲವು ಭಾಗಗಳಿಂದ ಒದ್ದೋಡಿಸಿದರು. ಮಹಾಯುದ್ಧದ ಉತ್ತರಾರ್ಧದಲ್ಲಿ ಬ್ರಿಟಿಶ್ ಮತ್ತು ಅಮೇರಿಕನ್ ಪಡೆಗಳು ಬಂದಿಳಿಯುವ ಮೊದಲೇ ಇದರಲ್ಲಿ ಅವರು ಯಶಸ್ವಿಯಾಗಿದ್ದರು.

ಜರ್ಮನಿಯೊಳಗೇ ನಾಝಿ- ವಿರೋಧಿ ಪ್ರತಿರೋಧ ಪಡೆಗಳು ನಡೆಸಿದ ಧೀರ ಹೋರಾಟ ಇಷ್ಟೊಂದು ವ್ಯಾಪಕವಾಗಿರದಿದ್ದರೂ ವಿಶೇಷ ಗಮನ ಸೆಳೆಯುವಂತದ್ದು. ಯಾವುದೇ ರೀತಿಯ ಭಿನ್ನಾಭಿಪ್ರಾಯವನ್ನು ಅತ್ಯಂತ ರಾಕ್ಷಸೀ ರೀತಿಯಲ್ಲಿ ದಮನ ಮಾಡುತ್ತಿದ್ದ ಸನ್ನಿವೇಶದಲ್ಲಿ ಅಮಾನುಷ ಕಿರುಕುಳಗಳ ಹಾಗೂ ಸಾವಿನ ಬೆದರಿಕೆಗಳ ನಿರಂತರ ಕರಾಳ ನೆರಳಿನಲ್ಲಿ ಕಮ್ಯುನಿಸ್ಟರು, ಸೋಶಲಿಸ್ಟರು, ಬುದ್ಧಿಜೀವಿಗಳು ಹಾಗೂ ಕೆಲವು ಕಾರ್ಮಿಕ ಗುಪ್ತ ಗುಂಪುಗಳು ಜರ್ಮನಿಯ ಪ್ರಮುಖ ನಗರಗಳಲ್ಲಿ ನಾಝಿ-ವಿರೋಧಿ ಪ್ರಚಾರದಲ್ಲಿ ತೊಡಗಿದವು. ಪ್ರತಿಯೊಂದು ಹಂತದಲ್ಲಿ ಸಾವು ಹಿಂಬಾಲಿಸುತ್ತಿದ್ದರೂ ಈ ನಿರ್ಭಯ ಹೋರಾಟಗಾರರು ತಮ್ಮ ಹೋರಾಟವನ್ನು ಮುಂದುವರೆಸಿದರು. ನಾಝಿಗಳ ಆಳ್ವಿಕೆಯಲ್ಲಿ 1.5 ಲಕ್ಷಕ್ಕೂ ಹೆಚ್ಚು ಕಮ್ಯುನಿಸ್ಟರು ಇಂತಹ ಅಮಾನುಷ ಕಿರುಕುಳಗಳಿಗೆ ಒಳಗಾದರು ಎಂದು ಲೆಕ್ಕ ಹಾಕಲಾಗಿದೆ. ನಾಝಿಗಳ ಕುಪ್ರಸಿದ್ಧ ಯಾತನಾ ಶಿಬಿರಗಳಲ್ಲಿ ಇನ್ನೂ ಸಾವಿರಾರು ಕಮ್ಯುನಿಸ್ಟರು ಅತ್ಯಂತ ಅಮಾನುಷ ರೀತಿಯಲ್ಲಿ ಮಾಯವಾದರು. ಜರ್ಮನ್ ಕಾರ್ಮಿಕ ವರ್ಗದ ಅತ್ಯಂತ ಶ್ರೇಷ್ಠ ಮುಖಂಡ ಕಾಂ. ಥೇಲ್‌ಮನ್‌ರನ್ನು ಇಂತಹ ಒಂದು ಯಾತನಾ ಶಿಬಿರದಲ್ಲಿ ನಿರ್ದಯ ರೀತಿಯಲ್ಲಿ ಕೊಲೆ ಮಾಡಲಾಯಿತು.

ಯುರೋಪಿನ ಕೆಲವು ದೇಶಗಳಲ್ಲಿ ಫ್ಯಾಸಿಸಂ ವಿರುದ್ಧ ಧೀರ ಪ್ರತಿರೋಧ ಆಂದೋಲನದ ಈ ಸಂಕ್ಷಿಪ್ತ ನೋಟದಿಂದ ಫ್ಯಾಸಿಸಂ ವಿರುದ್ಧ ಅತ್ಯಂತ ವೀರಾವೇಶದ, ಧೀರತನದ ಹೋರಾಟ ನಡೆಸಿದ್ದು ಕಮ್ಯುನಿಸ್ಟ್ ಆಂದೋಲನ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಪ್ರತಿಯೊಂದು ದೇಶದಲ್ಲೂ ಕಮ್ಯುನಿಸ್ಟರ ಅಪಾರ ತ್ಯಾಗ, ಬಲಿದಾನಗಳು ಫ್ಯಾಸಿಸಂ ಮುನ್ನಡೆಗೆ ಅತ್ಯಂತ ದೃಢವಾದ ತಡೆಯೊಡ್ಡಿದವರೆಂದರೆ ಕಮ್ಯುನಿಸ್ಟರು ಎಂದು ಚಾರಿತ್ರಿಕ ಸತ್ಯಕ್ಕೆ ಉಜ್ವಲ ಸಾಕ್ಷಿ.

ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಈ ಮಹಾನ್ ಕೊಡುಗೆಯನ್ನು ನಿರ್ಲಕ್ಷಿಸಲು, ಅದನ್ನು ಹೀಗಳೆಯಲು ಪ್ರಯತ್ನ ನಡೆಸುತ್ತಿರುವ ಇಂದಿನ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ರಕ್ಷಣೆಯಲ್ಲಿ ಹಾಗೂ ಫ್ಯಾಸಿಸಂನ್ನು ಕುಟ್ಟಿ ಪುಡಿ ಮಾಡುವಲ್ಲಿ ಕಮ್ಯುನಿಸ್ಟರ ಈ ಕೊಡುಗೆಯ ಆಳವಾದ ಮಹತ್ವವನ್ನು ನೆನಪಿಸಿಕೊಳ್ಳುವುದು ಅಗತ್ಯ. ಬಂಡವಾಳಶಾಹಿಯ ಅಮಾನವೀಯ ಸಮಾಜ-ವಿರೋಧಿ ಸ್ವರೂಪದಿಂದಾಗಿ ವಿಶ್ವವನ್ನು ಬಿಗಿಯಾಗಿ ಆಳವಾದ ಬಿಕ್ಕಟ್ಟು ಆವರಿಸಲಿರುವ ಸನ್ನಿವೇಶದಲ್ಲಿ ಫ್ಯಾಸಿಸಂ ಹೊಸ ಸ್ವರೂಪಗಳಲ್ಲಿ ಮತ್ತೆ ಮೂಡಿ ಬರುವ ಬೆದರಿಕೆಯನ್ನು ನಿರ್ಲಕ್ಷಿಸುವಂತಿಲ್ಲ, ಯಾವುದೇ ಸಮಯದಲ್ಲಿ ಯಾವುದೇ ರೀತಿಯಲ್ಲಿ ಫ್ಯಾಸಿಸಂ ಮೂಡಿಬಂದರೂ ಅದರ ವಿರುದ್ಧ ಹೋರಾಟದಲ್ಲಿ ಕಮ್ಯುನಿಸ್ಟರು ಯಾವುದೇ ಸನ್ನಿವೇಶದಲ್ಲೂ ಮುಂಚೂಣಿಯಲ್ಲಿರುತ್ತಾರೆ ಎಂಬುದನ್ನು ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂ ವಿರುದ್ಧ ದೃಢ ಹೋರಾಟದ ಇತಿಹಾಸ ಸಾಬೀತು ಪಡಿಸಿದೆ.